# ಕೃಷಿ ಕಾಯಕ

Volume - 8 Issue - 3 July to September 2018 Quarterly ₹ 25/-



ದಿನಾಂಕ 16.8.2018ರಂದು ನಿಧನರಾದ
ಮಾಜಿ ಪ್ರದಾನ ಮಂತ್ರಿ, ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯೀ
ಯವರಿಗೆ "ಕೃಷಿ ಕಾಯಕ" ಪತ್ರಿಕೆಯು
ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ







# ಸೃಷ್ಟಿಯ ವೈಚಿತ್ರ್ಯಗಳು







**ಸಂಪಾದಕ ಮಂಡಳಿ**

**ಸಂಪಾದಕರು :**
ಪದ್ಮಭೂಷಣ ಡಾ|| ಎಂ. ಮಹದೇವಪ್ಪ

**ಉಪ ಸಂಪಾದಕರು :**
ಡಾ|| ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ

**ಸಹ ಸಂಪಾದಕರು :**
ಪ್ರೊ|| ಎಂ. ರುದ್ರಾರಾಧ್ಯ
ಶ್ರೀ ಸಿದ್ಧಲಿಂಗಯ್ಯ ಬನ್ನಂಗಾಡಿ

**ಕಾರ್ಯದರ್ಶಿ :**
ಶ್ರೀ ಚಿದಾನಂದ ಎಸ್. ಮಠದ

**ಸದಸ್ಯರು :**
ಶ್ರೀ ಎ.ಎಸ್. ಸದಾಶಿವಯ್ಯ
ಡಾ|| ಚಿದಾನಂದ ಪಿ. ಮನ್ಸೂರ
ಡಾ|| ಎಸ್.ಬಿ. ದಂಡಿನ
ಡಾ|| ಟಿ.ಎಂ. ಮಂಜುನಾಥ
ಡಾ|| ಎನ್. ಕೃಷ್ಣಮೂರ್ತಿ
ಡಾ|| ಎ.ಎಸ್. ಕುಮಾರಸ್ವಾಮಿ
ಡಾ|| ವಸಂತಕುಮಾರ ತಿಮಕಾಪುರ
ಡಾ|| ಕೆ.ಸಿ. ಶಶಿಧರ
ಡಾ|| ಬಿ.ಎಸ್. ಹುಂಬರವಾಡಿ
ಡಾ|| ಎಂ.ಬಿ. ರಾಜೇಗೌಡ
ಡಾ|| ನಿರಂಜನಮೂರ್ತಿ
ಶ್ರೀ ಕೆ.ಎನ್. ಪುಟ್ಟಬುದ್ಧಿ
ಶ್ರೀ ಮಲೆಯೂರು ಗುರುಸ್ವಾಮಿ
ಡಾ|| ಅರುಣ್ ಬಳಮಟ್ಟಿ
ಶ್ರೀಮತಿ ನಿರ್ಮಲ ಯಲಿಗಾರ
ಕು|| ಹೆಚ್.ಜಿ. ಶೋಭಾ
ಶ್ರೀ ತ್ರಿಪುರಾಂತಕ

**ಕಲೆ :**
ಮೋಹನ್ ಕುಮಾರ ಎನ್.ಜಿ. ಮತ್ತು
ಇ.ಎಂ. ಕೃಷ್ಣಮೂರ್ತಿ

**ಜಾಹೀರಾತು ದರ**

| | | |
|---|---|---|
| **ಮುಖಪುಟ 4** | **ರೂ.** | 10,000.00 |
| **ಮುಖಪುಟ 2 & 3** | **ರೂ.** | 5,000.00 |
| **ಒಳಪುಟ** | **ರೂ.** | 3,000.00 |
| **ಒಳ ಅರ್ಧಪುಟ** | **ರೂ.** | 2,000.00 |

## ಈ ಸಂಚಿಕೆಯ ಅಂತರ್ಯದಲ್ಲಿ.....

1 ಸಂಪಾದಕೀಯ — **ಡಾ|| ಎಂ. ಮಹದೇವಪ್ಪ** 2–3

2 ಭೂತಾಯಿ — **ಶ್ರೀ ಗೊ.ರು. ಚನ್ನಬಸಪ್ಪ** 4

3. ಭವಿಷ್ಯದ ಹಣ್ಣು ಹಲಸು — **ಶ್ರೀಮತಿ ನೇತ್ರಾವತಿ ಎತ್ತಿನಮನಿ ಮತ್ತು ಡಾ|| ಅರುಣ್ ಬಳಮಟ್ಟಿ** 5–7

4. ಜೈವಿಕ ಇಂಧನ ಬೆಳೆಗಳು–ಕೃಷಿಕರ ಮುಂದಿನ ಅವಕಾಶಗಳು ಮತ್ತು ಸವಾಲುಗಳು — **ಡಾ|| ಎ.ಎಸ್. ಕುಮಾರ ಸ್ವಾಮಿ** 8–11

5. ಕೃಷಿಯಲ್ಲಿ ಆಧ್ಯಾತ್ಮ — **ಡಾ. ಕೆ.ಎಸ್. ಶಿವರಾಮ್** 11

6. ಸಾವಯವ ಕೃಷಿ ಬಗ್ಗೆ ಒಂದಿಷ್ಟು ಮಾಹಿತಿ — **ಎಸ್.ಜಿ. ಪಾಟೀಲ** 12–14

7. ಮಲ್ಲಿಗೆ ತೋಟದ ಯಜಮಾನಿ ಪ್ರಮಿಳಾ ಎತ್ತಿನಮನಿ — **ಕಿಶನ್ ರಾವ್ ಕುಲಕರ್ಣಿ ಮತ್ತು ಶೋಭಾ ಹೆಚ್.ಜಿ.** 15–20

8. ಬೆಲೆ ಅಪಾಯಗಳನ್ನು ಎದುರಿಸಲು ಒಂದು "ಮಾದರಿ ಒಪ್ಪಂದ ಕೃಷಿ ಕಾನೂನು" — **ಡಾ|| ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ** 20

9. ಯುವಜನತೆಯನ್ನು ವಾಪಾಸ್ಸು ಹಳ್ಳಿಗೆ ಕರೆತನ್ನಿ – ಬಜೆಟ್‌ನಲ್ಲಿ ಕೃಷಿ ಯುವನೀತಿ ಬೇಕಿತ್ತು — **ಶೋಭಾ.ಹೆಚ್.ಜಿ** 21

10. ಪಾರ್ಥೇನಿಯಂ ದೈತ್ಯ ಕಳೆಯ ಹಾವಳಿ, ಮೂರು ದಶಕಗಳ ಹಿಂದೆ ಮತ್ತು ಇಂದು — **ಡಾ|| ಎಂ. ಮಹದೇವಪ್ಪ** 22–23

11. ಸುಸ್ಥಿರ ಕೃಷಿ ಅಭಿವೃದ್ಧಿ ಮತ್ತು ಕೃಷಿ ಉದ್ದಿಮೆಗೆ ಪೂರಕವಾದ ಬಜೆಟ್ / ಆಯವ್ಯಯ — **ಪ್ರೊ|| ಶಿವಾನಂದ ಬಿ. ಹೊಸಮನಿ** 24–27

12. ಕೊಳಚೆ ನೀರನ್ನು ಉಪಚರಿಸುವ ಪರಿಸರ ಸ್ನೇಹಿ ಪರಿಹಾರಗಳು — **ಡಾ|| ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ** 28–29

13. ಅಖಂಡೇಶ್ವರ ವಚನಗಳಲ್ಲಿ ಕೃಷಿ ಮತ್ತು ಪಾರಮಾರ್ಥ — **ಡಾ|| ಬಿ. ಎಮ್. ಚಿತ್ತಾಪೂರ** 30–32

| ಚಂದಾ ದರ | ರೂ. |
|---|---|
| **ಪೋಷಕರು** (20 **ವರ್ಷದ ಅವಧಿಗೆ**) | 10,000/– |
| **ಸಂಘ–ಸಂಸ್ಥೆಗಳು** (10 **ವರ್ಷದ ಅವಧಿಗೆ**) | 10,000/– |
| **ವೈಯಕ್ತಿಕ ಆಜೀವ ಸದಸ್ಯತ್ವ** (20 **ವರ್ಷದ ಅವಧಿಗೆ**) | 2,000/– |
| 5 **ವರ್ಷಕ್ಕೆ** | 2,000/– |
| **ಬಿಡಿ ಸಂಚಿಕೆ** | 25/– |

**(ಕೃಷಿ ಕಾಯಕದಲ್ಲಿ ಲೇಖನ, ವಿಚಾರ, ವಿಶ್ಲೇಷಣೆಗಳಿಗೆ ಲೇಖಕರೇ ಜವಾಬ್ದಾರರು – ಸಂ.)**

**Printed and Published by :**
**All India Veerashaiva Mahasabha (R.)**
No.17/4, "Veerashaiva-Lingayath Bhavan", Ramanamaharshi Road,
Sadashivanagar, Bengaluru-560 080

**Printed at :**
**Sneha Printers**
# 16, 1st 'B' Cross, Sri Raghavendra Mutt Road, Papareddypalya,
11th Block, Nagarbhavi II Stage,
Bengaluru-560 072.

**Editor :**
**Dr. M. Mahadevappa**
"Samarasa", No.1576, 1st Cross
Chandra Layout,
Bengaluru-560 040

"KRISHI KAYAKA" Kannada Quarterly, July, Aug & Sept 2018. Reg.MAG(3)NPP/397/2010-2011

## ಸಂಪಾದಕೀಯ.....

**"ಇಂದಿಗೆ ಇನ್ಫರ್ಮೇಷನ್ ತಾಂತ್ರಿಕತೆ, ನಾಳೆಗೆ ಜೈವಿಕ ತಾಂತ್ರಿಕತೆ" ಅಟಲ್ ಬಿಹಾರಿ ವಾಜಪೇಯಿಯವರ ಕನಸು ನೆನಸಾಗಿಸಲು ಸರ್ಕಾರ ಪ್ರಯತ್ನಿಸಲಿ**

ಇದೀಗ ನಮ್ಮನ್ನು ಅಗಲಿದ ಮಾಜಿ ಪ್ರಧಾನಿ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿಯವರ ಆತ್ಮಕ್ಕೆ ಶಾಂತಿ ಕೋರುತ್ತ ಅನ್ನದಾತನ ಮೇಲೆ ಈ ಮಹಾ ನಾಯಕನಿಗಿದ್ದ ಕಾಳಜಿಯನ್ನು ಹಂಚಿಕೊಳಲು ಈ ವಿಶೇಷ ಲೇಖನ. ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿಯವರು ರಾಜ್ಯದ ಮತ್ತು ರಾಷ್ಟ್ರ ಮಟ್ಟದ ನಾಯಕರಾಗಿ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರದ ಅಭಿವೃದ್ಧಿಗೆ ನೀಡಿದ ಕೊಡುಗೆ ಅಳೆಯಲಾಗದಷ್ಟು ಎನ್ನುವುದನ್ನು ಯಾರೂ ಅಲ್ಲಗಳೆಯಲಾಗದು. ಅದರಲ್ಲಿ ಕೃಷಿ ಮತ್ತು ಕೃಷಿಕನ ಆರ್ಥಿಕ ಸ್ಥಿತಿ ಸುಧಾರಿಸುವ ದಿಕ್ಕಿನಲ್ಲಿ ಪರಿಣಾವ ಕಾರಿಯಾಗಿರುವ ಕೆಲವು ಸತ್ಯಾಂಶಗಳನ್ನು ಇಲ್ಲಿ ಉಲ್ಲೇಖಿಸುವುದೇ ಈ ಅಂಕಣದ ಮೂಲ ಉದ್ದೇಶ.

ಅಟಲ್‌ಜೀ ಅವರು ಭಾರತವನ್ನು ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಿ ವಿಶ್ವದಲ್ಲೇ ಮುಂದಿನ ಸಾಲಿಗೆ ತರುವ ದೃಢ ನಿಶ್ಚಯ ಮಾಡಿದ್ದರು ಎಂಬುದಕ್ಕೆ ಸಾಕ್ಷಿಗಳು ಅನೇಕ. ಅವುಗಳ ಪೈಕಿ ಒಂದು ಘೋಷಣೆ ಹೀಗಿತ್ತು; ಭಾರತಕ್ಕೆ "ಭಾರತಕ್ಕೆ ಇಂದಿಗೆ ಮಾಹಿತಿ ತಂತ್ರಜ್ಞಾನ, ಭಾರತಕ್ಕೆ ನಾಳೆಗೆ ಜೈವಿಕ ತಂತ್ರಜ್ಞಾನ". (Information technology is for India today, and biotechnology is for Bharat tomorrow) ಎಂಬುದು ಅವರ ಗುರಿಯಾಗಿತ್ತು ಮತ್ತು ಅವರ ಸ್ಪಷ್ಟ ನಿಲುವೂ ಆಗಿತ್ತು.

ಅಟಲ್‌ಜೀ ಯವರಿಗೆ ತೋರಿಸಬಹುದಾದ ಗೌರವದತ್ತ ಚಿಂತನೆಮಾಡಿದ್ದೇ ಆದರೆ, ಒಂದು ಸಲಹೆ ಇಲ್ಲಿದೆ. ಅಭಿವೃದ್ಧಿಯೊಂದನ್ನೇ ಗುರಿಯಾಗಿಟ್ಟು ಕೊಂಡಿರುವ ಹಾಗೂ ಈಗಾಗಲೇ ವಿಶ್ವಮಟ್ಟದಲ್ಲಿ ಖ್ಯಾತಿ ಗಳಿಸಿರುವ ನಮ್ಮ ಈಗಿನ ಪ್ರಧಾನ ಮಂತ್ರಿ ಶ್ರೀ ಮೋದಿಜೀಯವರು ಮತ್ತು ರಾಜ್ಯ ಸರ್ಕಾರಗಳು ಅರಿವಿನ ಕೊರತೆ ಕಾರಣದಿಂದ ರೈತೋಪಯೋಗಿ ಜೈವಿಕ ತಾಂತ್ರಿಕತೆ ಸಂಶೋಧನೆ 2010ರಿಂದ ಸ್ಥಗಿತಗೊಂಡಿರುವುದನ್ನು ಅಥವಾ ಮಂದ ಗತಿಯಲ್ಲಿರುವುದನ್ನು ಗಮನಿಸಿ ಅದಕ್ಕೆ ಮರುಚಾಲನೆ ನೀಡಿ ಮುನ್ನಡೆಸಬೇಕಾಗಿದೆ. ಅದರಿಂದ ಅನ್ನದಾತನಿಗಾಗಬಹುದಾದ ಲಾಭ ಊಹೆಗೂ ಮೀರದ್ದಾಗಿರುತ್ತದೆ. ಅವರು ಮಾಡಬೇಕಾಗಿರುವುದಿಷ್ಟೇ: ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಭಾರತದ ಹೆಸರಾಂತ ಕೃಷಿ ವಿಜ್ಞಾನಿಗಳು ಒಂದು ದಶಕದ ಮೇಲೆ ಶ್ರಮಿಸಿ ಅಭಿವೃದ್ಧಿ ಪಡಿಸಿರುವ 'ಬಿಟಿ' ಬದನೆ ನೂತನ ತಳಿಗಳನ್ನು ಮತ್ತು 'ಬಿಟಿ'ಸಾಸಿವೆ ನೂತನ ತಳಿಗಳನ್ನು ರೈತರು ಬೆಳೆಯಲು ಸರ್ಕಾರದ ವತಿಯಿಂದ ಸೂಕ್ತ ನೀತಿಯನ್ನು ಜಾರಿಗೊಳಿಸಿ ರೈತರು ಅವುಗಳನ್ನು ಬೆಳೆದು ಲಾಭ ಪಡೆಯಲು ಸುಸೂತ್ರವಾದ ಮಾರ್ಗವನ್ನು ಕಲ್ಪಿಸುವುದು. ಇದಕ್ಕಾಗಿ ಬೇಕಾದ ಸಂಶೋಧನೆಯ ವಾಸ್ತವ ಸಂಗತಿಗಳು/ಅಂಕಿಅಂಶಗಳು ಸರ್ಕಾರಿ ಸಂಸ್ಥೆಗಳಲ್ಲಿ ಸಿದ್ಧವಿದ್ದು ಸುಮಾರು 8 ವರ್ಷಗಳಿಂದಲೂ ನಾಡಿನ ರೈತರು ಅದರಿಂದ ಪಡೆಯಬಹುದಾದ ಲಾಭದಿಂದ ವಂಚಿತರಾಗಿರುವುದು ವಿಷಾದನೀಯ. ಆಶ್ಚರ್ಯದ ವಿಷಯವೆಂದರೆ ಫಿಲಿಪ್ಪೈನ್ಸ್, ಬಾಂಗ್ಲಾದೇಶ್ ಮುಂತಾದ ಕೆಲವು ದೇಶಗಳು ನಮ್ಮ ಅಂಕಿಅಂಶಗಳನ್ನು ಉಪಯೋಗಿಸಿ ಕೊಂಡು ಈ ನೂತನ ತಳಿಗಳ ಪ್ರಯೋಜನ ಪಡೆದುಕೊಳ್ಳುತ್ತಿರುವುದು ಕುರುಡರ ಕಣ್ಣಿಗೂ ಬೀಳುವಂತಿದೆ! ಇಂತಹ ತಾಂತ್ರಿಕತೆಗಳ ಲಾಭ ನಮ್ಮ ದೇಶದ ರೈತರಿಗೆ ಲಭ್ಯವಿಲ್ಲದಿರುವುದು ಎಂತಹ ವಿಪರ್ಯಾಸ! ಈ ತಾಂತ್ರಿಕತೆಯ ಲಾಭವನ್ನು ಬಾಂಗ್ಲಾದೇಶದ ಅಕ್ಕ ಪಕ್ಕದ ರಾಜ್ಯಗಳಲ್ಲಿರುವ ನಮ್ಮ ರೈತರು 'ಬಿಟಿ'ಬದನೆ ತಳಿಗಳನ್ನು ಕದ್ದು ತರಿಸಿ ಬೆಳೆಯುತ್ತಿರುವುದು ನಮ್ಮ ದೇಶದ ಅಸಮರ್ಥತೆಯನ್ನು ತೋರುತ್ತದೆ!

ಇದಕ್ಕೆ ಪರಿಹಾರ ಹುಡುಕುವ ಸೂತ್ರವೊಂದನ್ನು ನಮ್ಮ ಈಗಿನ ಪ್ರಧಾನಿಗಳು ಮತ್ತು ರಾಜ್ಯದ



ನಾಯಕರುಗಳು ಹುಡುಕಬೇಕಾಗಿದೆ. ಇದೇ ಮಾರ್ಗದಲ್ಲಿ 'ಬಿಟಿ' ಹತ್ತಿಯನ್ನು ಬಿಡುಗಡೆ ಮಾಡಿದ ಪರಿಣಾಮವಾಗಿ ಇಂದು ಭಾರತದಲ್ಲಿ ಈ ಹತ್ತಿಯು ಶೇಕಡ 95ರಷ್ಟು ಪ್ರದೇಶದಲ್ಲಿ ಬೆಳೆಯಲ್ಪಡುತ್ತಿದ್ದು ಹತ್ತಿ ಉತ್ಪಾದನೆಯಲ್ಲಿ ಹಾಗೂ ಹತ್ತಿಯನ್ನು ರಫ್ತು ಮಾಡುವುದರಲ್ಲಿ ಐದನೇ ಸ್ಥಾನದಲ್ಲಿದ್ದ ಭಾರತವು ಇಡೀ ವಿಶ್ವದಲ್ಲೇ ಎರಡನೇ ಸ್ಥಾನಕ್ಕೇರಿರುವುದನ್ನು ಇಲ್ಲಿ ಸ್ಮರಿಸಬಹುದು. ಇನ್ಫೋಸಿಸ್ ಚೇರ್‌ಪರ್ಸನ್ ಡಾ॥ ಅಶೋಕ್ ಗುಲಾಟಿ ಮತ್ತು ಡಾ॥ ಕಾವೇರಿ ಗಂಗೂಲಿ ಯವರು ಸಲ್ಲಿಸಿರುವ ವರದಿ ಪ್ರಕಾರ 2003–04 ರಿಂದ 2016–17 ರವರೆಗೆ ಭಾರತವು ಹತ್ತಿ ಹಾಗೂ ಹತ್ತಿ–ಎಳೆಯನ್ನು ರಫ್ತು ಮಾಡಿರುವ ಮೂಲಕ 67 ಬಿಲಿಯನ್ ಡಾಲರ್ ಗಳಷ್ಟು ವಿದೇಶಿ ವಿನಿಮಯದಲ್ಲಿ ಉಳಿತಾಯ ವಾಗಿರುವುದು ಇಲ್ಲಿ ಉಲ್ಲೇಖಾರ್ಹ ("From Green to Gene Revolution," First Published on: August 23, 2018). ಇದಲ್ಲದೆ, ಪ್ರತಿ ರೈತರಿಗೆ ದೊರಕಿರುವ ಆಧಾಯದ ಜೊತೆಗೆ ಸಿಕ್ಕಿರುವ ಲಾಭವನ್ನೂ ಗಣನೆಗೆ ತೆಗೆದುಕೊಂಡರೆ ಯಾರಿಗೇ ಆದರೂ ಅಚ್ಚರಿ ಉಂಟಾಗದಿರದು! ಗುಜರಾತ್ ರಾಜ್ಯದಲ್ಲಿ 2003–04ರಲ್ಲಿ ಅಂದಿನ ಆರ್ಥಿಕ ಸ್ಥಿತಿ ಸುಧಾರಣೆಗೆ ಕಾರಣವಾದ ಮೂರು ಮುಖ್ಯ ಅಂಶಗಳೆಂದರೆ, 'ಚೆಕ್ ಡ್ಯಾಮ್'ಗಳ ಮೂಲಕ ನೀರಾವರಿ, ರೈತರ ಬೇಡಿಕೆ ಪೂರೈಸುವಷ್ಟು ಹಗಲಿರುಳು 'ವಿದ್ಯುಚ್ಛಕ್ತಿ/ಇಂಧನ' ಸರಬರಾಜು ಮತ್ತು ಇಡೀ ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಬಿಟಿ ಹತ್ತಿಯ ಬಿಡುಗಡೆ. ಇದೇ ಅವಧಿಯಲ್ಲಿ ಕೃಷಿಯಲ್ಲಿನ 8% ವಾರ್ಷಿಕ ಬೆಳವಣಿಗೆ ವರದಿಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಅಂದರೆ, ಇಡೀ ರಾಷ್ಟ್ರದ ಹತ್ತಿ ಉತ್ಪಾದನೆಯಲ್ಲಿ ಕ್ರಾಂತಿ ತರಲು ಗುಜರಾತ್ ರಾಜ್ಯದ ಕ್ರಾಂತಿ ಮಾರ್ಗದರ್ಶಿಯಾಯಿತು.

ಅಂತಯೇ, 2002ರಲ್ಲಿ ಹಾಲಿನ ಉತ್ಪಾದನೆಯಲ್ಲಿ ಮತ್ತೊಮ್ಮೆ ಕ್ರಾಂತಿಯಾಗಿ ಪ್ರಥಮ ಸ್ಥಾನಕ್ಕೆ ಏರಲು ಶ್ರೀಮಾನ್ ವಾಜಪೇಯಿಯವರು ಹಾಲು ಉತ್ಪಾದನೆ ಕ್ಷೇತ್ರದಲ್ಲಿ ತಂದ 'ಲೈಸೆನ್ಸ್ ರದ್ದತಿ'ಯೇ ಕಾರಣವಾಯಿತು. ಮತ್ತು ಭಾರತದ ಹಾಲು ಉತ್ಪಾದನೆ ವಿಶ್ವದಲ್ಲೇ ಮೊದಲನೇ ಸ್ಥಾನಕ್ಕೆ ಏರಿತು(2017–18 ರಲ್ಲಿ, ಭಾರತ 176.4 ಮಿಲಿಯನ್ ಮೆಟ್ರಿಕ್ ಟನ್; ಅಮೇರಿಕ 98 ಮಿ.ಮೆ.ಟ.; ಚೈನಾ 45 ಮಿ.ಮೆ.ಟ.). ಇದೇ ರೀತಿ ಖಾಸಗಿಯಾಗಿ ಕಬ್ಬು ಅರೆಯುವ ಪ್ರಮಾಣ 1998ರ 'ಡಿ–ಲೈಸೆನ್ಸ್' ಮಾಡಿದ ಕಾರಣದಿಂದ 1998ರಲ್ಲಿ 5.7 ಲಕ್ಷ ಟನ್‌ಗಳಿದ್ದ ಪ್ರಮಾಣ 2016–17ರಲ್ಲಿ 16 ಲಕ್ಷ ಟನ್‌ಗೆ ಏರಿತು. ಇದರಿಂದಾಗಿ ಸಹಕಾರಿ ಕ್ಷೇತ್ರದಲ್ಲಿ ಕಬ್ಬು ಅರೆಯುವ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲು ಸಾಧ್ಯವಾಯಿತು.

ಶ್ರೀ ಮೋದಿಯವರು ಮತ್ತು ರಾಜ್ಯ ಸರ್ಕಾರಗಳು ಇದೇ ದಾರಿಯಲ್ಲಿ ಮುಂದುವರಿದು ಬಹಳ ವರ್ಷಗಳಿಂದ ಪ್ರೋತ್ಸಾಹದ ಕೊರತೆಯಿಂದಾಗಿ ನೆನೆಗುದಿಯಲ್ಲಿರುವ ಜೈವಿಕ ತಾಂತ್ರಿಕತೆ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ರಾಷ್ಟ್ರದ/ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದು ಸುಸಮಯ. ಇಂತಹ ಉದಾಹರಣೆಯನ್ನು ಈಗ ರಾಷ್ಟ್ರಾದ್ಯಂತ ಅನುಕರಿಸಿ ರೈತರ ಆತ್ಮ ಹತ್ಯೆಯನ್ನು ಕನಿಷ್ಠ ಮಟ್ಟಕ್ಕಿಳಿಸುವುದು ಅಟಲ್ ಜೀ ಯವರಿಗೆ ಗೌರವ ಸಲ್ಲಿಸಿದಂತಾದೀತು.

"ವಂಶವಾಹಿ ಸಂಪಾದನೆ (Gene editing)" ಎಂಬ ಇತ್ತೀಚೆಗೆ ಕಂಡು ಹಿಡಿಯಲಾದ ಜೈವಿಕ ತಾಂತ್ರಿಕತೆಯನ್ನು ಕಾಡು ಜಾತಿ ಟೊಮ್ಯಾಟೊ ಪ್ರಭೇಧದ ಮೇಲೆ ಪರೀಕ್ಷಿಸಿ ಸಫಲರಾಗಿದ್ದು, ಈ ತಾಂತ್ರಿಕತೆಯ ಮೂಲಕ ರೋಗ ಮತ್ತು ಕೀಟಗಳಿಗೆ ನಿರೋಧಕ ಸಾಮರ್ಥ್ಯ ತುಂಬುವುದರ ಜೊತೆಗೆ ಬರ ಪ್ರದೇಶಗಳಲ್ಲಿ ಎಡಬಿಡದೇ ನೀರಿನ ಕೊರತೆಯಿಂದಾಗಿ ಬೆಳೆ ನಾಶವಾಗುವ ಸಮಸ್ಯೆಗೆ ನಿರೋಧಕ ಶಕ್ತಿ ತುಂಬಲೂ ಸಾಧ್ಯವೆಂದು ದೃಢೀಕರಿಸಲಾಗಿದೆ.

ಇದೇ ತಾಂತ್ರಿಕತೆಯು ಪ್ರಾಣಿಗಳಿಗೂ ಅನ್ವಯವಾಗುತ್ತದೆ. ಚೈನಾದಲ್ಲಿ ಜೇಡರ ಹುಳುವಿನ ವರ್ಣತಂತುವಿನ ಒಂದು ವಂಶವಾಹಿಯನ್ನು ತೆಗೆದು ರೇಷ್ಮೆ ಹುಳುವಿನ ವರ್ಣತಂತುವಿಗೆ ಜೋಡಿಸುವುದರ ಮೂಲಕ ನೂಲಿನ ಹೊಳಪು ಹಾಗೂ ವಿಸ್ತರಣಾ ಸಾಮರ್ಥ್ಯವನ್ನು ಹೆಚ್ಚಿಸಬಹುದೆಂದು ತಿಳಿದುಬಂದಿದೆ. 1906ರಲ್ಲಿ ಪ್ರಥಮವಾಗಿ ಬೆಳೆಯಲ್ಪಟ್ಟ 'ಜಿ.ಎಂ' ತಳಿಗಳು 2016ನೇ ಇಸವಿಯಲ್ಲಿ 24 ದೇಶಗಳಲ್ಲಿ (19 developing and five industrial countries) 185.1 ಮಿಲಿಯನ್ ಹೆಕ್ಟೇರಿನಿಂದ 2017ರಲ್ಲಿ 189.8 ಮಿಲಿಯನ್ ಹೆಕ್ಟೇರು ಪ್ರದೇಶದಲ್ಲಿ ಬೆಳೆಯಲಾಯಿತು. ಇದಲ್ಲದೆ 2017ರಲ್ಲಿ ಸುಮಾರು 43 'ಜಿ.ಎಂ' ತಳಿಗಳನ್ನು ಬೆಳೆಯದ ದೇಶಗಳೂ ಸಹ ಆಹಾರ ಮತ್ತು ಆಹಾರೇತರ ಬಳಕೆಗೆ ನೀತಿ ನಿಯಮಗಳನ್ನು ಪಾಲಿಸಿ ಆಹಾರ, ಜಾನುವಾರುಗಳಿನ್ನು ಸಾಕಲು ಮತ್ತು ಮೌಲ್ಯೀಕರಣಕ್ಕಾಗಿ 'ಜಿ.ಎಂ' ತಳಿಗಳನ್ನು ಬೆಳೆಯುವ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ. ಹೀಗೆ ಬೆಳೆದ 'ಜಿ.ಎಂ' ತಳಿಗಳ ಪೈಕಿ 50% ಸೋಯ ಅವರೆ ತಳಿಗಳೇ ಅಗಿರುವುದು ಗಮನಾರ್ಹ. ಪ್ರದೇಶವಾರು ಸೋಯಾ ಅವರೆ 77%, ಹತ್ತಿ 80%, ಮುಸುಕಿನ ಜೋಳ 32%. ಮತ್ತು ಕನೋಲ 30% ಎಂದು ವರದಿಯಾಗಿದೆ (Agri Genomics Research News, Ruairi MacKenzie, Technology Networks,2018) ಇಲ್ಲಿ ಉಲ್ಲೇಖನೀಯ. ಹೀಗೆ ಅಭಿವೃದ್ಧಿಪರ ರಾಷ್ಟ್ರಗಳಲ್ಲಿ ಸೋಯಾ ಅವರೆ ಮತ್ತು ಮುಸುಕಿನ ಜೋಳದ 'ಜಿ.ಎಂ' ತಳಿಗಳು ಆಯಾ ದೇಶಗಳ ಜಾನುವಾರಗಳು ಮತ್ತು ಮೀನುಗಾರಿಕೆಗೂ ಬೇಕಾದ ಬೇಡಿಕೆ ಪೂರೈಸಲು ನೆರವಾಗಿರುವುದು ಗಮನಾರ್ಹ.

ಭಾರತದಲ್ಲಿ ಇಂತಹ ವಿಜ್ಞಾನಿಗಳಿಗೆ – 'ವಂಶವಾಹಿ ಸಂಪಾದನೆ' ಅದರಲ್ಲೂ CRISPR ತಾಂತ್ರಿಕತೆ ಬಳಕೆಯಲ್ಲಿ ಪಾಂಡಿತ್ಯ ಪಡೆದವರಿಗೆ ಕೊರತೆಯಿಲ್ಲ. ಆದ್ದರಿಂದ ಅಮೆರಿಕ ಮತ್ತು ಚೈನಾ ದೇಶಗಳ ನಂತರ ಭಾರತವೇ ಈ ತಾಂತ್ರಿಕತೆಯಿಂದ ಲಾಭ ಪಡೆಯಲು ಶಕ್ತರಾಗಿರುವ ಸತ್ಯ ಇಲ್ಲಿ ಉಲ್ಲೇಖಾರ್ಹ. ಮತ್ತೊಂದು ಗಮನಿಸಬೇಕಾದ ವಿಷಯವೆಂದರೆ ಭಾರತದಲ್ಲಿ ಈವರೆಗೆ "ಜೈವಿಕ ತಾಂತ್ರಿಕತೆ"ಯೊಳಗೆ ಔಷಧೀಯ ತಾಂತ್ರಿಕತೆಗೆ ದೊರಕಿರುವಷ್ಟು ಪ್ರೋತ್ಸಾಹ ಕೃಷಿ ಜೈವಿಕ ತಾಂತ್ರಿಕತೆಗೆ ದೊರೆಕಿಲ್ಲ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು– ಎರಡರಲ್ಲೂ ಮತ್ತು ಜಂಟಿ ಯೋಜನೆಗಳನ್ನು ತುಲನೆ ಮಾಡಿನೋಡಿದಾಗ ಕೃಷಿ ಜೈವಿಕ ತಾಂತ್ರಿಕತೆಗೆ ದೊರಕಿರುವುದು ಕವಡೇ ಕಾಸು ಎನ್ನಬಹುದು!

ಮತ್ತೊಂದು ಅಂಶವೆಂದರೆ, ಭಾರತವೇ ಆಗಲಿ ಅಥವಾ ಯಾವುದೇ ರಾಷ್ಟ್ರವಾಗಲಿ ಅಲ್ಲಿ ಪ್ರೋತ್ಸಾಹದಾಯಕ ರಾಷ್ಟ್ರ ನೀತಿ ಜಾರಿ ಇಲ್ಲದಿದ್ದಲ್ಲಿ ಯಾವುದೇ ತಾಂತ್ರಿಕತೆ ಫಲಕಾರಿಯಾಗುವುದು ಅಸಂಭವ! ಈಗಿನ ಸರ್ಕಾರಗಳು (ಕೇಂದ್ರ ಮತ್ತು ರಾಜ್ಯ) ಇದನ್ನು ಗಮನಿಸಿ ಸೂಕ್ತ ನೀತಿ ಜಾರಿಗೆ ತರುವುದು ಈಗಿನ ರೈತರ ಸಾಲಮನ್ನಾ ಮಾಡುವ ದಿಕ್ಕಿನಲ್ಲಿ ಬಹಳ ಫಲಕಾರಿಯಾಗುವುದರಲ್ಲಿ ಅನುಮಾನವಿಲ್ಲ. 'ಜಿ.ಎಂ' ತಳಿಗಳ ಬಿಡುಗಡೆಮಾಡಲು ಬೇಕಾದ ಸುರಕ್ಷತಾ ನಿಯಮಗಳನ್ನು ರಾಷ್ಟ್ರದ ಜೈವಿಕ ತಾಂತ್ರಿಕತೆ ವೈಜ್ಞಾನಿಕ ಅನುಭವ ಮತ್ತು ಸಂಪತ್ತು ವ್ಯರ್ಥವಾಗದೆ ಸದ್ಬಳಕೆಯಾಗುವ ದಿಕ್ಕಿನಲ್ಲಿ ಈಗ ಚುಕ್ಕಾಣಿ ಹಿಡಿದಿರುವ ಹಾಗೂ ಕ್ರಿಯಾತ್ಮಕವಾಗಿ ಸ್ಪಂದಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕ್ಷೇತ್ರದಲ್ಲಿರುವ ಅಡಚಣೆಗಳಿಗೆ ತೆರೆ ಎಳೆಯುವುವರೆಂಬ ನಂಬಿಕೆಯಿಂದ ಈ ಲೇಖನ. ಮಾನ್ಯ ಪ್ರಧಾನ ಮಂತ್ರಿ ಮೋದಿಜೀಯವರು ಮತ್ತು ರಾಜ್ಯ ಸರ್ಕಾರಗಳು ಇತ್ತೀಚೆಗೆ ಜೈವಿಕ ತಾಂತ್ರಿಕತೆಗೆ ಹೆಚ್ಚು ಗಮನ ಮತ್ತು ಪ್ರೋತ್ಸಾಹ ನೀಡುತ್ತಿರುವುದು ಆಶಾದಾಯಕವಾಗಿದ್ದು ಈ ದಿಕ್ಕಿನಲ್ಲಿ ವಿಳಂಬವಿಲ್ಲದೆ ಹೆಜ್ಜೆ ಇಡುವರೆಂಬ ನಂಬಿಕೆ ಕೃಷಿ ವಿಜ್ಞಾನಿಗಳಿಗಿದೆ.

**ಡಾ॥ ಎಂ. ಮಹದೇವಪ್ಪ**

ಚಿಂತನ – ಮಂಥನ



ಶ್ರೀ ಗೊ. ರು. ಚನ್ನಬಸಪ್ಪ

# ಭೂತಾಯಿ

ಬೆಳಗಾಗಿ ನಾನೆದ್ದುಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆವಂತ–ಭೂತಾಯ
ಎದ್ದೊಂದು ಗಳಿಗೆ ನೆನದೇನ.

ಹಳ್ಳಿಯ ಹೆಣ್ಣು ಬೆಳಗ್ಗೆ ಎದ್ದಕೂಡಲೇ ಮೊದಲು ನೆನೆಯುವುದು ಭೂಮಿತಾಯಿಯನ್ನು. ಆಕೆಯ ಕಷ್ಟ–ಸುಖಗಳಿಗೆ ಆಗುವ ದೈವಗಳು ಒಂದೆರಡಲ್ಲ. ಸುತ್ತ ಮುತ್ತ ನೂರೆಂಟಿವೆ. ಮಡಕೆದೈವ, ಮೊರದೈವ, ಕಲ್ಲುದೈವ, ಹಣೆಗೆದೈವ, ಬಿಲ್ಲು ನಾರಿದೈವ, ಕೊಳಗ ದೈವ, ಗಿಣ್ಣಲುದೈವ ಅಷ್ಟೇ ಏಕೆ, ಬೀಸುವ ಕಲ್ಲು, ಕುಟ್ಟುವ ಒನಕೆ, ಗುಡಿಸುನ ಪೊರಕೆ ಹೀಗೆ ಮನೆಯಲ್ಲಿ, ಹಾದಿಯಲ್ಲಿ, ಬೀದಿಯಲ್ಲಿ, ಕಾಲಿಡಲಿಂಬಿಲ್ಲದಷ್ಟು ದೈವಗಳಿದ್ದರೂ ಭೂಮಿತಾಯಿಯನ್ನೇ ಮೊದಲು ನೆನೆಯುತ್ತಾಳೆ. ಏಕೆಂದರೆ ಈ ಎಲ್ಲಕ್ಕೂ ಭೂಮಿಯೇ ಆಧಾರ. ಭೂಮಿತಾಯಿ ಸಕಲ ಜೀವರಾಶಿಗಳಿಗೂ ಆಶ್ರಯದಾತೆ, ಅನ್ನದಾತೆ, ನಮ್ಮ ಬದುಕಿನ ಎಲ್ಲಾ ವ್ಯವಹಾರಗಳೂ ನಡೆಯುವುದು ಭೂಮಿಯ ಮೇಲೆ.

ಒಂಭತ್ತು ತಿಂಗಳ ಕಾಲ ತಾಯಿಯ ಗರ್ಭದಲ್ಲಿದ್ದು ಮಾನವ ರೂಪುತಾಳಿ ಈ ಲೋಕಕ್ಕೆ ಬಂದ ನಂತರ ಬಾಲ್ಯ, ಯೌವನ, ವಾರ್ಧಕ್ಯ ಮತ್ತು ವೃದ್ಧಾಪ್ಯದ ಅವಸ್ಥೆಗಳನ್ನೆಲ್ಲ ಕಳೆಯುವುದಕ್ಕೆ ಈ ಭೂಮಿಯೇ ವೇದಿಕೆ. ಎದ್ದೆದ್ದು ನಿಂದರೂ, ಗೆದ್ದಾಡಿ ಬಂದರೂ, ಗುದ್ದಾಡಿ ಸೋತರೂ ಬಿದ್ದು ಮಲಗಿದರೂ ಭೂಮಿಯೇಆಶ್ರಯ. ಬದುಕಿನ ಹಾದಿಯನ್ನು ನಡೆದು ಚಿರಶಾಂತಿಗಾಗಿ ಕಣ್ಣು ಮುಚ್ಚಿದಾಗಲೂ ತನ್ನ ಗರ್ಭದಲ್ಲಿ ನಮ್ಮನ್ನು ಇಟ್ಟುಕೊಳ್ಳುತ್ತಾಳೆ ಭೂತಾಯಿ. ಆದುದರಿಂದಲೇ ಭೂಮಿಯನ್ನು 'ಮಾತೃಭೂಮಿ' 'ಜನ್ಮಭೂಮಿ' ಎಂದುಕರೆಯುವುದು. ತನ್ನ ಮಾತೃಭೂಮಿಯ ಘನತೆ ಗೌರವಗಳಿಗೆ ಎಳ್ಳಷ್ಟು ಕುಂದು ಬಂದರೂ ಯಾವ ರಾಷ್ಟ್ರೀಯನೂ ಸಹಿಸುವುದಿಲ್ಲ. ಉಳಿದೆಲ್ಲವೂ 'ಚರ ಆಸ್ತಿ' ಎನಿಸಿದರೆ, ಭೂಮಿ. 'ಸ್ಥಿರ ಆಸ್ತಿ'. ಚರ ಆಸ್ತಿಸಳೆಷ್ಟಿದ್ದರೂ ತ್ಯಾಗಮಾಡಬಲ್ಲೆವು. ಆದರೆ ಮಾತೃಭೂಮಿಯ ಒಂದಂಗುಲ ನೆಲವನ್ನೂ ಅನ್ಯರಿಗೆ ಬಿಟ್ಟುಕೊಡಲಾರೆವು. ಮಾತೃಭೂಮಿಯ ಸಂಬಂಧ ಅಂತಹುದು.



ಈ ನೆಲ ಹಗೆ–ನೆಗೆಗಳ, ಧಗೆ–ಹೊಗೆಗಳ ತಾಣ. ಬಡ–ಜೀವದ ವಸತಿ: ಸತತ ಕೃಷಿಯ ಪ್ರಕೃತಿ ಭೂದೇವಿ, ಆಕೆಯ ಗರ್ಭದಲ್ಲಿ ಅಡಗಿರುವುದು ಅನಂತ. ಇಲ್ಲಿ ಪ್ರೇತ ಮನೆ ಮಾಡಿದೆ, ಕಾಮ ಕೇಳಿ ಆಡಿದೆ, ಹೋಮದ ಹೊಗೆಯಾಡಿದೆ. ಸೋಮ ಸೂರೆಯಾಗಿದೆ, ಕ್ಷಾಮ ಡಾಮರಗಳು ಕುಣಿದಾಡಿವೆ. ನೀರು ಹರಿಯುವುದು ಈ ನೆಲದ ಮೇಲೆ. ಮರಗಿಡ ಬಳ್ಳಿಗಳ ಬೇರಿಗೆ ಇದು ನೆಲೆ. ಪ್ರಾಣಿ–ಪಕ್ಷಿ, ಹುಳ–ಜಂತು–ಹೀಗೆ ಸಕಲ ಜೀವರಾಶಿಗಳಿಗೆ ಗೂಡು, ಬೀಡು. ಬೆಟ್ಟ ಗುಡ್ಡಗಳಿಗೆ ಭೂಮಿಯೇ ಅಡಿಪಾಯ. ಮುಗಿಲು ನಕ್ಕರೆ, ಮುನಿದರೆ ಅದರ ಮೊದಲ ಪರಿಣಾಮ ಭೂಮಿಯ ಮೇಲೆ. ಇದಕ್ಕೆ ಸಾಗರದ ಸೋದರಿಕೆ: ಚಂದ್ರ ಸೂರ್ಯರ ಸ್ನೇಹ: ವಾಯುವಿನೊಡನೆ ವ್ಯವಹಾರ: ಇದು ಅಗ್ನಿ–ಜಲಗಳ ಕುಂಭ. ಭೂಮಿಯ ಮಹತ್ತು ಬೃಹತ್ತು ಅಷ್ಟಿಷ್ಟಿಲ್ಲ: ಅದೇ ಏನೆಲ್ಲ. ಅದಕ್ಕಾಗಿಯೇ ನಮ್ಮ ಹಳ್ಳಿಯ ಹೆಣ್ಣು ಎದ್ದಗಳಿಗೆಯಲ್ಲೇ ಭೂಮಿಯನ್ನು ನೆನೆಯುವುದು. ಭೂಮಿತಾಯಿ ಹಳ್ಳಿಯ ಹೆಣ್ಣಿಗೆ ಹತ್ತಿರವಾಗಿರುವುದು–ಆಕೆ ಎಳ್ಳು ಜೀರಿಗೆ ಬೆಳೆದು ಕೊಟ್ಟು ಸಕಲ ಜೀವರಾಶಿಯನ್ನೂ ಸಾಕುತ್ತಿರುವುದರಿಂದ. ಪಾಪವಿರಲಿ, ತಾಪವಿರಲಿ ಎಲ್ಲವನ್ನೂ ಸಹಿಸಿಕೊಂಡು ನಮ್ಮನ್ನು ಸಾಕುವ ಭೂಮಿಗಿಂತ ಮಿಗಿಲಾದ ಮೊದಲ ದೈವ ಆಕೆಗೆ ಬೇರೆ ಕಾಣಿಸಿಲ್ಲ. ಮೊದಲು ಭೂಮಿತಾಯಿಯನ್ನು ನೆನೆದು ನಂತರ ಉಳಿದ ದೈವಗಳ ಪ್ರಾರ್ಥನೆ, ಪೂಜೆ.

# ಭವಿಷ್ಯದ ಹಣ್ಣು ಹಲಸು

**ಶ್ರೀಮತಿ ನೇತ್ರಾವತಿ ಎತ್ತಿನಮನಿ (ಗೃಹ ವಿಜ್ಞಾನಿ) ಮತ್ತು ಡಾ॥ ಅರುಣ್ ಬಳಮಟ್ಟಿ (ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು), ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು**

ಹಲಸು ಬಡವರ ಪಾಲಿನ ಹಸಿವು ನೀಗಿಸುವ ಕಾಮಧೇನು. ಮೇಲ್ಮೈ ಮುಳ್ಳುಗಳಿಂದ ಕೂಡಿದ್ದರೂ ಸಹ, ಸಿಹಿ ರುಚಿಯನ್ನು ಹೊಂದಿರುವ ಹಣ್ಣು ಇದು. ತಿನ್ನುತ್ತಿದ್ದರೆ, ಇನ್ನೂ ತಿನ್ನಬೇಕನಿಸುವಷ್ಟು ರುಚಿಕರವಾಗಿದೆ. ಮುಳ್ಳೊಂದು ಹೊರತುಪಡಿಸಿದರೆ ಹಣ್ಣಿನ ಎಲ್ಲ ಭಾಗಗಳೂ ವಿವಿಧ ಖಾದ್ಯಗಳ ತಯಾರಿಕೆಗೆ ಸೂಕ್ತವಾಗಿವೆ. ಇದು ಪೌಷ್ಟಿಕಾಂಶಗಳ ಆಗರವಾಗಿದ್ದರೂ ಸಹ ಭಾರತದಲ್ಲಿ ಇದರ ಬಳಕೆ ಕಡಿಮೆಯಿದೆ. ಹಲಸನ್ನು ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಅಡುಗೆಗಳಲ್ಲಿ ಬಳಸುವರು. ಹಲಸಿನ ಕಾಯಿ ಮತ್ತು ಹಣ್ಣು ಎರಡನ್ನೂ ಬಳಸುವುದರ ಜೊತೆಗೆ ಬೀಜಗಳೂ ಸಹ ಹೆಚ್ಚು ಪೌಷ್ಟಿಕಾಂಶ ಯುಕ್ತವಾಗಿರುವುದರಿಂದ ಅವುಗಳನ್ನು ಬಳಸುವುರು. ಭವಿಷ್ಯದಲ್ಲಿ ಬಹಳ ಬೇಡಿಕೆ ಹೊಂದಲಿರುವ ಹಲಸು ರೈತರ ಪಾಲಿಗೆ ಬ್ಯಾಂಕ್‌ನಲ್ಲಿ ಹಣ ಕೂಡಿಟ್ಟಂತೆಯೆ ಸರಿ. ನೀವೂ ಹಲಸು ಬೆಳೆಸಿ, ಹಲಸಿನ ಕ್ರಾಂತಿ ಮಾಡಬಹುದು.



ಇಂಥ ಹಲಸಿನ ಹಲವು ತಳಿಗಳು ಬೇರೆ ಬೇರೆ ಸ್ವಾದ ಹೊಂದಿದ್ದು, ನಿಮಗೆ ಇಷ್ಟವಾಗುವ ತಳಿಗಳನ್ನು ಬೆಳೆಯಬಹುದು. ಹಲಸಿನಲ್ಲಿ ಸಕ್ಕರೆ ಮತ್ತು ಜೀವಸತ್ವಗಳು ಹಾಗೂ ಖನಿಜ ಲವಣಗಳು ಹೆಚ್ಚಿನ ಪ್ರಮಾಣದಲ್ಲಿದ್ದು, ಬೀಜದಲ್ಲಿ ಸಾರಜನಕ, ಶರ್ಕರಪಿಷ್ಟ ಮತ್ತು ಖನಿಜಾಂಶಗಳಿವೆ. ಅನೇಕ ಔಷಧೀಯ ಗುಣಗಳನ್ನು ಹೊಂದಿರುವ ಹಲಸು ಭವಿಷ್ಯದ ಹಣ್ಣೆಂದರೆ ತಪ್ಪಾಗಲಾರದು. ಆಫ್ರಿಕದಂತಹ ದೇಶಗಳಲ್ಲಿ ಹಲಸು ಆಹಾರ ಭದ್ರತೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.



ನಮ್ಮ ದೇಶ ಹಲಸಿನ ಮೂಲವಾಗಿದ್ದು, ಮಲೆನಾಡು ಮತ್ತು ಕರಾವಳಿ ಪ್ರದೇಶಗಳಿಗೆ ಸೂಕ್ತವಾಗಿದ್ದು, ಇನ್ನುಳಿದ ಪ್ರದೇಶಗಳಲ್ಲಿ ಕೂಡ ಸಾಧಾರಣವಾಗಿ ಬೆಳೆಯುತ್ತದೆ. ಕೇರಳ ರಾಜ್ಯದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಹಲಸನ್ನು ಬೆಳೆಯುವರು. ಆಳವಾದ ಕೆಂಪುಗೋಡು ಮಣ್ಣೂ ಮತ್ತು ಮರಳು ಮಿಶ್ರಿತ ಫಲವತ್ತಾದ ಮಣ್ಣು ಹಲಸು ಬೆಳೆಯಲು ಅತೀ ಸೂಕ್ತ. ಹೆಚ್ಚು ಕಡಿಮೆಯಾಗುವ ಭೂಮಿಯೊಳಗಿನ ನೀರಿನ ಮಟ್ಟ ಈ ಬೆಳೆಗೆ ಯೋಗ್ಯವಲ್ಲ. ಜೂನ್–ಜುಲೈ ತಿಂಗಳುಗಳು ನಾಟಿಗೆ ಸೂಕ್ತ. ನಾಲ್ಕರಿಂದ ಐದು ವರ್ಷಗಳಲ್ಲಿ ಮರಗಳು ಕಾಯಿ ಬಿಡಲು ಪ್ರಾರಂಭಿಸುತ್ತವೆ. ಪ್ರತಿ ಗಿಡಕ್ಕೆ 50–250 ಹಣ್ಣು



ಸಿಗುತ್ತವೆ. ಒಂದು ಹಣ್ಣಿಗೆ 50 ರಿಂದ 100 ರೂ ಬೆಲೆಯೆಂದರೆ, ರೈತರಿಗೆ ಹೆಚ್ಚು ಖರ್ಚಿಲ್ಲದೆ ಅಧಿಕ ಲಾಭ ಸಿಗುತ್ತದೆ. ಫಸಲು ಸಿಗಲು ಹೆಚ್ಚಿನ ಸಮಯ ಹಿಡಿಯುವುದರಿಂದ ಅಂತರ ಬೆಳೆ ಬೇಸಾಯ ಮಾಡಬಹುದು. ಬಾಳೆ, ಅನಾನಸ್, ನಿಂಬೆ ಮುಂತಾದ ಹಣ್ಣು ಇಲ್ಲವೇ ತರಕಾರಿ ಬೆಳೆಯಬಹುದು. ಹಲಸು ಬೆಳೆಯುವವರು ತಳಿಗಳ ಬಗ್ಗೆ ಸ್ಪಷ್ಟತೆ ಹೊಂದಿ ನಂತರ ಬೆಳೆಯುವುದು ಅವಶ್ಯಕವಾಗಿದೆ. ಹಲಸಿನಲ್ಲಿ ಅನೇಕ ಬಗೆಯ ತಳಿಗಳಿದ್ದು, ಯಾವ ತಳಿ, ರುಚಿ ಹೇಗಿದೆ ಎಂದು ತಿಳಿದು ಬೆಳೆಯುವುದು ಸೂಕ್ತ. ಸಾಂಪ್ರದಾಯಿಕ ತಳಿಗಳಾದ ಬಕ್ಕೆ ಮತ್ತು ತುಳುವ (ಅಂಬಲಿ) ಉತ್ತಮ ಜಾತಿಯದ್ದಾಗಿವೆ. ಕೊಟ್ಟಿಗೆ ಬಕ್ಕೆ, ಚಂದ್ರ ಬಕ್ಕೆ, ಕೆಸಿನ್ಮನೆ ಬಕ್ಕೆ, ಅಮ್ಮಿನಹಳ್ಳಿ ಬಕ್ಕೆ, ಮುಂಡಿಗೆ ಜಡ್ಡಿ ಬಕ್ಕೆ, ರುದ್ರಾಕ್ಷಿ ಬಕ್ಕೆ ಅಲ್ಲದೇ ಗೆಜ್ಜೆ ಹಲಸು, ಜಾಣಗೆರೆ ಹಲಸು, ಕರಾವಳಿಯ ರುದ್ರಾಕ್ಷಿ, ಬಯಲು ಸೀಮೆ ಚಂದ್ರ, ಕೇರಳದ ಮುಟ್ಟಂ, ಮಹಾರಾಷ್ಟ್ರದ ಸಿಂಗಾಪುರಿ, ಮೇಣರಹಿತ ಹಲಸು, ಸದಾನಂದ ಹಲಸು, ಲಾಲ್‌ಬಾಗ್, ಮಧುರ, ಆಲ್ ಸೀಸನ್, ಉತ್ತಮ್, ಜಿಕೆವಿಕೆ ಹೀಗೆ ಅನೇಕ ಬಗೆಯ ತಳಿಗಳು ವಿಭಿನ್ನ ಗಾತ್ರ, ರುಚಿ ಮತ್ತು ಬಣ್ಣ ಹೊಂದಿವೆ.

ಹಲಸು ಹೆಚ್ಚಿನ ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಬೇಡದೆ ಬೆಳೆಯುವ ಹಣ್ಣು. ಗಿಡ ನೆಡುವಾಗ ಹಸಿರೆಲೆ ಗೊಬ್ಬರ ಮತ್ತು ಕೊಟ್ಟಿಗೆ ಗೊಬ್ಬರ ಹಾಕಬೇಕು. ಹಲಸಿನ ತೊಳೆಗೆ ಬಾಳೆಹಣ್ಣು, ಜೇನುತುಪ್ಪ ಮತ್ತು ಏಲಕ್ಕಿ ಮಿಶ್ರಣ ಮಾಡಿ ಸೇವಿಸುವುದರಿಂದ ದುರ್ಬಲ ನರಗಳಿಗೆ ಬಲ ಬರುತ್ತದೆ. ಕಿಡ್ನಿಯ ಶುದ್ಧೀಕರಣ ಮತ್ತು ಪಿತ್ತಶಮನಕ್ಕೂ ಹಲಸು ರಾಮಬಾಣ. ಹಲಸು ಕ್ಯಾನ್ಸರ್‌ನಿಂದ ಹಿಡಿದು ದೇಹದ ಬೊಜ್ಜು ಕಡಿಮೆ ಮಾಡುವ ವರೆಗಿನ ಅನೇಕ ರೀತಿಯಾದ ಕಾಯಿಲೆಗಳನ್ನು ನಿಯಂತ್ರಣ ಮಾಡುವ ಸಾಮರ್ಥ್ಯವನ್ನು ಹೊಂದಿದೆ.

**ಕ್ಯಾನ್ಸರ್ ಗುಣಪಡಸುವಿಕೆ:** ಹಲಸಿನ ಆ್ಯಂಟಿ ಅಕ್ಸಿಡೆಂಟ್ ಮತ್ತು ಫೈಟೊ ಪೋಷಕಾಂಶಗಳನ್ನು ಹೇರಳವಾಗಿ ಹೊಂದಿದೆ; ಜೊತೆಗೆ ಜೀವಸತ್ವ ಸಿ ಹೊಂದಿರುವುದರಿಂದ ಹಲಸು ವಿವಿಧ ತರಹದ ಕ್ಯಾನ್ಸರ್‌ಗಳಾದ ಶ್ವಾಸಕೋಶ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಗ್ಯಾಸ್ಟ್ರಿಕ್ ಕ್ಯಾನ್ಸರ್, ಚರ್ಮದ ಕ್ಯಾನ್ಸರ್ ಮತ್ತು ಪ್ರಾಸ್ಟೇಟ್ ಕ್ಯಾನ್ಸರ್‌ಗಳನ್ನು ಗುಣ ಪಡಿಸುವ ಸಾಮರ್ಥ್ಯ ಹೊಂದಿದೆ. ಈ ಗುಣಗಳನ್ನು ಹೊಂದಿರುವುದರಿಂದ ಜೀವಕೋಶಗಳ ಹಾನಿಗೆ ಚಿಕಿತ್ಸೆ ನೀಡಿ ರೋಗ ನಿರೋಧಕತೆ ಹೆಚ್ಚಾಗಲು ಸಹಾಯಕವಾಗಿದೆ.

**ತೂಕ ಕಡಿಮೆ ಮಾಡುವ ಮಧ್ಯವರ್ತಿ:** ಇತ್ತೀಚೆಗೆ ಸ್ಥೂಲಕಾಯ ಹೊಂದಿದವರ ಸಂಖ್ಯೆ ಜಾಸ್ತಿಯಾಗುತ್ತಿದ್ದು, ಹಲಸು ಕೊಬ್ಬು ರಹಿತವಾಗಿದ್ದು ಕಡಿಮೆ ಕ್ಯಾಲರಿ (ಶಕ್ತಿ) ಯನ್ನು ಹೊಂದಿರುವುದರಿಂದ ದೇಹದ ತೂಕ ಕಡಿಮೆಯಾಗಲು ಸಹಕಾರಿಯಾಗಿದೆ. ಇತರೆ ಪೋಷಕಾಂಶಗಳೂ ಸಹ ಹೇರಳ ವಾಗಿರುವುದರಿಂದ ಸೇವಿಸುವವರಿಗೆ ಅನೇಕ ರೀತಿಯ ಉಪಯೋಗಗಳಿವೆ.

**ರಕ್ತದೊತ್ತಡವನ್ನು ಕಡಿಮೆ ಮಾಡುವುದು:** ಹಲಸು ಹೆಚ್ಚಿನ ಪ್ರಮಾಣದಲ್ಲಿ ಪೊಟ್ಯಾಷಿಯಂನ್ನು ಹೊಂದಿರುವುದರಿಂದ, ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸುವುದು, ಇದರಿಂದ ಹೃದಯಾಘಾತ, ಪಾರ್ಶ್ವವಾಯು ಮತ್ತು ಹೃದಯಕ್ಕೆ ಸಂಬಂಧಿಸಿದ ರೋಗಗಳ ಪ್ರಮಾಣ ಕಡಿಮೆಯಾಗುವುದು.

**ಜೀರ್ಣಕ್ರಿಯೆಯನ್ನು ಸುಧಾರಿಸುವುದು:** ಹಲಸನ್ನು ಪ್ರತಿ ನಿತ್ಯ ಸೇವಿಸುವುದರಿಂದ ಅದರಲ್ಲಿರುವ ಅಧಿಕ ನಾರಿನಾಂಶದಿಂದಾಗಿ (3.6 ಗ್ರಾಂ/100 ಗ್ರಾಂ) ಜೀರ್ಣಕ್ರಿಯೆಯು ಸುಧಾರಿಸುವುದು. ಇದನ್ನು ಜಾಸ್ತಿ ಪ್ರಮಾಣದಲ್ಲಿ ಸೇವಿಸಿದರೂ ಸಹ ಹೊಟ್ಟೆ ನೋವು ಬರುವುದಿಲ್ಲ ಮತ್ತು ಕರುಳಿನ ಚಲನೆಯನ್ನು ಸುಧಾರಿಸುವುದು ಅಲ್ಲದೇ ಹಾನಿಕಾರಕ ರಾಸಾಯನಿಕಗಳಿಂದ ದೊಡ್ಡ ಕರುಳನ್ನು ರಕ್ಷಿಸುವುದು.

**ನಿದ್ರಾಹೀನತೆಯನ್ನು ಗುಣಪಡಿಸುವುದು:** ಹಲಸು ಮ್ಯಾಗ್ನೇಶಿಯಂ ಮತ್ತು ಕಬ್ಬಿಣಾಂಶವನ್ನು ಹೇರಳವಾಗಿ ಹೊಂದಿರುವುದರಿಂದ ನಿದ್ರೆಯ ಗುಣಮಟ್ಟವನ್ನು ಸುಧಾರಿಸುವುದರ ಮೂಲಕ ನಿದ್ರಾಹೀನತೆಯ ಸಮಸ್ಯೆಗಳನ್ನು ಗುಣಪಡಿಸುವುದು.

**ಮಧುಮೇಹಿಗಳ ಸ್ನೇಹಿ:** ಹಲಸು ಸಿಹಿಯಾಗಿದ್ದರೂ ಸಹ ಇದನ್ನು ಸೇವಿಸಿದಾಗ ಸಕ್ಕರೆಯು ನಿಧಾನವಾಗಿ ರಕ್ತನಾಳಗಳಲ್ಲಿ ಹೀರಲ್ಪಡುವುದರಿಂದ ಮಧುಮೇಹಿಗಳು ಇದನ್ನು ಸೇವಿಸುವುದರ ಮೂಲಕ ಆರೋಗ್ಯದ ಎಲ್ಲ ಉಪಯೋಗಗಳನ್ನು ಪಡೆಯಬಹುದು.

**ಕಣ್ಣು ಮತ್ತು ಚರ್ಮ ನಿರ್ವಹಣೆ:** ಹಲಸಿನಲ್ಲಿ ಜೀವಸತ್ವ ಎ ಅಧಿಕವಾಗಿರುವುದರಿಂದ ಕಣ್ಣಿನ ಉತ್ತಮ ದೃಷ್ಟಿಗೆ ಸಹಕಾರಿಯಾಗಿದೆ. ಇದು ಸೂರ್ಯನ ಶಾಖದಿಂದ ಉಂಟಾಗುವ ಚರ್ಮದ ಹಾನಿಯನ್ನು ತಡೆಗಟ್ಟುವುದರ ಜೊತೆಗೆ ಸುಕ್ಕುಗಟ್ಟುವುದನ್ನು ಸಹ ತಡೆಯುವುದು.

**ಹುಣ್ಣುಗಳನ್ನು ಗುಣಪಡಿಸುವುದು:** ಹುಣ್ಣುಗಳನ್ನು ಗುಣಪಡಿಸುವ ಔಷಧಿಗಳು ಅನೇಕ ಅಡ್ಡ ಪರಿಣಾಮಗಳನ್ನು ಹೊಂದಿರುವುದರಿಂದ, ಹಲಸು ಹುಣ್ಣುಗಳ ಸಮಸ್ಯೆಗಳನ್ನು ವಾಸಿ ಮಾಡುವ ಅತ್ಯುತ್ತಮ ಆಹಾರವಾಗಿದೆ. ಏಕೆಂದರೆ ಇದು ಶಕ್ತಿಯುತ ಆ್ಯಂಟಿ ಸೆಪ್ಟಿಕ್, ಆ್ಯಂಟಿ ಆಕ್ಸಿಡೆಂಟ್, ಆ್ಯಂಟಿ ಅಲ್ಸರೇಟ್ಯುವ್ ಮತ್ತು ಆ್ಯಂಟಿ ಇನ್‌ಫ್ಲಮೇಟರಿ ಗುಣಗಳನ್ನು ಹೊಂದಿದೆ.

**ಮೂಳೆಗಳ ಭದ್ರತೆಗಾಗಿ:** ಹಲಸು ಕ್ಯಾಲ್ಸಿಯಂನ ಒಳ್ಳೆಯ ಮೂರಕವಾಗಿದೆ. ಆದ್ದರಿಂದ ಉತ್ತಮ ಮೂಳೆಗಳಿಗಾಗಿ ಹಲಸು ತಿನ್ನುವುದನ್ನು ಹೆಚ್ಚಾಗಿ ಶಿಫಾರಸ್ಸು ಮಾಡುವರು. ಇದು ಜೀವಸತ್ವ ಸಿ

ಮತ್ತು ಮ್ಯಾಗ್ನೆಶಿಯಂ ಹೊಂದಿರುವುದರಿಂದ ಕ್ಯಾಲ್ಸಿಯಂ ಹೀರುವಿಕೆಗೆ ಸಹಾಯಕವಾಗಿದೆ.

**ನರಮಂಡಲದ ಪುಷ್ಟಿವರ್ಧನ:** ಹಲಸು ಇದು ಮುಖ್ಯವಾಗಿ ಥಯಾಮಿನ್ ಮತ್ತು ನಯಾಸಿನ್‌ಗಳನ್ನು ಹೊಂದಿರುವುದರಿಂದ ದಣಿವು, ಒತ್ತಡ ಮತ್ತು ಸ್ನಾಯುಗಳ ಬಲಹೀನತೆಯನ್ನು ಹೋಗಲಾಡಿಸುವುದು. ಇದು ಪರಿಪೂರ್ಣ ಶಕ್ತಿಯ ಆಗರವಾಗಿದೆ.

ಹೀಗೆ ಹತ್ತು ಹಲವು ಉಪಯುಕ್ತ ಗುಣಗಳನ್ನು ಹೊಂದಿದ್ದರೂ ಸಹ ಹಲಸಿನ ಬಳಕೆ ಕಡಿಮೆಯಿದೆ. ಹಲಸನ್ನು ನಿಮ್ಮ ಆಹಾರದಲ್ಲಿ ಸೇರಿಸಿ ಆರೋಗ್ಯವನ್ನು ಹೆಚ್ಚಿಸಿಕೊಳ್ಳಿ.



**ಪ್ರತಿ 100 ಗ್ರಾಂ ಹಲಸಿನ ಹಣ್ಣಿನಲ್ಲಿರುವ ಪೋಷಕಾಂಶಗಳು**

| ಪೋಷಕಾಂಶಗಳು | ಪ್ರಮಾಣ |
|---|---|
| ಶಕ್ತಿ | 88.0 ಕಿ.ಕ್ಯಾಲರಿ |
| ಶರ್ಕರಪಿಷ್ಟ | 19.8 ಗ್ರಾಂ |
| ಕೊಬ್ಬು | 0.1 ಗ್ರಾಂ |
| ರಂಜಕ | 41.0 ಮಿ.ಗ್ರಾಂ |
| ಕ್ಯಾಲ್ಸಿಯಂ | 20.0 ಮಿ. ಗ್ರಾಂ |

ಹಲಸಿನಿಂದ ಹಪ್ಪಳ, ಚಿಪ್ಸ್, ನಿಪ್ಪಟ್ಟು, ಚಟ್ನಿ, ಬೊಂಡ, ಮಂಚೂರಿ ಇತ್ಯಾದಿ ಉತ್ಪನ್ನಗಳನ್ನು ತಯಾರಿಸಬಹುದು ಜೊತೆಗೆ ಸ್ಕ್ವಾಷ್, ಕಸ್ಟರ್ಡ್, ಕೇಕ್, ಜಾಮ್, ಕ್ಯಾಂಡಿ ಹಾಗೂ ಐಸ್‌ಕ್ರೀಮ್‌ಗಳ ತಯಾರಿಕೆಯಲ್ಲೂ ಸಹ ಬಳಸಬಹುದು. ಸಕ್ಕರೆ ದ್ರಾವಣದಲ್ಲಿ ಅನೇಕ ದಿನಗಳವರೆಗೆ ಕೆಡದಂತೆ ಶೇಖರಿಸಿಡಬಹುದು. ಹಲಸಿನ ಬೀಜಗಳನ್ನು ಹುರಿದು ಇಲ್ಲವೆ ಬೇಯಿಸಿ ಉಪ್ಪನ್ನು ಸೇರಿಸಿ ಸೇವಿಸಬಹುದು ಇಲ್ಲವೆ ಚಾಕಲೇಟ್ ತಯಾರಿಕೆಯಲ್ಲಿ ಸುಹಾಸನೆಗಾಗಿ ಮತ್ತು ಪೌಡರ್ ರೂಪದಲ್ಲಿ ಅನೇಕ ಆಹಾರಗಳ ತಯಾರಿಕೆಯಲ್ಲಿ



ಬಳಸುವುದರ ಮೂಲಕ ಹಲಸಿನ ಮೌಲ್ಯವರ್ಧನೆಯನ್ನು ಮಾಡಿ ಹೆಚ್ಚಿನ ಆದಾಯ ಗಳಿಸಲು ಅವಕಾಶವಿದೆ. ಹೀಗೆ ವಿವಿಧ ರೀತಿಯಲ್ಲಿ ಹಲಸಿನ ಉಪಯೋಗಗಳನ್ನು ಪಡೆಯ ಬಹುದಾಗಿದ್ದು, ಭವಿಷ್ಯದ ಹಣ್ಣಾದ ಹಲಸನ್ನು ಬೆಳೆದು ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.



## ಕೃಷಿ ಮತ್ತು ಬೆಳೆ ರೋಗ ವಿಷಯಗಳ ಸಹಕಾರಕ್ಕಾಗಿ ಭಾರತ ಮತ್ತು ಇಟಲಿ ನಡುವೆ ತಿಳಿವಳಿಕೆ ಒಪ್ಪಂದ

**ಶೋಭಾ ಹೆಚ್.ಜಿ.**

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಭಾರತ ಮತ್ತು ಇಟಲಿಯ ನಡುವೆ ಕೃಷಿ ಮತ್ತು ಬೆಳೆ ರೋಗ ವಿಷಯಗಳ ಸಹಕಾರಕ್ಕಾಗಿ ತಿಳಿವಳಿಕೆ ಒಪ್ಪಂದಕ್ಕೆ (ಎಂ.ಓ.ಯು.) ಅಂಕಿತ ಹಾಕಲು ತನ್ನ ಅನುಮೋದನೆ ನೀಡಿದೆ. ಇದು 2018ರ ಜನವರಿಯಲ್ಲಿ ಅವಧಿ ಮುಗಿಯಲಿರುವ ಹಾಗೂ 2008ರ ಜನವರಿಯಲ್ಲಿ ಅಂಕಿತ ಹಾಕಲಾಗಿದ್ದ ತಿಳಿವಳಿಕೆ ಒಪ್ಪಂದವನ್ನು ಬದಲಾಯಿಸಲಿದೆ. ಈ ತಿಳಿವಳಿಕೆ ಒಪ್ಪಂದವು ಬೆಳೆ ರೋಗ, ಕೃಷಿ ಉತ್ಪಾದನೆ ಕ್ಷೇತ್ರದಲ್ಲಿ ಮತ್ತು ಪಶು ಸಂಗೋಪನೆ, ಕೃಷಿ ಸಂಶೋಧನೆ, ಆಹಾರ ಸಂಸ್ಕರಣೆ ಮತ್ತು ಮತ್ತು ಎರಡೂ ಕಡೆಯವರು ಸಮ್ಮತಿಸುವ ಇತರ ಹೆಚ್ಚುವರಿ ಕ್ಷೇತ್ರಗಳು ಸೇರಿದಂತೆ ವಿಸ್ತೃತ ಶ್ರೇಣಿಯ ಇತರ ವಲಯಗಳ ಸಹಕಾರಕ್ಕೆ ಅವಕಾಶ ನೀಡುತ್ತದೆ. ಈ ತಿಳಿವಳಿಕೆ ಒಪ್ಪಂದದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಪರಿಸ್ಥಿತಿ, ತಾಂತ್ರಿಕ ವಿನಿಮಯ ಬಲವರ್ಧನೆ ಮತ್ತು ಕೃಷಿ ಯಾಂತ್ರೀಕರಣ/ಕೃಷಿ ವ್ಯವಸ್ಥೆ ಮತ್ತು ಕೃಷಿ ಕೈಗಾರಿಕೆ ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಉತ್ಪಾದನಾ ಸಹಕಾರ, ತಾಂತ್ರಿಕ ತಡೆಗಳ ನಿವಾರಣೆ ಮತ್ತು ಆಧುನಿಕ ವೈಜ್ಞಾನಿಕ ಸಂಶೋಧನೆ ಮತ್ತು ತಂತ್ರಜ್ಞಾನ ಇತ್ಯಾದಿ ಸೇರಿದಂತೆ ಪಶುಸಂಗೋಪನೆ ಕ್ಷೇತ್ರದಲ್ಲಿನ ಅನುಭವಗಳ ವಿನಿಮಯಕ್ಕೆ ಅವಕಾಶಗಳಿವೆ. ಈ ತಿಳಿವಳಿಕೆ ಒಪ್ಪಂದವು ಕೃಷಿ ಕ್ಷೇತ್ರದಲ್ಲಿನ ದ್ವಿಪಕ್ಷೀಯ ವಿನಿಮಯ, ಕೃಷಿ ಸಹಕಾರ ಕುರಿತ ದೀರ್ಘ ಕಾಲೀನ ಉಪಕ್ರಮ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಂಟಿ ಕಾರ್ಯ ಗುಂಪು ರಚಿಸಲು ಅವಕಾಶ ಕಲ್ಪಿಸುತ್ತದೆ ಮತ್ತು ನಿರ್ದಿಷ್ಟ ಜಂಟಿ ಪ್ರಕ್ರಿಯೆಗಳ ಮೂಲಕ ರಫ್ತು ಸರಕುಗಳಲ್ಲಿ ಬೆಳೆ ರೋಗದ ಅಪಾಯ ತಗ್ಗಿಸಲು ಸಹಕಾರವನ್ನು ಉತ್ತೇಜಿಸುತ್ತದೆ. ಇದು ಎರಡೂ ದೇಶಗಳ ಸರ್ಕಾರಿ ಸಂಸ್ಥೆಗಳು, ವೈಜ್ಞಾನಿಕ ಮತ್ತು ಶೈಕ್ಷಣಿಕ ಸಂಸ್ಥೆಗಳು ಮತ್ತು ವಾಣಿಜ್ಯ ಸಮುದಾಯದ ನಡುವೆ ಸಂಪರ್ಕಕ್ಕೆ ಅವಕಾಶ ಮತ್ತು ಉತ್ತೇಜನ ನೀಡುತ್ತದೆ ಹಾಗೂ ಎರಡೂ ದೇಶಗಳ ಸಂಬಂಧಿತ ಸಂಶೋಧನಾ ಸಂಸ್ಥೆಗಳ ನಡುವೆ ಸಹಕಾರವನ್ನು ಮತ್ತಷ್ಟು ಹೆಚ್ಚಿಸಿ ಉತ್ತೇಜನ ನೀಡುತ್ತದೆ.

# ಜೈವಿಕ ಇಂಧನ ಬೆಳೆಗಳು-ಕೃಷಿಕರ ಮುಂದಿನ ಅವಕಾಶಗಳು ಮತ್ತು ಸವಾಲುಗಳು

ಡಾ॥ ಎ.ಎಸ್. ಕುಮಾರ ಸ್ವಾಮಿ, ಕೃಷಿ ವಿಜ್ಞಾನಿ (ನಿವೃತ್ತ), ಮೈಸೂರು

ಮಾನವನು ತನ್ನ ನಿತ್ಯ ಜೀವನದಲ್ಲಿ ಅನೇಕ ಕೆಲಸ ಕಾರ್ಯಗಳಿಗೆ ಬಾಹ್ಯ ಶಕ್ತಿಯನ್ನು ಬಳಸುವ ಜೀವನ ಶೈಲಿಯನ್ನು ರೂಢಿ ಮಾಡಿಕೊಂಡಿರುವನು. ಆಧುನಿಕ ಮಾನವನು ಎಂದೋ ಉತ್ಪನ್ನವಾಗಿ ಭೂಮಿಯ ಪದರಗಳಲ್ಲಿ ಸೇರಿಕೊಂಡಿರುವ, ಮಿತ ಲಭ್ಯವಿರುವ ಪಳೆಯುಳಿಕೆಯಾಧಾರಿತ ಪೆಟ್ರೋಲಿಯಂ ಉತ್ಪನ್ನಗಳು, ಕಲ್ಲಿದ್ದಲು, ಮುಂತಾದ ಇಂಧನಗಳ ಮೇಲೆ ಅತಿಯಾಗಿ ಅವಲಂಬಿಸಿರುವನು. ತನ್ನ ಸಣ್ಣ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ, ಸಾರಿಗೆ, ಸಂಚಾರ ವ್ಯವಸ್ಥೆಗೆ, ನಿತ್ಯ ಬಳಕೆಗೆ ಬೇಕಾದ ವಿದ್ಯುತ್ ಉತ್ಪಾದನೆಗೆ ಹಾಗೂ ತನ್ನ ದಿನ ನಿತ್ಯದ ಕೆಲಸ ಕಾರ್ಯಗಳಿಗೆ ಇಪ್ಪತ್ತನೆಯ ಶತಮಾನದಲ್ಲಿ ಬಳಕೆಗೆ ತಂದ ವಿವಿಧ ಯಂತ್ರಗಳ ಚಾಲನೆಗೆ ಪಳೆಯುಳಿಕೆಯಾಧಾರಿತ ಇಂಧನಗಳ ಅತಿ ಬಳಕೆ ಮಾಡುತ್ತಿದ್ದಾನೆ. ಇವುಗಳ ಅತಿಯಾದ ಬಳಕೆಯಿಂದ ವಾತಾವರಣಕ್ಕೆ ಇಂಗಾಲದ ಡೈ ಆಕ್ಸೈಡ್, ಮೀಥೇನ್, ಕಾರ್ಬನ್ ಮೊನಾಕ್ಸೈಡ್ ಮೊದಲಾದ, ತಾಪವನ್ನು ಹೀರಿಕೊಳ್ಳುವ ಲಕ್ಷಣಗಳುಳ್ಳ ಹಸಿರುಮನೆ ಅನಿಲಗಳು ಮಿತಿ ಮೀರಿ ಬಿಡುಗಡೆಯಾಗಿ, ಆ ಮೂಲಕ ವಾತಾವರಣದ ಉಷ್ಣತೆಯನ್ನು ಹೆಚ್ಚಿಸಿ, ಧೃವ ಪ್ರದೇಶಗಳಲ್ಲಿನ ಮಂಜುಗಡ್ಡೆಗಳ ಕರಗುವಿಕೆ, ಸಮುದ್ರಮಟ್ಟದ ಏರಿಕೆ, ಅಕಾಲಿಕ ಮಳೆ, ಭೀಕರ ಬರಗಾಲಗಳು, ತೀವ್ರವಾದ ನೀರಿನ ಕೊರತೆ, ಮುಂತಾದ ಹಿಂದೆಂದೂ ಕಂಡರಿಯದ, ಕೇಳರಿಯದ ಭೀಕರ ದುರಂತಗಳಿಗೆ ನಾಂದಿಯಾಗಿರುವುದನ್ನು ಈಗಾಗಲೇ ಕಾಣುತ್ತಿದ್ದೇವೆ.

ಇರುವುದೊಂದೇ ಭೂಮಿ, ಇದನ್ನು ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ ಎಂಬುದನ್ನರಿತು ಎಲ್ಲರೂ ಈ ನಿಟ್ಟಿನಲ್ಲಿ ಕಾರ್ಯ ನಿರತರಾಗಬೇಕಾಗಿದೆ. ಇನ್ನೊಂದು ಸಂಗತಿಯೆಂದರೆ, ಈ ಪಳೆಯುಳಿಕೆಯಾಧಾರಿತ ಇಂಧನದ ಮೂಲಗಳು ಮಿತ ಪ್ರಮಾಣದಲ್ಲಿ



ಲಭ್ಯವಿದ್ದು ಈಗಾಗಲೇ ಅವುಗಳ ಹೇರಳ ಬಳಕೆಯಾಗಿ, ಇನ್ನು ಕೆಲವು ದಶಕಗಳಲ್ಲಿಯೇ ಅವುಗಳು ದುರ್ಲಭವಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಅಮಿತ ಪ್ರಮಾಣದಲ್ಲಿ ಲಭ್ಯವಿರುವ, ಎಂದಿಗೂ ಕ್ಷೀಣಿಸದ ಇಂಧನ ಮೂಲಗಳ ಬಳಕೆಯನ್ನು ರೂಢಿಸಿಕೊಳ್ಳಬೇಕಾಗಿದೆ.

ಎಂದಿಗೂ ಕ್ಷೀಣಿಸದ ಅತಿ ಪ್ರಮುಖವಾದ ಇಂಧನ ಮೂಲಗಳೆಂದರೆ, ಸೌರ ಶಕ್ತಿ, ವಾಯು ಶಕ್ತಿ, ಸಮುದ್ರದ ಅಲೆಗಳಲ್ಲಿನ ಶಕ್ತಿ ಮತ್ತು ಜೈವಿಕ ಇಂಧನಗಳು.

**ಜೈವಿಕ ಇಂಧನಗಳು**

ಸೌರ ಶಕ್ತಿಯಾಧಾರಿತ ಸಸ್ಯೋತ್ಪಾದನೆಯ ಮೂಲಕ ಬೆಳೆಸುವ ಸಸ್ಯದ ವಿವಿಧ ಉತ್ಪನ್ನಗಳನ್ನು ಬಳಸಿಕೊಂಡು ಈಗ ಬಳಕೆಯಲ್ಲಿರುವ ಎಲ್ಲಾ ಯಂತ್ರೋಪಕರಣಗಳನ್ನೂ ಚಾಲನೆಯಲ್ಲಿಡಬಹುದೆನ್ನುವುದನ್ನು ಪ್ರಾಯೋಗಿಕವಾಗಿ ಈಗಾಗಲೇ ಸಾಧಿಸಲಾಗಿದೆ. ಈ ರೀತಿ ಬಳಸಬಹುದಾದ ಪ್ರಮುಖ ಸಸ್ಯೋತ್ಪನ್ನಗಳು ಕೆಳಕಂಡಂತಿವೆ:

**ಎಣ್ಣೆ ಉತ್ಪಾದಿಸುವ ಸಸ್ಯಗಳು:** ವಿವಿಧ ಸಸ್ಯಜನ್ಯ ಎಣ್ಣೆಗಳಲ್ಲಿನ ಗ್ಲಿಸರೀನ್ ಅಂಶವನ್ನು ಸಂಸ್ಕರಣೆಯ ಮೂಲಕ ಹೊರ ತೆಗೆದಾಗ ಉಳಿಯುವ ಭಾಗವನ್ನು ಡೀಸೆಲ್‌ಗೆ ಸಮನಾಗಿ ಯಂತ್ರಗಳ ಚಾಲನೆಗೆ ಬಳಸಬಹುದು. ಇವುಗಳನ್ನು ತಿನ್ನುವ ಎಣ್ಣೆಗಳು ಮತ್ತು ತಿನ್ನಲಾಗದ ಎಣ್ಣೆಗಳು ಎಂದು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಸಾಮಾನ್ಯವಾಗಿ ಎಲ್ಲಾ ತಿನ್ನುವ ಎಣ್ಣೆಗಳನ್ನೂ ಸಹ ಸಂಸ್ಕರಿಸಿದ ಬಳಿಕ ಜೈವಿಕ ಇಂಧನವನ್ನಾಗಿ ಬಳಸಬಹುದು. ಸೋಯಾ ಎಣ್ಣೆ, ತೆಂಗಿನೆಣ್ಣೆ, ಪಾಮ್ ಎಣ್ಣೆ, ಸೂರ್ಯಕಾಂತಿ ಎಣ್ಣೆ, ಕಡಲೇಕಾಯಿ ಎಣ್ಣೆ, ಹರಳೆಣ್ಣೆ, ಇವುಗಳು ಪ್ರಮುಖವಾದವು. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಇವುಗಳ ಅತಿ ದುಬಾರಿ ಬೆಲೆಗಳ ಕಾರಣ ತಿನ್ನುವ ಎಣ್ಣೆಗಳ ಬಳಕೆಯು ವಾಸ್ತವಿಕವಾಗಿ ಸಾಧ್ಯವಾಗಿಲ್ಲ. ತಿನ್ನಲಾಗದ ಎಣ್ಣೆಗಳಲ್ಲಿ ಜಟ್ರೋಪಾ (ಕಾಡು ಔಡಲ), ಹೊಂಗೆ, ಬೇವು, ಹಿಪ್ಪೆ ಇವುಗಳ ಎಣ್ಣೆಗಳಿಂದ ಉತ್ಕೃಷ್ಟ ಗುಣಮಟ್ಟದ ಜೈವಿಕ ಇಂಧನವನ್ನು ತಯಾರಿಸಿ ಬಳಸಲಾಗಿದೆ.

**ಪೆಟ್ರೋಲ್ ಜೊತೆಯಲ್ಲಿ ಮಿಶ್ರ ಮಾಡಿ ಬಳಸಬಹುದಾದ ಆಲ್ಕೋಹಾಲ್**: ಪೆಟ್ರೋಲ್ ಜೊತೆಯಲ್ಲಿ ಪ್ರತಿಶತ 10 ರಿಂದ 25 ರಷ್ಟು ಮಿಶ್ರ ಮಾಡಿ, ಯಾವುದೇ ತೊಂದರೆಯಿಲ್ಲದೇ ಯಂತ್ರಗಳನ್ನು ಚಾಲಿಸಬಹುದಾದಂತಹ ಆಲ್ಕೋಹಾಲ್‌ನ್ನು ಜೈವಿಕ ವಸ್ತುಗಳಿಂದ ತಯಾರಿಸಬಹುದು. ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುತ್ತಿರುವ ಈಥೈಲ್ ಆಲ್ಕೋಹಾಲ್ ಇದಕ್ಕೊಂದು ಉತ್ತಮ ಉದಾಹರಣೆ. ಈಗಾಗಲೇ, ಪೆಟ್ರೋಲ್ ಜೊತೆಯಲ್ಲಿ ಶೇ 5–10 ರಷ್ಟು ಆಲ್ಕೋಹಾಲ್ ಬೆರೆಸಲು ಭಾರತ ದೇಶದಲ್ಲಿ ಅನುಮತಿ ನೀಡಲಾಗಿದೆ. ಈ ವಿಷಯದಲ್ಲಿ ಬ್ರೆಜಿಲ್ ದೇಶದವರು ಬಹಳ ಮುಂದುವರೆದಿದ್ದು, ಕಡ್ಡಾಯವಾಗಿ ಪ್ರತಿ ಶತ 50 ರಷ್ಟು ಆಲ್ಕೋಹಾಲ್ ಬೆರೆಸುವ ವ್ಯವಸ್ಥೆಯನ್ನು ಜಾರಿಗೆ ತರುವತ್ತ ನಿರತರಾಗಿದ್ದಾರೆ. ಕಬ್ಬಿನ ಬೆಳೆಯನ್ನು ಹೇರಳವಾಗಿ ಬೆಳೆದು ಅನೇಕ ಬಾರಿ ನಷ್ಟ ಅನುಭವಿಸುತ್ತಿರುವ ಭಾರತದ ಕೃಷಿಕನಿಗೂ ಇಂತಹ ವ್ಯವಸ್ಥೆಯು ವರದಾನವಾಗಬಲ್ಲದು. ಇದರಿಂದ ಕಾರ್ಖಾನೆಯನ್ನು ನಷ್ಟವಿಲ್ಲದೆ ವರ್ಷಪೂರ್ತಿ ನಡೆಸುವ ಸಾಧ್ಯತೆ ಇರುವುದು. ಇದಲ್ಲದೇ, ಸಕ್ಕರೆ

ಕಾರ್ಖಾನೆಗಳಲ್ಲಿ ಲಭ್ಯವಿರುವ ಕಬ್ಬಿನ ಸಿಪ್ಪೆಯನ್ನು ಬಳಸಿಕೊಂಡು ನೇರವಾಗಿ ವಿದ್ಯುತ್ ಉತ್ಪಾದನೆ ಮಾಡುವುದರಿಂದಲೂ ಸಹ ಇಂಧನ ಸಮಸ್ಯೆಗೆ ಪರಿಹಾರ ದೊರಕಬಲ್ಲದು. ಜೈವಿಕ ಇಂಧನದ ಬಗ್ಗೆ ಗಂಭೀರ ಚಿಂತನೆ ಮಾಡುವ ಯಾವುದೇ ಸರ್ಕಾರವು, ಕಬ್ಬಿನ ಬೆಳೆಯನ್ನು ಜೈವಿಕ ಇಂಧನ ಉತ್ಪಾದನೆಗೆ ಬಳಸಿಕೊಳ್ಳುವುದು, ಅಗತ್ಯವಾಗಿ ಕೈಗೊಳ್ಳಬೇಕಾದ ಆದ್ಯತೆಯ ಕಾರ್ಯವಾಗಿದೆ.

**ಆಹಾರ ಧಾನ್ಯಗಳನ್ನು ಬಳಸಿ ಆಲ್ಕೋಹಾಲ್ ಉತ್ಪಾದನೆ**: ಮುಸುಕಿನ ಜೋಳ, ಗೋಧಿ, ಮುಂತಾದ ಪ್ರಮುಖ ಆಹಾರ ಧಾನ್ಯಗಳನ್ನು ಗಾಳಿಯಿಲ್ಲದ ನಿಯಂತ್ರಿತ ವಾತಾವರಣದಲ್ಲಿ ನಿರ್ದಿಷ್ಟ ಸೂಕ್ಷ್ಮ ಜೀವಿಗಳನ್ನು ಬಳಸಿ, ಕೊಳೆಯಿಸಿ ಅದರಿಂದ ಆಲ್ಕೋಹಾಲ್ ಉತ್ಪಾದಿಸಲಾಗುತ್ತದೆ. ವಿಶ್ವದಲ್ಲಿ ಆಹಾರಕ್ಕಾಗಿ ಕಂಗೆಟ್ಟು ಪರದಾಡುತ್ತಿರುವವರ ಸಂಖ್ಯೆ ಇನ್ನೂ ಧೃತಿಗೆಡಿಸುವಷ್ಟಿರುವಾಗ ಈ ರೀತಿಯ ಉತ್ಪಾದನೆಗೆ ಉತ್ತೇಜನ ಸಲ್ಲದು. ಆದರೂ ಇದು ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಇದರಿಂದ ವಿಶ್ವದಾದ್ಯಂತ ಆಹಾರ ಬೆಲೆಗಳು ಹೆಚ್ಚಾಗಲು ಕಾರಣವಾಗಿದೆ.

**ಪಿಷ್ಟಯುಕ್ತ ವಸ್ತುಗಳನ್ನು ಬಳಸಿ ಆಲ್ಕೋಹಾಲ್ ಉತ್ಪಾದನೆ**: ಧಾನ್ಯಗಳಲ್ಲದೇ ಇತರೆ ಪಿಷ್ಟಯುಕ್ತ ವಸ್ತುಗಳಾದ ಗಡ್ಡೆ, ಗೆಣಸು, ಮೊದಲಾದವುಗಳನ್ನು ನಿರ್ದಿಷ್ಟ ಸೂಕ್ಷ್ಮಜೀವಿಗಳ ಸಹಾಯದಿಂದ ನಿಯಂತ್ರಿತ ವಾತಾವರಣದಲ್ಲಿ ಕೊಳೆಯಿಸಿ ಆಲ್ಕೋಹಾಲ್ ತಯಾರಿಸಲಾಗುತ್ತದೆ. ಗೆಡ್ಡೆ ಗೆಣಸುಗಳು ಆಹಾರ ಸುರಕ್ಷತೆಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಜೈವಿಕ ಇಂಧನಗಳ ತಯಾರಿಕೆಗೆ ಇವುಗಳ ಬಳಕೆಯು ಸೂಕ್ತವಲ್ಲ.

**ನಾರು ವಸ್ತುಗಳನ್ನುಪಯೋಗಿಸಿ ಆಲ್ಕೋಹಾಲ್ ಉತ್ಪಾದನೆ**; ಬೆಳೆ ಉತ್ಪಾದನೆಯಲ್ಲಿ ತ್ಯಾಜ್ಯ ವಸ್ತುಗಳಾದ ದಂಟು, ಸೊಪ್ಪೆ, ಸಿಪ್ಪೆ, ಮುಂತಾದವುಗಳನ್ನು ಬಳಸಿಕೊಂಡು, ವಿಶೇಷವಾಗಿ ಆಯ್ದುಕೊಂಡ ಸೂಕ್ಷ್ಮ ಜೀವಿಗಳ ಮೂಲಕ ಗಾಳಿಯಿಲ್ಲದ ನಿಯಂತ್ರಿತ ವಾತಾವರಣದಲ್ಲಿ ಕೊಳೆಯಿಸಿ ಆಲ್ಕೋಹಾಲ್ ತಯಾರಿಸಲಾಗುತ್ತದೆ. ಆಹಾರಕ್ಕೆ ನೇರವಾಗಿ ಬಳಕೆಯಾಗದ, ಕೃಷಿ ತ್ಯಾಜ್ಯ ವಸ್ತುಗಳಾದ ಈ ರೀತಿಯ ವಸ್ತುಗಳ ಉಪಯೋಗವನ್ನು ಉತ್ತೇಜಿಸಬೇಕು. ಇದೇ ರೀತಿಯಲ್ಲಿ ಹಣ್ಣು ಮತ್ತು ತರಕಾರಿ ಸಂಸ್ಕರಣಾ ಘಟಕಗಳಲ್ಲಿ ಬರುವ ತ್ಯಾಜ್ಯವನ್ನೂ ಸಹ ಆಲ್ಕೋಹಾಲ್ ತಯಾರಿಕೆಗೆ ಬಳಸುವತ್ತ ಪ್ರಯತ್ನ ಮಾಡಬೇಕು.

**ಉರುವಲು ಕಟ್ಟಿಗೆಯನ್ನು ಬಳಸಿ ನೇರ ವಿದ್ಯುತ್ ತಯಾರಿಕೆ**: ಕೃಷಿ ತ್ಯಾಜ್ಯ ವಸ್ತುಗಳಾಗಿ ಲಭ್ಯವಾಗುವ ಉರುವಲು ವಸ್ತುಗಳು, ಅನುತ್ಪಾದಕ ಪ್ರದೇಶಗಳಲ್ಲಿ ಬೆಳೆಯುವ ಗಟ್ಟಿ ಕಾಂಡದ ಗಿಡ ಗಂಟಿಗಳು, ಸಾಮಾಜಿಕ ಅರಣ್ಯದಲ್ಲಿ ಬೆಳೆದ ಮರಗಳ ರೆಂಬೆ ಕೊಂಬೆಗಳು ಮೊದಲಾದವುಗಳನ್ನು ಉರಿಸಿ, ಉಗಿಯನ್ನು ಉತ್ಪಾದಿಸಿ ಆ ಮೂಲಕ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಇಂತಹ ಕೆಲವು ಘಟಕಗಳು ನಮ್ಮ ರಾಜ್ಯದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ. ಈ ರೀತಿಯ ಜೈವಿಕ ಇಂಧನ ಉತ್ಪಾದನೆಯೂ ಸಹ ಉತ್ತೇಜನಾರ್ಹ.

**ಕಟ್ಟಿಗೆಯಿಂದ ಇದ್ದಿಲು ಹಾಗೂ ಅನಿಲ ಇಂಧನವನ್ನು ತಯಾರಿಸಿ ಬಳಸುವುದು**: ಕಟ್ಟಿಗೆಯಿಂದ ಇಂಧನ ಅನಿಲ ತಯಾರಿಸುವ ಘಟಕಗಳು (ವುಡ್ ಗ್ಯಾಸಿಫಿಕೇಶನ್ ಯೂನಿಟ್‌ಗಳು) ಈಗಾಗಲೇ ಹಲವಾರು ಕಡೆಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದೇ ರೀತಿ ಕಟ್ಟಿಗೆಯಿಂದ ಮತ್ತು ಕೃಷಿ ತ್ಯಾಜ್ಯ ವಸ್ತುಗಳಾದ ಕಬ್ಬಿನ ಸಿಪ್ಪೆ, ಮುಂತಾದವುಗಳಿಂದ ಇದ್ದಿಲನ್ನು ತಯಾರಿಸಿ ಜೈವಿಕ ಇಂಧನವನ್ನಾಗಿ ಬಳಸುವ ಪ್ರಯತ್ನಗಳೂ ಸಹ ನಡೆದಿವೆ.

**ಕೃಷಿ ತ್ಯಾಜ್ಯ ವಸ್ತುಗಳಿಂದ ಉರುವಲು ಘಟ್ಟಿಗಳ ತಯಾರಿಕೆ**: ತುಂಬಾ ಹಗುರವಾದ ಹಾಗೂ ಹೆಚ್ಚು ಸ್ಥಳವನ್ನು ಆಕ್ರಮಿಸುವ ಕೃಷಿ ತ್ಯಾಜ್ಯ ವಸ್ತುಗಳಾದ ನೆಲಗಡಲೆ ಸಿಪ್ಪೆ, ಭತ್ತದ ಹೊಟ್ಟು, ಕಾಫಿಯ ಸಿಪ್ಪೆ, ಮುಂತಾದ ಕೃಷಿ ತ್ಯಾಜ್ಯ ವಸ್ತುಗಳನ್ನು ಒತ್ತಡ ಮತ್ತು ಬಿಸಿಯಲ್ಲಿ ಅಧಿಕ ಸಾಂದ್ರದ ಘಟ್ಟಿಗಳಾಗಿ, ಬಿಲ್ಲೆಗಳಾಗಿ ಅಥವಾ ಉಂಡೆಗಳಾಗಿ ಮಾಡಿ ಸಂಗ್ರಹಿಸಿ, ಸಾಗಾಣಿಕೆ ಮಾಡಿ, ಉರುವಲನ್ನಾಗಿ ಬಳಸಲಾಗುತ್ತದೆ. ಈಗಾಗಲೇ ನಮ್ಮ ದೇಶದಲ್ಲಿ ಇಂತಹ ಹಲವು ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ತ್ಯಾಜ್ಯ ವಸ್ತುಗಳನ್ನು ಇಂಧನಕ್ಕೆ ಬಳಸಿಕೊಳ್ಳುವ ಇದೊಂದು ಉತ್ತಮ ಹೆಜ್ಜೆ.

**ಜೈವಿಕ ಅನಿಲ ಯಂತ್ರಗಳು**: ಸಗಣಿ ಮುಂತಾದ ವಸ್ತುಗಳನ್ನು ಬಳಸಿ, ಜೈವಿಕ ಇಂಧನ ಘಟಕಗಳಲ್ಲಿ, ಮೀಥೇನ್ ಅನಿಲವನ್ನು ಉತ್ಪಾದಿಸಿ ಗೃಹ ಬಳಕೆಯ ಇಂಧನವನ್ನಾಗಿ ಬಳಸಲಾಗುತ್ತದೆ. ಕೆಲವು ದೊಡ್ಡ ಘಟಕಗಳಲ್ಲಿ ಜೈವಿಕ ಅನಿಲವನ್ನು ಬಳಸಿ ಆಯಿಲ್ ಎಂಜಿನ್‌ಗಳನ್ನು ಓಡಿಸುವುದು ಹಾಗೂ ವಿದ್ಯುತ್ ಜನರೇಟರ್‌ಗಳನ್ನು ಚಾಲನೆ ಮಾಡುವುದು ಮುಂತಾದ ಕೆಲಸಗಳನ್ನೂ ಸಹ ಮಾಡಲಾಗುತ್ತಿದೆ. ಹೈನುಗಾರಿಕಾ ಕೃಷಿಕರಿಗೆ ವರದಾನವಾಗಿರುವ ಈ ಘಟಕಗಳ ಸ್ಥಾಪನೆಗೆ ಸಾಕಷ್ಟು ಉತ್ತೇಜನ ನೀಡಲಾಗುತ್ತಿದೆ.

ಜೈವಿಕ ಇಂಧನಗಳನ್ನು ಉತ್ಪಾದಿಸಿ ಬಳಸುವ ಮೇಲಿನ ವಿಧಾನಗಳಲ್ಲಿ ಕೆಲವದರಲ್ಲಿ ಜೈವಿಕ ವಸ್ತುಗಳನ್ನು ಸೂಕ್ಷ್ಮ ಜೀವಿಗಳನ್ನು ಬಳಸಿ ನಿಯಂತ್ರಿತ ವಾತಾವರಣದಲ್ಲಿ ಕೊಳೆಯಿಸುವ ಪ್ರಕ್ರಿಯೆಯನ್ನು ಅವಲಂಬಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅಭಿವೃದ್ಧಿಯಾಗುತ್ತಿರುವ ಜೈವಿಕ ತಂತ್ರಜ್ಞಾನದ ಉಪಯೋಗ ಪಡೆದುಕೊಂಡು ವಿಶಿಷ್ಟ ರೀತಿಯ ಸೂಕ್ಷ್ಮ ಜೀವಿಗಳನ್ನು ಪ್ರಯೋಗಾಲಯಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇನ್ನು ಕೆಲವು ವಿಧಾನಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಉರುವಲಾಗಿ ಬಳಸಲಾಗುತ್ತಿದೆ. ಇವುಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿರುವ ವಿಧಾನವೆಂದರೆ, ಇಂಧನಕ್ಕೋಸ್ಕರ ವಿಶೇಷವಾಗಿ ಬೆಳೆಸಿದ ಸಸ್ಯಗಳಿಂದ ಎಣ್ಣೆಯನ್ನು ತೆಗೆದು ಅದನ್ನು ಸಂಸ್ಕರಿಸಿ ಯಂತ್ರಗಳ ಚಾಲನೆಗೆ ಡೀಸೆಲ್ ಬದಲಿಗೆ ಅಥವಾ ಜೊತೆಯಲ್ಲಿ ಮಿಶ್ರ ಮಾಡಿ ಬಳಸುವುದು.

**ಜೈವಿಕ ಇಂಧನ ಬೆಳೆಗಳು**

ಅನೇಕ ರೀತಿಯ ಮರ ಗಿಡಗಳಿಂದ ದೊರೆಯುವ ಎಣ್ಣೆಯನ್ನು ಡೀಸೆಲ್‌ಗೆ ಬದಲಾಗಿ ನೇರವಾಗಿ ಅಥವಾ ಡೀಸೆಲ್‌ನೊಂದಿಗೆ ಮಿಶ್ರ ಮಾಡಿ, ಈಗಾಗಲೇ ಬಳಕೆಯಲ್ಲಿರುವ ಯಂತ್ರಗಳ ಚಾಲನೆಗೆ ಬಳಸಬಹುದು. ನಮ್ಮ ದೇಶದಲ್ಲಿ ಸುಮಾರು ನೂರೈವತ್ತಕ್ಕಿಂತಲೂ ಹೆಚ್ಚಿನ ಗಿಡ ಮರಗಳಿಂದ ಬರುವ ಎಣ್ಣೆಯನ್ನು ಜೈವಿಕ ಇಂಧನದ ಉತ್ಪಾದನೆಗೆ ಬಳಸಬಹುದೆಂದು ತಿಳಿದುಬಂದಿದೆಯಾದರೂ ಆರ್ಥಿಕವಾಗಿ ಲಾಭದಾಯಕವಾಗುವ ರೀತಿಯಲ್ಲಿ ಕೆಲವೇ ಸಸ್ಯಗಳನ್ನು ಮಾತ್ರ ಬೆಳೆಗಳನ್ನಾಗಿ ಬೆಳೆಯಬಹುದು. ಈ ರೀತಿ ಬೆಳೆಯಬಹುದಾದ ಪ್ರಮುಖ ಜೈವಿಕ ಇಂಧನ ಬೆಳೆಗಳೆಂದರೆ,



ಜಟ್ರೋಪಾ, ಹೊಂಗೆ, ಬೇವು, ಹಿಪ್ಪೆ, ಸಿಮರೂಬ, ಮುಂತಾದವುಗಳು. ಕಡಿಮೆ ಮಳೆ ಬೀಳುವ ಖುಷ್ಕಿ ಬೇಸಾಯ ಪ್ರದೇಶಗಳಲ್ಲಿಯೂ ಸಹ ಲಾಬದಾಯಕವಾಗಿ ಬೆಳೆಯಬಹುದಾದ ಇನ್ನೊಂದು ಅತ್ಯುತ್ತಮ ಬೆಳೆಯಾದ ಹರಳು ಸಹ ಭವಿಷ್ಯದಲ್ಲಿ ಉತ್ತಮ ಜೈವಿಕ ಇಂಧನ ಬೆಳೆಯಾಗಿ ಹೊರ ಹೊಮ್ಮುವ ಸಾಧ್ಯತೆಗಳಿವೆ.

**ಜೈವಿಕ ಇಂಧನಗಳಿಂದಾಗುವ ಅನುಕೂಲಗಳು**

ಜೈವಿಕ ಇಂಧನವನ್ನು ಬಳಸಿದಾಗ ಯಂತ್ರಗಳು ಹೊರಸೂಸುವ ಹೊಗೆಯಲ್ಲಿ ಗಂಧಕದ ಡೈ ಆಕ್ಸೈಡ್, ಕಾರ್ಬನ್ ಮೋನಾಕ್ಸೈಡ್, ಅಪೂರ್ಣ ಉರಿದ ಇಂಗಾಲ ಮುಂತಾದ ವಾತಾವರಣಕ್ಕೆ ಹಾನಿಕರವಾಗಿರುವ ವಸ್ತುಗಳು ಅತಿ ಕಡಿಮೆ ಇರುವುದರಿಂದ ಇದೊಂದು ಪರಿಸರ ಸ್ನೇಹೀ ಇಂಧನವಾಗಿದೆ. ಕೃಷಿಕರೇ ಬಳಸುವ ನೀರೆತ್ತುವ ಪಂಪು, ಟ್ರ್ಯಾಕ್ಟರ್ ಮೊದಲಾದವುಗಳಿಗೆ ಬೇಕಾಗುವ ಡೀಸೆಲ್‌ನ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಹೊರಗಿನಿಂದ ಕೊಂಡು ತರುವ ಒಳಸುರಿ ಸಾಮಗ್ರಿಗಳನ್ನು ಕಡಿಮೆ ಮಾಡುವುದರಿಂದ ಕೃಷಿಕರ ಆರ್ಥಿಕ ಏಳಿಗೆ ಸಾಧಿಸಲು ಸಹಕಾರವಾಗುವುದು. ಹೊರದೇಶಗಳಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲದ ಪ್ರಮಾಣವನ್ನು ಕಡಿಮೆ ಮಾಡುವ ಅವಕಾಶಗಳಿರುವುದರಿಂದ ದೇಶಕ್ಕೆ ಆರ್ಥಿಕ ಲಾಭವಾಗುತ್ತದೆ. ಹೊಂಗೆ ಮತ್ತು ಬೇವು, ನಮ್ಮ ಬಯಲು ಸೀಮೆಯಲ್ಲಿ ಹೇರಳವಾಗಿ ಕಂಡುಬರುವ ರೈತರ ಅಚ್ಚು ಮೆಚ್ಚಿನ ಮರಗಳು. ಗ್ರಾಮೀಣ ಪ್ರದೇಶದ ಜನರಿಗೆ ಅನೇಕ ರೀತಿಯಲ್ಲಿ ಉಪಯುಕ್ತವಾಗಿರುವ ಮರಗಳು ಕೆಳಕಂಡಂತಿವೆ:

- ಬೀಜದಿಂದ ತೆಗೆದ ಎಣ್ಣೆಯು ಕೇವಲ ಜೈವಿಕ ಇಂಧನವಾಗಿ ಅಲ್ಲದೇ, ಅನೇಕ ಖಾಯಿಲೆಗಳಿಗೆ ಆಯುರ್ವೇದದ ಔಷಧಿಯಾಗಿದೆ. ಎಣ್ಣೆಯನ್ನು ಮನೆಗಳಲ್ಲಿ ದೀಪ ಬೆಳಗಿಸಲೂ ಸಹ ಬಳಸುತ್ತಾರೆ.
- ಎಣ್ಣೆಯನ್ನು ತೆಗೆದ ನಂತರ ಉಳಿಯುವ ಹಿಂಡಿಯು ಬೆಳೆಗಳಿಗೆ ಅತ್ಯುಪಯುಕ್ತ ಸಾವಯವ ಗೊಬ್ಬರ.
- ಬೀಜಗಳನ್ನು ನೆನೆಸಿ, ಅರೆದು, ಶೋಧಿಸಿ ತಯಾರಿಸಿದ ಕಷಾಯವು ಬೆಳೆಗಳಲ್ಲಿ ಸಸ್ಯ ಸಂರಕ್ಷಣೆಗೆ ಉತ್ತಮ ಕೀಟನಾಶಕ.
- ಹಸಿರು ಸೊಪ್ಪು ಬಹು ಉತ್ತಮ ಹಸಿರೆಲೆ ಗೊಬ್ಬರ.
- ಬಲಿತ ಮರದಿಂದ ಹಲಗೆ, ಮರ ಮುಟ್ಟುಗಳನ್ನು ತಯಾರಿಸಬಹುದು.
- ಬದುಗಳು, ರಸ್ತೆ ಬದುಗಳು ಮತ್ತು ಅನುಪಯುಕ್ತ ಜಮೀನುಗಳ ಸದ್ಬಳಕೆಯಾಗುತ್ತದೆ.

**ಅವಕಾಶಗಳು**

ಜೈವಿಕ ಇಂಧನ ಮರ ಗಿಡಗಳನ್ನು ಹೊಲ ಗದ್ದೆಗಳ ಬದುಗಳಲ್ಲಿ, ರಸ್ತೆಯ ಎರಡು ಬದಿಗಳಲ್ಲಿ, ಅನುಪಯುಕ್ತ ಜಮೀನುಗಳಲ್ಲಿ, ಹಾಗೂ ಸಾಮಾಜಿಕ ಅರಣ್ಯ ಯೋಜನೆಗಳಲ್ಲಿ ಬೆಳೆಸಬಹುದು. ಇವುಗಳನ್ನಾಗಲೀ ಅಥವಾ ಜಟ್ರೋಪಾ ಮುಂತಾದ ಇತರೆ ಜೈವಿಕ ಇಂಧನ ಬೆಳೆಗಳನ್ನಾಗಲೀ, ಪ್ರತ್ಯೇಕ ಬೆಳೆಗಳನ್ನಾಗಿ ಲಾಭದಾಯಕವಾಗಿ ಬೆಳೆಯಬಹುದೆನ್ನುವ ಬಗ್ಗೆ ಯಾವದೇ ಸಕಾರಾತ್ಮಕ ಫಲಿತಾಂಶದ ಪ್ರಯೋಗಗಳಾಗಿಲ್ಲದೇ ಇರುವುದರಿಂದ ಕೃಷಿಕರು ಇವುಗಳನ್ನು ಪೂರ್ಣ ಬೆಳೆಗಳನ್ನಾಗಿ ಆರಿಸಿಕೊಳ್ಳುವುದಕ್ಕಿಂತ ಮುನ್ನ, ಪಡೆಯಬಹುದಾದ ಇಳುವರಿ, ಸಂಸ್ಕರಣಾ ಘಟಕಗಳ ಲಭ್ಯತೆ, ಮಾರುಕಟ್ಟೆಯಲ್ಲಿ ಕುಂದದ ಬೇಡಿಕೆ, ದೊರೆಯಬಹುದಾದ ಮಾರುಕಟ್ಟೆಯ ಬೆಲೆ, ಮುಂತಾದ ವಿಷಯಗಳ ಬಗ್ಗೆ ವಿವರವಾಗಿ ಪರಿಗಣಿಸಿ ಎಚ್ಚರಿಕೆ ವಹಿಸಬೇಕಾಗುತ್ತದೆ.

**ಸವಾಲುಗಳು / ಸಮಸ್ಯೆಗಳು**

- ಈ ಬೆಳೆಗಳಿಂದ ವಿವಿಧ ಸನ್ನಿವೇಶಗಳಲ್ಲಿ ಪಡೆಯಬಹುದಾದ ಇಳುವರಿಯ ಬಗ್ಗೆ ನಿಖರವಾದ ಅಂದಾಜು ಇನ್ನೂ ಸಿಕ್ಕಿಲ್ಲವಾದ್ದರಿಂದ ಇವುಗಳನ್ನು ಪೂರ್ಣ (ಏಕ) ಬೆಳೆಗಳನ್ನಾಗಿ ಬೆಳೆಸುವುದರಿಂದ ನಿಶ್ಚಿತವಾದ ಲಾಭವನ್ನು ನಿರೀಕ್ಷಿಸುವಂತಿಲ್ಲ.
- ಈ ಸಸ್ಯಗಳನ್ನು ಬೆಳೆಗಳ ರೂಪದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಾಗ ಬಂದೊದಗುವ ಕೀಟ, ರೋಗ, ವಾತಾವರಣದ ತೊಡಕುಗಳು, ಮಳೆ ಗಾಳಿಗಳಿಂದಾಗುವ ಹಾನಿ, ಮುಂತಾದವುಗಳ ಬಗ್ಗೆ ಈಗಲೇ ಏನೂ ಹೇಳುವಂತಿಲ್ಲ.
- ಇತರೆ ಬೆಳೆಗಳಲ್ಲಿ ಆಗಿರುವಂತೆ ಈ ಬೆಳೆಗಳಲ್ಲಿ ವಿವಿಧ ಕೃಷಿ ಸನ್ನಿವೇಶಗಳಿಗೆ ಸೂಕ್ತ ತಳಿಯ ಗುರುತಿಸುವಿಕೆಯಾಗಲೀ, ಅಭಿವೃದ್ಧಿಯಾಗಲೀ ಆಗಿಲ್ಲವಾದ್ದರಿಂದ ಲಭ್ಯವಿರುವ ಯಾವುದೇ ಒಂದು ತಳಿಯು ಎಲ್ಲಾ ಸನ್ನಿವೇಶಗಳಲ್ಲಿ ಸಮಾಧಾನಕರ ಫಲಿತಾಂಶವನ್ನು ನೀಡುತ್ತದೆಂದು ನಿರೀಕ್ಷಿಸುವುದು ತಪ್ಪಾಗಬಹುದು.
- ಇವುಗಳನ್ನು ಲಾಭದಾಯಕವಾಗಿ ಬೆಳೆಯಲು ಗಿಡಗಳ ನಡುವಿನ ನಾಟಿಯ ಅಂತರ, ಗಿಡಗಳಿಗೆ ನೀಡಬೇಕಾದ ಆಕಾರ, ರೆಂಬೆಗಳನ್ನು ಕತ್ತರಿಸುವ ವಿಧಾನ, ಕೊಡಬೇಕಾದ ಗೊಬ್ಬರಗಳ ಪ್ರಮಾಣ, ಅಧಿಕ ಇಳುವರಿಗೆ ಅನುಸರಿಸಬೇಕಾದ ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಇನ್ನೂ ಯಾವ ಸಂಶೋಧನೆಯೂ ಆಗಿಲ್ಲವಾದ ಕಾರಣ, ಎಲ್ಲವನ್ನೂ ಪ್ರಾಯೋಗಿಕವಾಗಿ, ಎಚ್ಚರಿಕೆಯಿಂದ ಮಾಡಬೇಕಾದ ಅವಶ್ಯಕತೆ ಇದೆ.
- ಇವುಗಳ ಸಫಲ ಉತ್ಪಾದನೆಗೆ ಎಲ್ಲಾ ಕೃಷಿ ಕಾರ್ಯಗಳಿಗೆ ತಗಲುವ ಕಾರ್ಮಿಕರ ಮೇಲಿನ ವೆಚ್ಚ, ಒಟ್ಟು ಉತ್ಪಾದನಾ ವೆಚ್ಚ, ಪ್ರತಿ ಕಿಲೋ ಗ್ರಾಂ ಬೀಜ ಉತ್ಪಾದನೆಗೆ ತಗಲುವ ವೆಚ್ಚ, ಮುಂತಾದವುಗಳನ್ನು ನಿಖರವಾಗಿ ಅಂದಾಜು ಮಾಡಿಲ್ಲವಾದ್ದರಿಂದ ಇವುಗಳ ಕೃಷಿಯು

ಲಾಭದಾಯಕವೆನಿಸಬೇಕಾದರೆ ನಿರೀಕ್ಷೆ ಮಾಡಬೇಕಾದ ಬೆಲೆ ಎಷ್ಟಿರಬೇಕೆನ್ನುವ ಅಂದಾಜು ಕೃಷಿಕರಿಗೆ ಇಲ್ಲ. ಇದರಿಂದ ದೊರೆಯುವ ಬೆಲೆಯು ಲಾಭದಾಯಕವೇ, ಅಲ್ಲವೇ ಎನ್ನುವ ಅಂದಾಜಿಲ್ಲದೆ ಅನೇಕ ವರ್ಷಗಳ ಕಾಲ ಜಮೀನನ್ನು ಆವರಿಸುವ ಈ ಬೆಳೆಗಳನ್ನು ಹಿಂದು ಮುಂದು ಯೋಚಿಸದೇ ಆರಿಸಿಕೊಳ್ಳುವುದು ಬುದ್ಧಿ ವಂತಿಕೆಯಲ್ಲ.

- ಇವುಗಳ ಕಾಯಿ, ಹಣ್ಣುಗಳನ್ನು ಕಟಾವು ಸಮಯದಲ್ಲಿ ಗಿಡದಿಂದ ಬೇರ್ಪಡಿಸಿ ಅಥವಾ ಗಿಡದ ಕೆಳಗೆ ಆಯ್ದು ಸಂಗ್ರಹಿಸಿ, ಸಿಪ್ಪೆಯಿಂದ ಬೇರ್ಪಡಿಸಿ, ಬೀಜವನ್ನು ಸ್ವಚ್ಛಗೊಳಿಸಿ, ಮಾರುಕಟ್ಟೆಗೆ ತಯಾರುಮಾಡಲು ಅಗಾಧ ಪ್ರಮಾಣದ ಕಾರ್ಮಿಕರ ಅವಶ್ಯಕತೆ ಇದೆ. ಈಗಾಗಲೇ ಕಾರ್ಮಿಕರ ತೀವ್ರ ಅಭಾವವನ್ನು ಎದುರಿಸುತ್ತಿರುವ ಕೃಷಿಕರು ಮುಂಬರುವ ವರ್ಷಗಳಲ್ಲಿ ಬರಬಹುದಾದ ಈ ಸಮಸ್ಯೆಯ ಬಗ್ಗೆ ಮೊದಲೇ ಚಿಂತನೆ ಮಾಡಬೇಕಾಗಿರುವುದು ಅಗತ್ಯ.

ಉಜ್ವಲ ಭವಿಷ್ಯವಿರುವ ಜೈವಿಕ ಇಂಧನ ಬೆಳೆಗಳ ಬಗ್ಗೆ, ಮೇಲ್ಕಾಣಿಸಿದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಂಡು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದು ಸೂಕ್ತ. ಅಲ್ಲಿಯವರೆಗೆ ಪ್ರಾಯೋಗಿಕ ಪ್ರಯತ್ನಗಳಿಗೆ ಸೀಮಿತವಾಗಿರಲಿ. ●

# ಕೃಷಿಯಲ್ಲಿ ಆಧ್ಯಾತ್ಮ

**ಡಾ॥ ಕೆ.ಎಸ್. ಶಿವರಾಮ್, ಆಧ್ಯಾತ್ಮ ಚಿಂತಕರು**

ರೀ ಸ್ವಾಮಿ, ಕೃಷಿಕರಿಗೆ ಯಾಕ್ರೀ, ಸಂಸ್ಕೃತ ಶ್ಲೋಕ? ಅನ್ನಬಹುದು. ಆದರೆ ಸರಳ ಸುಲಭ ನಿತ್ಯ ಆಧ್ಯಾತ್ಮ ಕೃಷಿಯಲ್ಲಿರದೆ, ಬೇರೆ ಎಲ್ಲಿರಲು ಸಾಧ್ಯ?. "ಅನ್ನ, ಬ್ರಹ್ಮಸೃಷ್ಠಿ; ವ್ಯವಸಾಯ, ಬ್ರಹ್ಮತ್ವದಸಂಕೇತ; ರೈತ, ಅನ್ನ ಬ್ರಹ್ಮ".

ಸ್ನೇಹಿತರೇ, ಮೇಲಿನ ಶ್ಲೋಕವು ನಮ್ಮ ದಿನ ನಿತ್ಯದ ಜೀವನದಲ್ಲಿ ಪಠಣ ಮಾಡಿದರೂ, ಗ್ರಾಮೀಣ ಕೃಷಿಪ್ರಧಾನ ರೈತರಲ್ಲಿ ಮುಂಜಾನೆ ಎದ್ದಾಗ ಸಹಜವಾಗಿ ಎರಡೂ ಕೈಗಳನ್ನು ಸವರಿ, ಕಣ್ಣುಗಳಗೆ ಒತ್ತಿಕೊಂಡು ಕರದರ್ಶನ ಮಾಡುವುದಂತು ಸಾಮಾನ್ಯ ಕ್ರಿಯೆಯೇ ಆಗಿದೆ. ದುಬಾರಿ ವೆಚ್ಚದ ವೈದಿಕ ಕರ್ಮಕಾಂಡಗಳನ್ನು ಆಚರಿಸಲು ಕಷ್ಟವಾದ, ಜನಪದಕ್ಕೆ ಆಚರಿಸಲು ಯೋಗ್ಯವಾದ, ಸರಳವಾದ ಸತ್ಯದರ್ಶನವೇ ಆಗಿದೆ.

ಶ್ಲೋಕಾರ್ಥದಂತೆ....

ಜಡತ್ವವನ್ನು ತೊರೆದು ನಮ್ಮ ಈ ಬಲವಾದ ಕೈಗಳಿಂದ ಭೂಮಿಯನ್ನು ಉತ್ತು, ಬಿತ್ತಿ, ನೀರೆರೆದು ಹಸನು ಮಾಡಿದರೆ, ಶ್ರೀ ಲಕ್ಷ್ಮೀ ಧಾನ್ಯರೂಪದಲ್ಲಿ ಅನುಗ್ರಹಿಸಿ, ಮಾರಾಟಮಾಡಿ ಬಂದಂತಹ ಹಣದಲ್ಲಿ ಸಕಲ ಐಶ್ವರ್ಯಗಳನ್ನು ಪಡೆಯಲು ಸಾಧ್ಯ. ಅಂತಹ ಲಕ್ಷ್ಮೀ ನೀನು, ನನ್ನ ಕರವೆಂಬ ಗೃಹದಲ್ಲೇ ವಾಸಿಸಿದ್ದೀಯೆ (ನೆಲೆಸಿದ್ದೀಯೆ), ಅಂತಹ ನಿನ್ನನ್ನು ನಾನು ಈ ಮುಂಜಾನೆ ದರ್ಶಿಸುತ್ತಿದ್ದೇನೆ.

ಹಾಗೆಯೇ ಅಜ್ಞಾನವೆಂಬ ಕತ್ತಲನ್ನು ತೊಡೆದು ಜ್ಞಾನ, ಬುದ್ಧಿಯೆಂಬ ಕೃಷಿ ಮಾಡಿ, ಈ ನನ್ನ ಕರಗಳಿಂದ ಅಕ್ಷರ ಬರೆದು, ಕಲಿತು ವಿದ್ಯೆ ಸಂಪಾದಿಸಿ, ನನ್ನ ಜ್ಞಾನದಿಂದ ಸಕಲ ಸನ್ಮಾನಗಳನ್ನು, ಹಣ, ಅಂತಸ್ತು, ಆಕಾರ, ಅಭಿವೃದ್ಧಿಗಳನ್ನು ಪಡೆಯಲು ಸಾಧ್ಯವಿದೆ. ಅಂತಹ ಸಕಲ ವಿದ್ಯೆಗಳಿಗೂ ಸಾಕಾರ ರೂಪಳಾದ ಹೇ ಸರಸ್ವತಿಯೇ, ನಿನು ನನ್ನ ಈ ಕರಮಧ್ಯದಲ್ಲೇ ನೆಲೆಸಿದ್ದೀಯೆ. ಅಂತಹ ನಿನ್ನನ್ನು ನಾನು ಸ್ಪರ್ಶಿಸುತ್ತೇನೆ. ಮತ್ತು ನಿನ್ನ ದರ್ಶನ ಮಾಡುತ್ತಿದ್ದೇನೆ.

ಹೇ ಗೌರಿ (ಕಾಳಿ, ದುರ್ಗಿ...) ಶಕ್ತಿ, ಸಾಹಸ, ಧೈರ್ಯ, ಸ್ಥೈರ್ಯಗಳಿಗೆ ಪ್ರತೀಕಳಾದ, ದುಷ್ಟ ಶಿಕ್ಷಕಳೂ, ಶಿಷ್ಟ ರಕ್ಷಕಳೂ ಆದ, ನೀನು ನನ್ನ ಈ ಬಲಿಷ್ಠವಾದ ಇಚ್ಛಾಶಕ್ತಿಯಿಂದ ಕ್ರಿಯಾಶಕ್ತಿಗೆ ಪ್ರತಿನಿಧಿಯಾದ ಈ ಕರಗಳಲ್ಲಿ ನೆಲೆಸಿದ್ದೀಯೆ, ಅಂತಹ ನಿನ್ನನ್ನು ನಾನು ಸ್ಪರ್ಶಿಸುತ್ತೇನೆ ಮತ್ತು ದರ್ಶಿಸುತ್ತೇನೆ.

ಸ್ನೇಹಿತರೇ, ಮೇಲಿನ ಅರ್ಥದಂತೆ ನಮ್ಮ ಕೈಗಳಲ್ಲೇ ಇರುವ ತ್ರಿಗುಣಾತ್ಮಕ ಸ್ವರೂಪಳಾದ ಮಹಾ ಲಕ್ಷ್ಮೀ (ಹಣ, ಐಶ್ವರ್ಯ, ಅಭಿವೃದ್ಧಿ) ಮಹಾ ಕಾಳಿ (ಧೈರ್ಯ, ಸ್ಥೈರ್ಯ, ಸಾಹಸ, ವಿಶ್ವಾಸ), ಮಹಾ ಸರಸ್ವತಿಯರ (ವಿದ್ಯೆ, ಬುದ್ಧಿ, ಅರಿವು, ಪ್ರಜ್ಞೆ) ಸಾಂಕೇತಿಕವಾದ ಈ ನಮ್ಮ ಕರಗಳನ್ನು ಮುಂಜಾನೆ ಏಳುವ ಮೊದಲು ಸ್ಪರ್ಶಿಸಿ (ಕರಗಳನ್ನು ಒಂದಕ್ಕೊಂದು ಉಜ್ಜುವುದರಿಂದ ಪ್ರಾಣನಾಡಿಗಳ ಪ್ರಚೋದನೆಯಾಗಿ, ಶಕ್ತಿ ಕೇಂದ್ರಗಳು ಜಾಗೃತಗೊಳ್ಳುತ್ತವೆ). ನಂತರ ಕಣ್ಣುಗಳಿಗೆ ಸ್ಪರ್ಶಿಸಿ, ದರ್ಶಿಸುವುದರಿಂದ, ಈ ಮುಂಜಾನೆಯು ಶುಭಪ್ರದವಾಗಿರಲಿ, ಚೈತನ್ಯದಾಯಕವಾಗಿರಲಿ ಎಂಬುವ ಆಶಯ ಎಷ್ಟು ಅರ್ಥಪೂರ್ಣವಾಗಿದೆ.

ನಮ್ಮ ಸಮಗ್ರ ಬೆಳೆವಣಿಗೆಗೆ, ನಮ್ಮ ಸಂಕಲ್ಪವೇ (ಇಚ್ಛಾಶಕ್ತಿ), ನಮ್ಮ ಕರ್ಮಗಳೇ (ಕ್ರಿಯಾಶಕ್ತಿ) ನಮ್ಮ ಅರಿವೇ (ಜ್ಞಾನ ಶಕ್ತಿ), ಪ್ರಜ್ಞೆಗಳೇ, ಸಂಪೂರ್ಣ ಜವಬ್ದಾರಿಯಾಗಿ, ನಮ್ಮಲ್ಲಿರುವ ದೈವತ್ವವನ್ನೇ ಜಾಗೃತಗೊಳಿಸಿ, ದಿನದ ಆರಂಭವನ್ನು ಶುಭಪ್ರದವಾಗಿಸುವುದು ಸರಳ ಸತ್ಯ, ನಿತ್ಯ ಆಧ್ಯಾತ್ಮದ ಕ್ರಿಯೆಯೇ ಹೊರತು, ಬೇರಾವ ಕರ್ಮಕಾರಣಗಳಿಂದಲ್ಲ ಎನ್ನುವ ಸತ್ಯದರ್ಶನ ನಮ್ಮ ಪೂರ್ವಿಕರದ್ದಾಗಿದೆ.

ಹೇ ಮಹಾ ಲಕ್ಷ್ಮೀ, ಹೇ ಮಹಾ ಸರಸ್ವತೀ, ಹೇ ಮಹಾ ಕಾಳಿ, ನಿತ್ಯ ಸತ್ಯಳೂ ಆದ ತಾಯಿಯೇ ನಮ್ಮ ಈ ಕರಗಳಲ್ಲಿ ಜಾಗೃತಳಾಗು. ಪ್ರಸನ್ನಳಾಗು, ವರಪ್ರದಳಾಗು. ಸಕಲ ಶಕ್ತಿಗಳಿಗೂ ಆದಿಯಾದ ನಿನ್ನನ್ನು, ಈ ಮುಂಜಾನೆ ನಾನು ನಮಸ್ಕರಿಸುತ್ತೇನೆ. ಸ್ಪರ್ಶಿಸಿ, ದರ್ಶಿಸಿ, ದಿನವನ್ನು ಆರಂಭಿಸುತ್ತಿದೇನೆ. ಸಕಲ ಸನ್ಮಂಗಳಾನಿ ಭವಂತು. ●

# ಸಾವಯವ ಕೃಷಿ ಬಗ್ಗೆ ಒಂದಿಷ್ಟು ಮಾಹಿತಿ

**ಎಸ್.ಜಿ. ಪಾಟೀಲ, ವಿಶ್ರಾಂತ ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು**

ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರದ ಸುರಕ್ಷತೆ ನೀಡುವ ವಿಷಯ ಚಿಂತನೆಗೆ ಕಾರಣವಾಗಿದೆ. ಈಗಿರುವ ಶೇಕಡಾ 1.69ರ ಜಾಗತಿಕ ಇಳುವರಿಯನ್ನು 1.75 ರ ಹೆಚ್ಚಿಸಬೇಕಾಗಿದೆ. ಕ್ಷಿಣಿಸುತ್ತಿರುವ ನೈಸರ್ಗಿಕ ಸಂಪನ್ಮೂಲಗಳ ಗುಣಮಟ್ಟ ಹಾಗೂ ವಾತಾವರಣದಲ್ಲಿಯ ವೈಪರಿತ್ಯತದ ಹಿನ್ನೆಲೆಯಲ್ಲಿ ಇದನ್ನು ಸಾಧಿಸುವದು ಜಠಲ ಸಮಸ್ಯೆಯಾಗಿದೆ. ಮುಂಬರುವ ವರ್ಷಗಳಲ್ಲಿ ಆಹಾರದ ಕೊರತೆ ಇಡೇರಿಸಬೇಕಾದಲ್ಲಿ ಈಗಿರುವ ಅನೇಕ ಬೆಳೆಗಳ ಇಳುವರಿಯಲ್ಲಿ ಗಣನೀಯವಾಗಿ ಹೆಚ್ಚಿಸಬೇಕಾಗಿದೆ. ಈಗಿನ ಗೋವಿನ ಜೋಳದ (ಪ್ರತಿಶತ 67%), ಭತ್ತ (42 ರಷ್ಟು), ಗೋದಿಯ (38 ರಷ್ಟು) ಹಾಗೂ ಎಣ್ಣೆಕಾಳುಗಳ (55 ರಷ್ಟು) ಇಳುವರಿಯನ್ನು ಹೆಚ್ಚಿಸಬೇಕಾಗಿದೆ. ಈ ಸಾಧನೆಯನ್ನು ಇಲ್ಲಿಯರವರೆಗೆ ಕಡೆಗಾಣಿಸಿದ ಶೇ.70 ರಷ್ಟು ಬಡ ರೈತರಿಂದ ಸಾಧಿಸಬೇಕಾಗಿದೆ. ಅನೇಕ ಸಮಸ್ಯೆಗಳಿದ್ದಾಗಿಯೂ ನಾವು ಜನರಿಗೆ ಆಹಾರದ ಸುರಕ್ಷತೆ ಒದಗಿಸುವಲ್ಲಿ ಯಶಸ್ವಿಯಾಗಿದ್ದೇವೆ. ಆದರೂ ನಾವು ಅನುಭವಿಸುತ್ತಿರುವ ಬೇಸಾಯ ಪದ್ಧತಿಗಳಾದ ಅತಿ ಉಳುಮೆ, ಸರದ ಬೆಳೆ ಪದ್ಧತಿ, ಕುಗ್ಗುತ್ತಿರುವ ಮಣ್ಣಿನಲ್ಲಿಯ ಸಾವಯವ / ಪೋಷಕಾಂಶಗ ಕೊರತೆಯಿಂದ ಹಾಗೂ ಅತೀ ಮಳೆಯಿಂದಾಗುವ ಮಣ್ಣಿನ ಸವಳಿ ಜೊತೆಗೆ ನೀರು ಇಂಗದೆ ಮಣ್ಣು ನೀರಿನ ಜೊತೆ ಕೊಚ್ಚಿ ಹೋಗಿ ಮಣ್ಣಿನಲ್ಲಿಯ ಪೋಷಕಾಂಶ, ಜೈವಿಕ ಶಕ್ತಿ ಕುಂಠಿತಗೊಂಡು ಹೆಚ್ಚುವರಿ ಇಳುವರಿ ಪಡೆಯುವದು ಕಷ್ಟಕರವಾಗಿದೆ.

ಆಹಾರದ ಸುರಕ್ಷತೆ ಒದಗಿಸುವ ಹಿನ್ನೆಲೆಯಲ್ಲಿ ಹಿಂದಿನ ದಶಕಗಳಲ್ಲಿ ಹೆಚ್ಚಿನ ಪ್ರಮಾಣದ ರಸಗೊಬ್ಬರ, ಕೀಟ, ಕಳೆ ಹಾಗೂ ಕೀಟನಾಶಕಗಳನ್ನು ಬಳಸಿ ಬೆಳೆಗಳ ಇಳುವರಿಯಲ್ಲಿ ವೃದ್ಧಿಯಾದವು. ಅನೇಕರು, ಆಹಾರದ ಹಾಗೂ ವಾತಾವರಣದ ಗುಣಮಟ್ಟ ಪ್ರಶ್ನಿಸಿ ಕೆಲ ಜನರು ಸಾಯವ ಕೃಷಿಯ ಕಡೆಗೆ ಒಲವು ತೋರಿಸುತ್ತಿದ್ದಾರೆ.

ಆಹಾರದ ಸುರಕ್ಷತೆ ಮುಖ್ಯವಾಗಿದ್ದು, ಸಾವಯವ ಕೃಷಿಯ ತಪ್ಪು ಕಲ್ಪನೆಯ ಬಗ್ಗೆ ರೈತರಿಗೆ ತಿಳಿಸಪಡಬೇಕಾಗಿದೆ. ಸಾವಯವ ಕೃಷಿಯಲ್ಲಿ ಸಾವಯವ ಮೂಲಕ ಗೊಬ್ಬರ, ಕೀಟ ಹಾಗೂ ರೋಗನಾಶಕಗಳನ್ನು ಬಳಸಿ ಬೆಳೆಯುವ ವಿಧಾನವಾಗಿದ್ದು ಯಾವುದೇ ರಸಗೊಬ್ಬರ, ಕೀಟ / ರೋಗ / ಕಳೆನಾಶಕಗಳನ್ನು ಬಳಸುವದನ್ನು ನಿಷೇಧಿಸಲಾಗಿದೆ. ಸಾವಯವ ಮೂಲಕ ಪರಿಕರಗಳನ್ನು ಉಪಯೋಗಿಸಿದಾಗ ಮಣ್ಣಿನ ಭೌತಿಕ, ಭೌತಿಕ, ರಸಾಯನಿಕ ಹಾಗೂ ಜೈವಿಕ ಶಕ್ತಿಗಳಲ್ಲಿ ಕ್ರಮೇಣವಾಗಿ ವೃದ್ಧಿಯಾಗುವುದಲ್ಲಿ ಉತ್ತಮ ಗುಣಮಟ್ಟದ ಕಾಳು, ಹಣ್ಣು ಹಂಪುಗಳನ್ನು ಬೆಳೆಯಬಹುದಾದರೂ ಇಳುವರಿ ಮಟ್ಟ ಮೇಲೆ ಅನೇಕ ಸಂದೇಹ ಮತ್ತು ಊಹಾಪೋಹಗಳಿವೆ.

ಸಾವಂಯವ ಕೃಷಿಂಯಲ್ಲಿ ಅಂಯಾ ಜಮೀನುಗಳಲ್ಲಿ ಬೆಳೆದಿರುವ ಸಾವಯವ ಮೂಲದ ಪರಿಕರಗಳನ್ನು ಜಮೀನುಗಳಿಗೆ ಮರಳಿಸುವುದಲ್ಲದೇ ಕಾಳಿನ ಅಥವಾ ಇನ್ನಾವುದೆ ರೂಪದ ಉಳಿಕೆಗಳನ್ನು ಹೊರ ಹೊದ ಪ್ರಮಾಣದ ಪೋಷಕಾಂಶಗಳನ್ನು ಬೇರೆ ಜಮೀನಿಂದ ಒದಗಿಸಿದಾಗ ಅದು ಪರತಿ 100 ರಷ್ಟು ಸಾವಯವ ಕೃಷಿಯಾಗುವುದು. ಸಾವಯವ ಕೃಷಿಯಲ್ಲಿ ವಿಷಯದ ಬಗ್ಗೆ ತಿಳಿಯಬೇಕಾದುದು ಉಪಯೋಗಿಸುವ ಸಾವಯವ ಪರಿಕರಗಳ ಕೊಳೆಯುವ ಗತಿ ಮತ್ತು ಉಪಯೋಗವಾಗುವ ಮೂಲ ಸಾವಯವ ವಸ್ತು.

ಹಸಿರೆಲೆ ಮೂಲಕ ಸಾವಯವ ಪರಿಕರಗಳು / ಉಳುಕೆಗಳಿಂದ ಗ್ಲಿರಿಸಿಡಿಯಾ, ಡೈಯಿಂಚಾ, ಸಸ್ಬೆನಿಯಾ (ಚೊಗಚೆ) ಯಂತ ಹಸಿರೆಲೆಗಳು, ತೀವ್ರ ವೇಗದಲ್ಲಿ ಕೊಳೆತು ಪೋಷಕಾಂಶಗಳನ್ನು ಒದಗಿಸುವುದು. ಹಸಿರೆಲೆ ಗೊಬ್ಬರದ ಮೂಲಗಳಾದ ಗ್ಲಿರಿಸಿಡಿಯಾ, ಡೈಯಿಂಚಾ ಇತ್ಯಾದಿಗಳು ಹಾಕಿದ ಪ್ರಮಾಣದ ಅರ್ಧದಷ್ಟು ಭೂಮಿಯಲ್ಲಿ ಕೊಳೆತ ಪೋಷಕಾಂಶಗಳನ್ನು ಒದಗಿಸಲು ಸುಮಾರು 8–20 ದನಗಳು ಬೇಕಾಗಿದ್ದಾವೆ. ಹತ್ತಿ, ತೊಗರಿ, ಗೋವಿನಜೋಳ, ಭತ್ತ ಇತ್ಯಾದಿ ಮೂಲದ ಸಾವಯವಗಳು ಹಾಕಿದ ಅರ್ಧದಷ್ಟು ಕೊಳೆಯಲು ಸುಮಾರು 200–260 ದಿನಗಳು ಬೇಕಾಗುತ್ತದೆ.

**ಸಾವಯವ ಗೊಬ್ಬರ ಮೂಲದ ಪರಿಕರಗಳ ಬಗ್ಗೆ ಗಮನಿಸಬೇಕಾದ ವಿಷಯಗಳು**

- ಸಾವಯುವ ಮೂಲದ ಪರಿಕರ / ಉಳುಕೆಗಳಲ್ಲಿಯ ಪೋಷಕಾಂಶಗಳು ಮೂಲತ ಃ ಬೇಕಾಗಿಂದ (ನೀರಿನಲ್ಲಿ ಕರಗದ) ರೂಪದಿಂದ ಬೇಕಾಗುವ (ಕರಗುವ) ರೂಪಾಂತರಗೊಳ್ಳುವ ಕ್ರಿಯೆ ಅಗತ್ಯ. ಕೊಳೆಯುವ ಪ್ರಕ್ರಿಯೆ ಇದರ ಮೂಲ.
- ಹಸಿರೆಲೆ ಕೊಳೆಯುವ ವೇಗ ಮತ್ತು ಪ್ರಮಾಣ ವೇಗವಾಗಿದ್ದು ಬೆಳೆಗಳಿಗೆ ಪೋಷಕಾಂಶಗಳಿಗೆ ಲಭ್ಯಯತೆಯೂ ಕೂಡ □ ದೊರಕದು ಸಾಧ್ಯ.
- ಹತ್ತಿ, ಸೂರ್ಯಪಾನ, ಭತ್ತ, ಗೋವಿನ ಜೋಳ ಇತ್ಯಾದಿಗಳಂತಹ ಸಾವಯುವಗಳು ಭೂಮಿಯಲ್ಲಿ ನಿಧಾನ ಗತಿಯಲ್ಲಿ ಕೊಳೆಯುವದರಿಂದ ಪೋಷಕಾಂಶಗಳು ನಿಧಾನವಾಗಿ ಲಭ್ಯವಾಗಿರುವದರಿಂದ ವೇಗದಲ್ಲಿ ಬೆಳೆಯುವ ಮೊದಲಿನ ಹರಿತುಗಳಲ್ಲಿ ಪೋಷಕಾಂಶಗಳು, ಬೇಕಾಗುವ ಪ್ರಮಾಣದಲ್ಲಿ ದೊರಕದೆ ಕುಂಠಿತ ಕಾಣಬಹುದು. ನಂತರದ ಹಂತಗಳಲ್ಲಿ ಪೋಷಕಾಂಗಳ ಅವಶ್ಯಕತೆ ಇರದೆ ಬಿಡುಗೆಯಾದ ಪೋಷಕಾಂಶಗಳು ಮಣ್ಣಿನಲ್ಲಿ ಶೇಖರಣೆಯಾಗಿ ಮುಂದಿನ ಹಂಗಾಮಿನಲ್ಲಿ ಲಭ್ಯವಾಗುವದು. ಆದರೆ ಮೊದಲಿನ ಹಂತಗಳಲ್ಲಿ ಬೇಕಾದ ಪ್ರಮಾಣದಲ್ಲಿ ದೊರಕದೆ ಕೇವಲ ಸಾವಯವ ಮೂಲದ ಗೊಬ್ಬರದಿಂದ ಇಳುವರಿ ಕುಂಠಿತವಾಗುದರಲ್ಲಿ ಯಾವುದೇ ಸಂದೇಹವಿಲ್ಲ. ನಂತರ ಹಂತಗಳಲ್ಲಿ ಉಪಯೋಗವಾದೇ ಉಳಿದ ಪೋಷಕಾಂಶ ಗಳು, 7–10 ವರ್ಷಗಳ ನಂತರ ಅವಶ್ಯ ಪ್ರಮಾಣದಲ್ಲಿ ಲಭ್ಯವಾಗಿ ಸಾಮಾನ್ಯ

ಇಳುವರಿ ಪಡೆಯಬಹುದು. ಜಾಗತಿಕ ಮಟ್ಟದಲ್ಲಿ ಲಭ್ಯವಿರುವ ಮಾಹಿತಿಗಳಿದ್ದರೂ ಅನೇಕ ಸಂಸ್ಥೆಗಳು ಹಾಗೂ ರಾಜ್ಯ ಸರಕಾರಗಳು ಸಾವಯವ ಕೃಷಿಗೆ ಮನ್ನಣೆ ಹಾಸ್ಯಾಸ್ಪದವಾಗಿದೆ.

**ಸಿಕ್ಕಿಂ ರಾಜ್ಯದ ಸಾವಯುವ ಕೃಷಿಯ ದುರಂತ ದಂತ ಕಥೆ**

ಅನೇಕ ರಾಜ್ಯಗಳಲ್ಲಿ ಅಲ್ಪ ಪ್ರಮಾಣದಲ್ಲಿ ಸಾವಯವ ಕೃಷಿಯ ಬಗ್ಗೆ ಒಲವು ತೊರುತ್ತಿದ್ದರೂ 2012 ರಲ್ಲಿ ದೂರದರ್ಶನದಲ್ಲಿ ಬಿತ್ತರಿಸಿದ ಸತ್ಯಮೇವ ಜಯತೆ ಎಂಬ ಕಾರ್ಯಕ್ರಮ ಹಾಗೂ ವಾಶಿಂಗಟನ್ ಟೈಮ್ಸ್ ಪ್ರಕಟಗೊಂಡ ಸಿಕ್ಕಿಂ ರಾಜ್ಯದ ಸಾವಯವ ಕೃಷಿ ಪದ್ಧತಿ ಈ ರಾಜ್ಯದ ಕೀರ್ತಿ ಹೆಚ್ಚಿಸಿ ಜಯಕಾರದೊಂದಿಗೆ ಈಡೀ ರಾಜ್ಯವನ್ನು ಸಾವಯವ ಕೃಷಿ ರಾಜ್ಯ ಎಂದು ಘೋಷಿಸಲಾಯಿಲ್ಲದೇ ರಸಾಯನಿಕ ರಸಗೊಬ್ಬರ, ಕೀಟ, ರೋಗ ಹಾಗೂ ಕಳೆನಾಶಕಗಳ ಮೇಲೆ ನಿರ್ಬಂದ ಹೇರಲಾಯಿತು. ಸಾವಯುವ ಕೃಷಿಯಿಂದ ಈಗಾಗಲೇ ತಿಳಿಸಿದಂತೆ ಅನೇಕ ಕೃಷಿ ಉತ್ಪನ್ನಗಳ ಮೇಲೆ ಗಂಭೀರ ಪರಿಣಾಮ ಬರಿ ಇಳುವರಿಯಲ್ಲಿ ಕುಂಠಿತಗೊಂಡು ಆಹಾರ ಉತ್ಪಾದನೆ ಸಂಕಷ್ಟದಲ್ಲಿ ಸಿಲುಕಿದೆಯಲ್ಲದೇ ಆ ರಾಜ್ಯ ಆಹಾರ ಸುರಕ್ಷತೆ ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಲಭ್ಯವಾಗಿರುವ ಮಾಹಿತಿ ಪ್ರಕಾರ ಬೆಳೆಯುವ ಬಹುತೇಕ ಬೆಳೆಗಳು. ಇಳುವರಿಯಲ್ಲಾದ ಇಳಿಮುಖದ ನೋಟ ನೋಡಬಹುದು.

**ಸಿಕ್ಕಿಂ ರಾಜ್ಯದ ಆಹಾರದ ಮುಖ್ಯ ಘಟಕಗಳ ಇಳುವರಿ ಪಟ್ಟಿ (ಸಾವಿರ ಟನ್‌ಗಳಲ್ಲಿ)**

| ಆಹಾರ ಧಾನ್ಯ | 1995–96 | 2015–16 |
|---|---|---|
| ಭತ್ತ | 25.30 | 19.70 |
| ಗೋಧಿ | 21.60 | 0.40 |
| ಬಾರ್ಲಿ | 2.90 | 0.50 |
| ಒಕ್ ಅಮೇರಿಕನ್ ಗೋದಿ | 0.50 | 3.50 |
| ರಾಗಿ | 7.30 | 2.90 |
| ದ್ವಿದಳ ಧಾನ್ಯಗಳು | 15.0 | 5.40 |
| **ಒಟ್ಟು** | **72.70** | **32.30** |

*ಮೂಲ: ಕೃಷಿ ಇಲಾಖೆ, ಸಿಕ್ಕಿಂ ರಾಜ್ಯ*

ಕಳೆದ 20 ವರ್ಷಗಳಲ್ಲಿ ಸತತವಾಗಿ ಅನುಸರಿಸುತ್ತಿರುವ ಸಾವಯವ ಕೃಷಿ ಪದ್ಧತಿಯಿಂದಿ ಈ ರಾಷ್ಟ್ರದ ಎಲ್ಲ ಪ್ರಮುಖ ಬೆಳೆಗಳ ಈಳುವರಿಯಲ್ಲಿ ಗಣನೀಯವಾಗಿ ಕಡಿಮೆಯಾಗಿ ಸಾವಂಯುವ ಕೃಷಿ ಸಂಪೂರ್ಣವಾಗಿ ವಿಫಲವಾಗಿದೆ. ಈ ರಾಜ್ಯದಲ್ಲಿ ಆಹಾರದ ಅಸ್ಥಿರತೆ ಮತ್ತು ಅಸುರಕ್ಷತೆಯನ್ನು ರಾಜ್ಯಸರಕಾರವೇ ಅಡಿಪಾಯವನ್ನಿಡಲಾಗಿದೆ, ಅಲ್ಲದೆ ಆಹಾರದಲ್ಲಿ ಸ್ವಾಲುಬಿಂಯಲ್ಲಿದ್ದು ರಾಜ್ಯ ಇಹಪರಾವಲಂಬಿಯಾಗಿದೆ. ಅಕ್ಕಿ ಈ ರಾಜ್ಯದ ಪ್ರಮುಖ ಆಹಾರವಾಗಿದೆ. ಪ್ರತಿಯೊಬ್ಬರಿಗೆ ಸರಾಸರಿ 40–4 ಕಿ.ಗ್ರಾಂ ಬೇಕಾಗಿದ್ದು ಇಗ 17.1 ಕಿ.ಗ್ರಾಂ ಗೆ ಇಳಿದಿದೆ. ಈ ರಾಜ್ಯ ಇಗ ಕೇವಲ ಶೇಕಡಾ 20ರಷ್ಟು ಬೆಳೆಯುತ್ತಿದ್ದು 11700 ಟನ್ ದ್ವಿದಳದಾನ್ಯ ಇಂದ 5800 ಟನ್‌ಗಳಾಗಿದ್ದ ಕೊರತೆ ನಿಗಿಸಲಬೇಕಾಗಿದೆ. ಅದರಂತೆ ಆಲೂಗಡ್ಡೆ ಗೋದಿ ಉತ್ಪಾದನೆಯಲ್ಲಿಯೂ ತೀವ್ರ ಹಿನ್ನಡೆಯಾಗಿದ್ದು ಬೇರೆ ರಾಜ್ಯಗಳ ಮೊರೆ ಹೋಗಬೇಕಾಗಿದೆ. ಆದರೆ ಈ ರಾಜ್ಯದಲ್ಲಿ ಗೋವಿನಜೋಳದಲ್ಲಿ ಮಾತ್ರ ಹೆಚ್ಚುವರಿ ಕಂಡುಬಂದಿದೆ.

ಈ ಮೊದಲು ಸಿಕ್ಕಿಂ ರಾಜ್ಯ ಯಾಲಕ್ಕಿಯಲ್ಲಿ ಮೂಂಚುಣಿಯಲ್ಲಿದ್ದುದು (5400 ಟನ್) ಈಗ ಹಿನ್ನಡೆ ಅನುಭವಿಸಿದೆ (4000 ಅನಟ) ನೇಪಾಲ ದೇಶ ಸಿಕ್ಕಿಂ ರಾಜ್ಯವನ್ನು ಹಿಮ್ಮೆಟ್ಟಿಸಿ ಅತಿ ಹೆಚ್ಚು ಬೆಳೆಯುವ ದೇಶವಾಗಿದೆ. ರಾಜ್ಯದಲ್ಲಿ ಸಾವಯವ ಮೂಲದ ಉತ್ಪನ್ನಗಳಿಗೆ ಹೆಚ್ಚು ಬೆಲೆ ಸಿಗುತ್ತಿದ್ದರು ಇಳುವರಿಯಲ್ಲಿಯ ಕಡಿತದಿಂದಾಗಿ ಕೃಷಿಯ ಆರ್ಥಿಕತೆಯಲ್ಲಿ ಹಿಮ್ಮಡೆಯಾಗಿದೆ. ಆದ್ದರಿಂದ ಆರ್ಥಿಕ ಹಾಗು ಆಹಾರದ ಬದ್ರತೆ ದೃಷ್ಟಿಯಿಂದ ಹೆಚ್ಚು ಇಳುವರಿ ಮಾರ್ಗದ ಕೃಷಿ ಪದ್ಧತಿಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಸಾವಯವ ಕೃಷಿಯಿಂದ ವ್ಯಶನಾವ್ಯಕ್ತವಾಗಿದ್ದು ಸಾಕ್ತ ಹಾಗೂ ಸುರಕ್ಷಿತ ಪದ್ಧತಿ ಕಡೆಗೆ ಗಮನಹರಿಸುವುದು ಪ್ರಸಕ್ತವಾಗಿದೆ. ದೇಶದಲ್ಲಿ ಕೃಷಿಯಲ್ಲಿ ಮುಂದುವರೆದ ರಾಜ್ಯಗಳಲ್ಲಿ ಅನುಸರಿಸುವ ಪದ್ಧತಿಗಳು ಸೂಕ್ತವಾಗಿವೆ. ಸಿಕ್ಕಿಂ ರಾಜ್ಯದಲ್ಲಿಂಯ ಸಾವಂಯುವ ಹಾಗೂ ಪಂಜಾಬದಲ್ಲಿಯ ಸಾಂಪ್ರದಾಯಕ ಕೃಷಿ ಪದ್ಧತಿಯ ಇಳುವರಿಂಯ ವ್ಯತ್ಯಾಸದಲ್ಲಿ ನೋಟ ನೋಡಬಹುದು. ಪಜಾಬ ರಾಜ್ಯದ ಸಾಂಪ್ರದಾಯಿಕ ಹಾಗೂ ಸಿಕ್ಕಿಂನ ಸಾವಯವ ಕೃಷಿ ಪದ್ದತಿಯಲ್ಲಿಯ ಇಳುವರಿ (ಕಿ.ಗ್ರಾಂ ಪ್ರತಿ ಹೆಕ್ಟೆರಿಗೆ)

| | ರಾಜ್ಯ | |
|---|---|---|
| ಬೆಳೆ | ಪಂಜಾಬ | ಸಿಕ್ಕಿಂ |
| ಭತ್ತ | 4149 | 1845 |
| ಗೋಧಿ | 5743 | 1071 |
| ಬಾರ್ಲೀ | 3667 | 1057 |
| ಗೋವಿನಜೋಳ | 3845 | 1753 |
| ಆಲೂಗಡ್ಡೆ | 25969 | 4870 |

*ಮೂಲ: ಸಿಕ್ಕೀಂ ರಾಜ್ಯದ ವಾರ್ಷಿಕ ವರದಿ, ರಂಜಾಬ ರಾಜ್ಯದ ಆರ್ಥಿಕ ಸಮೀಕ್ಷೆ 2016–17*

ಪಂಜಾಬ್ ರಾಜ್ಯದಲ್ಲಿ ಇನ್ನುಳಿದ ಕೆಲವು ರಾಜ್ಯಗಳಂತೆ ಕೃಷಿಯಲ್ಲಿ ಮುನ್ನಡೆಯಲ್ಲಿದ್ದು ಅನೇಕ ಬೆಳೆಗಳ ಇಳಿವರಿಯಲ್ಲಿ ಮಹತ್ವದ ಸಾಧನೆ ಮಾಡಲಾಗಿದೆ. ಪಂಜಾಬ ಮತ್ತು ಸಿಕ್ಕಿಂ ರಾಜ್ಯಗಳಲ್ಲಿಯ ಬೆಳೆಯಲ್ಲಿರುವ ವ್ಯತ್ಯಾಸ ಗಮನಿಸಿದಾಗ ಭತ್ತದಲ್ಲಿ (ಶೇಕಡಾ 346 ರಷ್ಟು) ಹೆಚ್ಚುವರಿ ಇಳುವರಿ ಪಡೆದು ಆ ರಾಜ್ಯಕ್ಕೆ ಹಾಗೂ ದೇಶದ ಆಹಾರದ ಬಧ್ರತೆಗೆ ಕಾರಣವಾಗಿದೆ. ಆದರೆ ಸಿಕ್ಕಿಂ ರಾಜ್ಯದ ಸಾವಯವ ಕೃಷಿಯಿಂದಾಗಿ ರೈತರ ವರಮಾನದಲ್ಲಿ ಇಳಿತದಿಂದ ಮಾನಸಿಕತೆಗೆ ಹಾಗೂ ಆತ್ಮಹತ್ಯತೆಗೆ ಕಾರಣವಾಗಿದೆ. ಈ ರಾಜ್ಯದ ಪ್ರತಿ ಲಕ್ಷದ ಜನಸಂಖ್ಯೆಯಲ್ಲಿ 37.5 ರಷ್ಟು ಆತ್ಮಹತ್ಯೆ ಪ್ರಕರಣಗಳು ದಾಖಲಾಗಿದ್ದು ಇದರ ಪ್ರಮಾಣ 2000 ರಲ್ಲಿ 14.9 ಗಳಿದ್ದನ್ನು ಗಮನಿಸಬಹುದಾಗಿದೆ. ಸಿಕ್ಕಿಂ ರಾಜ್ಯದ ಸಾವಯವ ಪದ್ಧತಿ ಅಸಂಬಂದ್ಧವಾಗಿರದೆ - ದಂತ ಕತೆಯಾಗಿದೆ.

ಇನ್ನೂ ಜಾಗತಿಕ ಮಟ್ಟದಲ್ಲಿಯ ಸಾವಯವ ಕೃಷಿ ಅಳವಡಿಕೆ ಬಗ್ಗೆ ಗಮನ ಹರಿಸಿದಾಗ ಬಹುತೇಕ ಎಲ್ಲ ದೇಶಗಳಲ್ಲಿ ಸಾಂಪ್ರದಾಯಿಕ ಕೃಷಿ ಪ್ರಭಾವಿತವಾಗಿದ್ದು ಆಹಾರ ಸುರಕ್ಷತೆ ದೃಷ್ಠಿಯಿಂದ ಬಹುತೇಕ ಜನ ಅನುಸರಿಸುತ್ತಿದ್ದು ಕೇವಲ ಶೇಕಡಾ 1 ಕ್ಕಿಂತ ಕಡಿಮೆ ಜನ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದರೆ. ಈ ಪದ್ಧತಿಯ ತೂಕ ಪ್ರಿಯತೆಯನ್ನು ತೋರಿಸುತ್ತದೆ.

**ಜಾಗತಿಕ ಮಟ್ಟದಲ್ಲಿಯ ಸಾವಯವ ಕೃಷಿಯ ನೋಟ**

| ದೇಶ | ಕೃಷಿಯಲ್ಲಿ | |
|---|---|---|
| | ಶೇಕಡ (%) ಸಾವಯವ ಕಾಣಿಕೆ | ಶೇಕಡ (%) ಸಾಂಪ್ರದಾಯಕ ಕೃಷಿಯ ಕಾಣಿಕೆ |
| ಚೀನಾ | 0.4 | 99.6 |
| ಭಾರತ | 0.8 | 99.2 |
| ಅಮೇರಿಕಾ | 0.6 | 99.4 |
| ಬ್ರೇಜಿಲ್ | 0.3 | 99.7 |
| ಇಂಡೋನೇಷಿಯಾ | 0.2 | 99.8 |

ಶ್ರೇಷ್ಠ ಕೃಷಿ ವಿಜ್ಞಾನಿಯಲ್ಲಿ ಕೃಷಿ ವಿಜ್ಞಾನಕ್ಕೆ ಮೊಟ್ಟ ಮೊದಲ ನೋಬೆಲ್ ಪಾರಿತೋಷಕ ಪಡೆದ ಡಾ॥ ನಾರ್ಮ ಬೋರ್ಲಾಗ್ ರವರ (2002) ಪ್ರಕಾರ ನಾವು ಜಗತ್ತಿನ 600 ಕೋಟಿ ಜನರ ಹಸಿವನ್ನು ನಿಗಿಸುವದು. ಸಾವಯವ ಕೃಷಿಯಿಂದ ಸಾಧ್ಯವಿಲ್ಲ. ಒಂದು ವೇಳೆ ಈ – ನಮ್ಮಲ್ಲಿಯ ಎಲ್ಲಾ ಅರಣ್ಯ ಪ್ರದೇಶವನ್ನು ಕೃಷಿಗೆ ಪರಿವರ್ತಿಸಿದರೂ ಅದು ಬರಿ ಕೇಲವು ವರ್ಷಗಳವರೆಗೆ ಮಾತ್ರ ಸಾಧ್ಯ ಎಂದು ಹೇಳುವದರಲ್ಲಿ ನಿಜಾಂಶವಿದೆ.

ಅದರಂತೆ ಇನ್ನೋರ್ವ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ರಸಾಯನಿಕ ಶಾಸ್ತ್ರಜ್ಞರ ಪ್ರಕಾರ ಜಗತ್ತಿನ ಮಾನವನು ಈ ಶತಮಾನದಲ್ಲಿ ವಿಪತ್ತು ಕಾಣಲಿದ್ದಾನೆ. ಜಾಗತಿಕ ತಾಪಮಾನದಲ್ಲಿನ ವೈಪರೀತ್ಯದಿಂದಲೇ ಜಗತ್ತಿನಲ್ಲಿ ಪ್ರೋತ್ಸಾಹಿಸುತ್ತಿರುವ ಈ ಸಾವಯವ ಕೃಷಿ ಪದ್ಧತಿಯಿಂದ ಸುಮಾರು 200 ಕೋಟಿ ಜನರು ಆಹಾರ ಸಿಗದೇ ಸಾವನ್ನಪ್ಪಬಹುದೆಂದೆಂದು ಅವರು ಎಚ್ಚರಿಸಿದ್ದಾರೆ.


ಅಮೇರಿಕಾ ದೇಶದ ಹಿಂದಿನ ಕೃಷಿನ ಕಾರ್ಯದರ್ಶಿಗಳ (1971) ಪ್ರಕಾರ ಸಾವಯವ ಕೃಷಿಯನ್ನು ಅಳವಡಿಸಿದಲ್ಲಿ ನಾವು ಅಮೇರಿಕಾ ದೇಶದಲ್ಲಿಯ ಯಾವ 500 ಲಕ್ಷ ಜನರನ್ನು ಉಪವಾಸಕ್ಕೆ ತಳ್ಳಬೇಕಾಗಿದೆ ಎಂದು ನಿರ್ಧರಿಸಬೇಕಾದೆ ಎಚ್ಚರಿಸಿದರಿಂದ ಅಲ್ಲಿ ಸಾವಯವ ಮಾನ್ಯತೆ ಪಡೆಯದೇ ಹಿಮ್ಮಡೆ ಅನುಭವಿಸಬೇಕಾಯಿತು.

ಸಾವಯವ ಕೃಷಿ ಅನುಚಿತ ಕ್ರಮವಾಗಿದ್ದು ಆಹಾರದ ಸುರಕ್ಷತೆ ಹಾಗೂ ಸಂರಕ್ಷತೆ ಅಸಾಧ್ಯ. ಸಿಕ್ಕಿಂ ರಾಜ್ಯದ ಪದ್ಧತಿ ದಂತ ಕತೆಯಾಗಿದ್ದು ಸಂಪೂರ್ಣ ವಿಫಲವಾದ ಯೋಜನೆ. ಅದು ಅಚಾಣಕ್ಷಿತದ ಹೆಜ್ಜೆಯಾಗಿದ್ದು ರೈತರು □ ರಾಜಕಾರಣಿಗಳು ಎಚ್ಚರ ವಹಿಸಬೇಕಾಗಿದೆ.

**ಆಧಾರಗಳು**


1. ವಾರ್ಷಿಕ ವರದಿ, ಸವಳ ಯೋಜನೆ, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ (1990–1998)
2. ವಾರ್ಷಿಕ ವರದಿ, ನೀರು ನಿರ್ವಹಣಾ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ, ಬೆಳವಟಗಿ, ಧಾರವಾಡ (2002–2007).
3. ದ ಸಂಜೆ ಗಾರ್ಡಿಯಾನ್, ಜೂನ್ 24–30, 2014.


## ಅಮರ ಯೋಗಿ ನೇಗಿಲ ಯೋಗಿ



ಜೀವ ಮಿತ್ರ ಧರಣಿ ಪುತ್ರ
ಬಲು ಹಿರಿದು ನಿನ್ನ ಪಾತ್ರ॥
ಉತ್ತಿ ಬಿತ್ತಿ ಬೆಳೆವೆ ಅನ್ನ
ನಿಸರ್ಗವೆ ಮನೆ ನೀನೆಜಮಾನ

ಬಲ್ಲಿದ ಬಸವನ ಹೆಗಲು
ಬಲರಾಮ ನೇಗಿಲು
ಮಾತೆ ಸೀತೆಯ ಮಡಿಲು
ಸೊಗಸೆಲ್ಲವೂ ಇರಲು॥

ಬೆಳೆಯುವೆ ಬೆಳೆ
ನೀಡುವೆ ಜೀವಕೆ ಕಳೆ
ತರುವೆ ಸಮೃದ್ಧಿಯ ಮಳೆ
ನೀನಿರಲು ಸಂತಸದಿ ತೂಗುವುದು ಇಳೆ॥

ನಿತ್ಯವೂ ತಪ್ಪದು ಮಳೆಬಿಸಿಲು ಸ್ನಾನ
ಮೌನ ಕಾಯಕವೇ ನಿನ್ನಯ ಗಾನ
ತ್ಯಾಗದುತ್ತುಂಗದ ಜೀವನ
ಬೇಸರಿಕೆಗಿಲ್ಲ ಸ್ಥಾನ॥

ಬೇಕಿಲ್ಲ ಆಧುನಿಕತೆಯ ಸೋಗು ದುರಾಸೆ
ಆಗದಿರಲಿ ಸಂಪನ್ಮೂಲಗಳ ದುರ್ಭಳಕೆ
ಸಾಲದಿ ಸಾದ್ಯವೆ ಗಳಿಕೆ
ಆಕಾಶಕೆ ಉಂಟೆ ಸುಲಭದ ಸೇತುವೆ॥

ನೀನೆ ಆದಿ ನೀನೆ ಅಂತ್ಯ, ಬೆರಗು ಮೆರಗು ನೀನೆ ನಿತ್ಯ
ಬದುಕಲು ನೀ ಬದುಕೀತು ಮನುಕುಲ, ಅಲ್ಲ ಮಿಥ್ಯ
ಧೈರ್ಯ ಸಂಯಮಗಳೆ ಬಂಡಿಗಾಲಿಗಳು, ನಿಜಜೀವನದ ಸತ್ಯ
ಭೋಗಿಯಲ್ಲ ಅಮರ ಯೋಗಿ, ತರವಲ್ಲ ನಿನ್ನ ಆತ್ಮಹತ್ಯೆ.॥

**–ಬಿ. ಎಂ. ಚಿತ್ತಾಪೂರ**


## ಅಭಿನಂದನೆಗಳು


ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ಇವರು ಜುಲೈ 2018ರಲ್ಲಿ ಡಾ॥ ಎಂ. ಮಹದೇವಪ್ಪನವರನ್ನು ಸನ್ಮಾನಿಸಿ, ಅಭಿನಂದನಾ ಪತ್ರವನ್ನು ನೀಡಿರುತ್ತಾರೆ. ಈ ವರ್ಷದ ಬೆಂಗಳೂರು ಮಹಾನಗರ ಪಾಲಿಕೆಯವರು ಕೊಡುವ **"ನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ"ಯನ್ನೂ ಸಹ ಡಾ॥ ಎಂ. ಮಹದೇವಪ್ಪನವರು** ಪಡೆದಿರುತ್ತಾರೆ. ಹಂಪಿ ವಿಶ್ವವಿದ್ಯಾಲಯ 2017ರಲ್ಲಿ ಪ್ರಕಟಿಸಿದ ಇವರ ಕನ್ನಡ ಪುಸ್ತಕ **"ವೈಜ್ಞಾನಿಕ ಕೃಷಿ"**ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ **"ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2017"** ದೊರಕಿರುತ್ತದೆ. ಅದಕ್ಕಾಗಿ ಡಾ॥ ಎಂ. ಮಹದೇವಪ್ಪನವರನ್ನು "ಕೃಷಿ ಕಾಯಕ" ಪತ್ರಿಕೆಯ ಸಂಪಾದಕ ಮಂಡಳಿಯು ಹಾರ್ಧಿಕವಾಗಿ ಅಭಿನಂದಿಸುತ್ತದೆ.

# ಮಲ್ಲಿಗೆ ತೋಟದ ಯಜಮಾನಿ ಪ್ರಮಿಳಾ ಎತ್ತಿನಮನಿ

ಕಿಶನ್ ರಾವ್ ಕುಲಕರ್ಣಿ ಮತ್ತು ಶೋಭಾ ಹೆಚ್.ಜಿ.





**ಕೃಷಿ ಕ್ಷೇತ್ರದಲ್ಲಿ ಮಹಿಳೆಯ ಸಾಧನೆಯ ಬದುಕು**

**ಮಾದರಿ ಮಹಿಳೆ**

ಅದು ಚುಮು–ಚುಮು ನಸುಕಿನ ಮಂದ ಬೆಳಕು, ದೇಹಕ್ಕೆ ಹಿತನೀಡುವ ತಂಗಾಳಿ, ಬಾನಾಡಿಗಳ ಉಲಿವು, ಗೋವುಗಳ ಕೂಗು, ಕಣ್ಣಾಯಿಸಿದಲ್ಲೆಲ್ಲಾ ಹಸಿರು ಹೊದ್ದು ಮೊಗ್ಗುಗಳಿಂದ ತುಂಬಿ ಜೀಕುತ್ತಿರುವ ಮಲ್ಲಿಗೆ ಬಳ್ಳಿಯ ಗೆಲ್ಲುಗಳು, ಸೂರ್ಯೋದಯವಾಗುವುದರೊಳಗೆ ಉಡಿ ತುಂಬ ಮೊಗ್ಗು ಬಿಡಿಸಿ ಕೈ ತುಂಬ ಕಾಸು ತೆಗೆದುಕೊಂಡು ಹೋಗಬೇಕು ಎಂಬ ತವಕದಿಂದ ಮಲ್ಲಿಗೆಯ ಸಾಲು–ಸಾಲು ಹಿಡಿದು ಮೊಗ್ಗುಗಳನ್ನು ಬಿಡಿಸುತ್ತಿರುವ ಕೂಲಿ ಹೆಂಗಳೆಯರ ದಂಡು, ಇಂದು ಎಷ್ಟು ಆಳುಗಳು ಬಂದಿದ್ದಾರೆ? ಮೊಗ್ಗುಗಳ ಸ್ಥಿತಿ ಹೇಗಿದೆ? ಯಾವ ಕಡೆ ನೀರು ಹರಿಸಬೇಕು? ಮಲ್ಲಿಗೆಗೆ ಯಾವ–ಯಾವ ಮಾರುಕಟ್ಟೆಗಳಿಂದ ಎಷ್ಟೆಷ್ಟು ಬೇಡಿಕೆ ಬಂದಿದೆ? ಎಂಬೆಲ್ಲ ತರ್ಕದೊಂದಿಗೆ ಮಲ್ಲಿಗೆ ತೋಟ ಸುತ್ತಿ ಕಾರ್ಮಿಕರ ಯೋಗ ಕ್ಷೇಮ ಕೇಳುತ್ತಾ ಪಾದರಸದಂತೆ ಸಂಚರಿಸುವ ತೋಟದ ಯಜಮಾನಿ? ಹೀಗೆ ಬೆಳಗು ಹರಿಯುತ್ತಿದ್ದಂತೆ ನೂರಾರು ಕೂಲಿ ಆಳುಗಳಿಂದ ಮಲ್ಲಿಗೆ ತೋಟ ತುಂಬಿ ಪರಿಸರದ ಜೊತೆಗೆ ಯಾಂತ್ರಿಕ ಚಟುವಟಿಕೆಯ ಪಾಠ ಹೇಳುವಂತಿರುತ್ತದೆ. ಇಂತಹ ವಾತಾವರಣ, ಹಿತವೆನಿಸುವ ಈ ಎಲ್ಲ ದೃಶಗಳನ್ನು ಬೆಳಗಿನ ಹೊತ್ತಿನಲ್ಲಿ ನೋಡಿದ ಹೃನ್ಮನಗಳಿಗೆ ಅದೆಷ್ಟೋ ಹಿತ ನೀಡುತ್ತದೆ.

ಅಂದ ಹಾಗೆ ಹೆಂಗಳೆಂಒಬ್ಬರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಈ 15 ಎಕರೆಯ ಮಲ್ಲಿಗೆ ತೋಟ ಇರುವುದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಶಿವಾನಂದ ನಗರದಲ್ಲಿ. ಈ ತೋಟದ ಯಜಮಾನಿ ಪ್ರಮೀಳ ಎತ್ತಿನಮನಿ, ಸದ್ಯ ಕೃಷಿ ಕ್ಷೇತ್ರದಲ್ಲಿ ಅತ್ಯಂತ ಅನುಭವ ಹೊಂದಿದ ಮಹಿಳೆ ಎನ್ನಬಹುದು. ಸುಮಾರು 15 ವರ್ಷಗಳಿಂದ ಸಾವಯವ ಕೃಷಿ, ಜೀವಾಮೃತ, ಗೋರಕ್ಷಣೆ, ಜಲಸಂರಕ್ಷಣೆ, ಎರೆಗೊಬ್ಬರದಂತಹ ಹತ್ತಾರು ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ತಮ್ಮ ಅನುಭವದಲ್ಲಿಯೇ ಕಂಡುಕೊಂಡ ಕೆಲವೊಂದು ಕೃಷಿಗೆ ಪೂರಕ ಚಟುವಟಿಕೆಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಮಹಿಳಾ ಲೋಕದಲ್ಲಿಯೇ ಮಾದರಿ ವ್ಯಕ್ತಿ ಎನಿಸುವ ಅವರ ಪತಿ ಶಿವಪುತ್ರಪ್ಪ ಎತ್ತಿನಮನಿಯವರ ಪ್ರೋತ್ಸಾಹವೇ ಇವರಿಗೆ ಶ್ರೀರಕ್ಷೆಯಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಸಾವಯವ ಕೃಷಿ ಪದ್ಧತಿಯಲ್ಲಿ ಈ ಬಾಗಕ್ಕೆ

ಸೂಕ್ತವೆನಿಸುವ, ಈ ಹಿಂದಿನಿಂದಲೂ ಪ್ರಸಿದ್ಧಿ ಹೊಂದಿದ ಸ್ಥಳೀಯ ತಳಿಯಾದ ಹಡಗಲಿ ಮಲ್ಲಿಗೆ ಬೆಳೆಯನ್ನು 15 ಎಕರೆಯಲ್ಲಿ ಕೃಷಿ ಮಾಡಿ ನಿತ್ಯ ನಾಲ್ಕಾರು ಕ್ವಿಂಟಲ್ ಮಲ್ಲಿಗೆ ಮೊಗ್ಗು ಬೆಳೆಯುವ ರಾಜ್ಯದ ಏಕೈಕ ಮಹಿಳೆ ಎಂಬ ದಾಖಲೆಗೆ ಭಾಜನರಾಗಿದ್ದಾರೆ. ಮಹಿಳೆಯರಿಗೆ ಸ್ವಾತಂತ್ರ್ಯ, ಪ್ರೋತ್ಸಾಹ, ವಿಶ್ವಾಸ ದೊರೆತರೆ ಅಡುಗೆಮನೆಯಲ್ಲಿ ಸೌಟು ಹಿಡಿದುಕೊಳ್ಳುವ ಕೈಗಳು ಯಶಸ್ವಿಯಾಗಿ ಕೃಷಿ ಜವಾಬ್ದಾರಿಯನ್ನೂ ನಿರ್ವಹಿಸಬಲ್ಲವು ಎಂಬ ಸಂದೇಶ ಪ್ರಮಿಳಾ ಅವರಿಂದ ಮಹಿಳಾ ಸಮಾಜಕ್ಕೆ ರವಾನೆಯಾಗುತ್ತಿದೆ.

ಇಪ್ಪತ್ತೈದು ವರ್ಷಗಳ ಹಿಂದೆ ಏಳು–ಬೀಳುಗಳನ್ನು ಕಾಣುತ್ತಾ ಐದು ಎಕರೆಗಳಿಂದ ಆರಂಭವಾದ ಇವರ ಕೃಷಿ, ಸತಿ–ಪತಿಗಳ ಅಪಾರ ಶ್ರಮದಿಂದ ಈಗ ಐವತ್ತು ಎಕರೆಗಳಿಗೆ ವಿಸ್ತಾರ ಹೊಂದಿದೆ. ಇದರಲ್ಲಿ ದಾಳಿಂಬೆ, ಟೆಂಗು, ಮೆಕ್ಕೆಜೋಳ, ಸೇವಂತಿಗೆ? ಹೀಗೆ ಏನೆಲ್ಲ ಬೆಳೆಗಳಿವೆ. ಆದರೆ ಅದರಲ್ಲಿ ಇವರಿಗೆ ಮುಖ್ಯವಾದ ಬೆಳೆ, ಕೈ ತುಂಬ ಕಾಸು ತಂದುಕೊಡುವ ಬೆಳೆ, ಸಾಕಷ್ಟು ಅನುಭವ ದೊರೆತ ಬೆಳೆ ಎಂದರೆ ಹಡಗಲಿ ಮಲ್ಲಿಗೆ ಬೆಳೆ.

ಮಾರ್ಚ ಕೊನೆಯ ವಾರದಿಂದ ಆರಂಭವಾಗುವ ಮಲ್ಲಿಗೆ ಕೊಯ್ಲು ಅಕ್ಟೋಬರ್‌ವರೆಗೂ ಮುಂದುವರಿದಿರುತ್ತದೆ. ಮಲ್ಲಿಗೆ ಸೀಜನ್ ಮಧ್ಯದ ಅವಧಿ ಹೇಗಿರುತ್ತದೆ ಎಂದರೆ, ಬಯಲು ಸೀಮೆಯ ರೈತರು ಕಣದಲ್ಲಿ ಜೋಳದ ರಾಶಿ ಹಾಕಿ ಚೀಲಕ್ಕೆ ತುಂಬಿಸಿದಂತೆ, ಇವರು ಮಲ್ಲಿಗೆ ಹೂವಿನ ಮೊಗ್ಗುಗಳನ್ನು ರಾಶಿ ಹಾಕಿ ಗೋಣಿ ಚೀಲಕ್ಕೆ ತುಂಬುತ್ತಿರುತ್ತಾರೆ. ಸೂರ್ಯ ಉದಯಿಸುವುದಕ್ಕಿಂತ ಮೊದಲೇ ಸದ್ದಿಲ್ಲದೇ ಎತ್ತೆತ್ತಲಿಂದಲೋ ಬಂದ ನೂರಾರು ಕೂಲಿ ಕಾರ್ಮಿಕರು ಮಲ್ಲಿಗೆ ತೋಟದಲ್ಲಿ ಮೊಗ್ಗು ಬಿಡಿಸುತ್ತಿರುತ್ತಾರೆ. ಮೂರು ಹಂತಗಳಲ್ಲಿ ಮೊಗ್ಗು ತೂಗಿಸಿಕೊಳ್ಳಿ ಎಂದು ಸೈರನ್ ಬರುತ್ತದೆಯೋ ಆಗ ಮಾತ್ರ, ಹುತ್ತದ ಮೇಲೆ ನೀರು ಬಿದ್ದಾಗ ಹೇಗೆ ಇರುವೆಗಳೆಲ್ಲ ಹಾತೊರೆಯುತ್ತಾ ಹೊರಬರುತ್ತವೆಯೋ ಹಾಗೆ, ಮಲ್ಲಿಗೆ ತೋಟದಿಂದ ತೇಲಿ ಮೊಗ್ಗುತೂಗುವ ಮನೆಗೆ ಗುಬುಗುಬು ಎಂದು ಬರುತ್ತಾರೆ. ಮಲ್ಲಿಗೆ ಮೊಗ್ಗು ಬರುವ ಆರಂಭದಲ್ಲಿ 10–20 ಕೂಲಿ ಆಳುಗಳಿಂದ ಹೂ ಬಿಡಿಸುವ ಕೆಲಸ ನಡೆದರೆ, ಜೂನ್–ಜುಲೈ ತಿಂಗಳು ಹೆಚ್ಚು ಇಳುವರಿ ಬರುವ ಸಮಯವಾಗಿರುತ್ತದೆ. ಆ ಸಮಯದಲ್ಲಿ ಸುಮಾರು 200 ಕ್ಕೂ ಹೆಚ್ಚು ಆಳುಗಳು ಇವರ ತೋಟದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಮೊದ ಮೊದಲು ಬೆಳೆ 50 ಕೆ.ಜಿ 0ಯಂತೆ ಆರಂಭವಾಗಿ ಅದು ಮುಂದಿನ ದಿನಗಳಲ್ಲಿ 4–5 ಕ್ವಿಂಟಲ್‌ವರೆಗೆ ಮೊಗ್ಗಿನ ಸುರಿಮಳೆಯಾಗುತ್ತದೆ. ಕಣ್ಣಾಯಿಸಿದಲ್ಲೆಲ್ಲಾ ಮಲ್ಲಿಗೆ ವನ.

**ಸಮಯಕ್ಕೆ ಸರಿಯಾಗಿ ಮೊಗ್ಗು ರವಾನೆ**

ಮೊಗ್ಗಾಗಿರುವ ಮಲ್ಲಿಗೆ ಎಸಳು ದೇವರ ಪೂಜೆಯ ಸಮಯದಲ್ಲಿ, ವಿವಾಹದಂತಹ ಕಾರ್ಯಗಳ ಘಳಿಗೆಯಲ್ಲಿ ಅಥವಾ ಗೃಹಣಿಯ ಮುಡಿಯೇರು ಸಮಯದಲ್ಲಿ ಅರಳಿದರೆ ಮಾತ್ರ ಅದಕ್ಕೆ ಬೆಲೆ! ಅದೇನಾದರೂ ಬಳ್ಳಿಯಲ್ಲಿರುವಾಗ, ಇಲ್ಲವೆ ರವಾನೆಯಾಗುವಾಗಲೇ ಅರಳಿದರೆ, ಮಂಗಲ ಕಾರ್ಯಗಳಂತಹ ಸಮಯಕ್ಕೆ ಬರುವುದರೊಳಗೆ, ಇಲ್ಲವೆ ಗ್ರಾಹಕರು ಖರೀದಿಸುವ ಸಮಯದಲ್ಲಿ ಬಾಡಿ ಬಕ್ಕುಲವಾಗಿರುತ್ತದೆ. ಹೀಗೇನಾದರೂ ಮೊಗ್ಗು ಮೊದಲೇ ಅರಳಿ ದಲ್ಲಾಳಿಗಳ ಅಂಗಡಿಗೆ ಬಂದರೆ ಬಿಡಿ ವ್ಯಾಪಾರಿಗಳಿಂದ ಅಂತಹ ಹೂವಿಗೆ ಕವಡೆ ಕಾಸು ಕಿಮ್ಮತ್ತು ಸಿಗುವುದಿಲ್ಲ. ಆದ್ದರಿಂದಲೇ ಮಲ್ಲಿಗೆ ಬೆಳೆಗಾರರು ಬೆಳೆ ಬೆಳೆಯುವಲ್ಲಿ ತೋರುವ ಜವಾಬ್ದಾರಿಯಷ್ಟೇ ಮೊಗ್ಗು ಬಿಡಿಸುವಿಕೆ ಹಾಗೂ ಮಾರುಕಟ್ಟೆಗೆ ರವಾನೆ ಮಾಡುವಲ್ಲಿಯೂ ಜವಾಬ್ದಾರಿಯನ್ನು ತೋರಿಸಬೇಕಾದದ್ದು ಅವಶ್ಯ ಎನ್ನುತ್ತಾರೆ ಪ್ರಮಿಳಾ.

ಈ ದೃಷ್ಟಿಯಿಂದಾಗಿಯೇ ಬೆಳಿಗ್ಗೆ 9 ಗಂಟೆಗೆ ತೋಟದಿಂದ ಹೊರಟ ಮೊಗ್ಗು ಗ್ರಾಹಕರ ಮನೆಗೆ ಮಲ್ಲಿಗೆ ಹಾರವಾಗಿ ಬರುವುದರೊಳಗೆ ಹಲವಾರು ಹಂತಗಳನ್ನು ದಾಟಿ ಬಂದಿರುತ್ತದೆ. ಮೊಗ್ಗು ಬಿಡಿಸುವುದು, ತೂಕ, ಪ್ಯಾಕಿಂಗ್, ಸಾಗಾಣಿಕೆ ಒಂದು ಹಂತವಾದರೆ; ಖರೀದಿದಾರರು ತೋಟದಿಂದ ಬಂದ ಹೂಗಳನ್ನು ಮತ್ತೊಮ್ಮೆ ತೂಕ ಮಾಡಿ ಚಿಕ್ಕ ಚಿಕ್ಕ ಪೊಟ್ಟಣಗಳ ಮೂಲಕ ಬಿಡಿ ವ್ಯಾಪಾರಸ್ಥರಿಗೆ ಸಾಗಿಸುವುದು, ಬಿಡಿ ವ್ಯಾಪಾರಸ್ಥರಿಂದ ಮಾಲೆ ಪೋಣಿಸುವವರ ಮನೆಗಳಿಗೆ ವಿಲೇವಾರಿಯಾಗುತ್ತವೆ, ನಂತರ ಹನ್ನೆರಡು ಗಂಟೆಯ ಹೊತ್ತಿಗೆ ಮೊಗ್ಗು ಪೋಣಿಸಿದ ಮಾಲೆಗಳ ಸಂಗ್ರಹ ಮಾಡಿಕೊಳ್ಳುವುದು ಮತ್ತೊಂದು ಹಂತ; ಬಿಡಿ ವ್ಯಾಪಾರಸ್ಥರು ಮೊಳ ಹಾಕಿ ತೂಕ ಮಾಡಿ ಮಾರುವುದು ಕೊನೆಯ ಹಂತ. ಹೀಗೆ ನೂರಾರು ಕಿ.ಮೀ. ದೂರದಲ್ಲಿರುವ ತೋಟದ ಮೊಗ್ಗುಗಳು ಹತ್ತಾರು ಕೈಗಳಿಂದ ಕೈಗಳಿಗೆ ಬದಲಾಗುತ್ತಾ ಹಾರವಾಗಿ ನಗರದ ಮಾರುಕಟ್ಟೆಗೆ ಬರುತ್ತಿದ್ದಂತೆ ಮೊಗ್ಗುಗಳೆಲ್ಲ ಕುಸುಮಗಳಾಗಿ ಅರಳಿ ಪರಿಮಳ ಹೊರ ಸೂಸುತ್ತಿರುತ್ತವೆ.

**ಕೆಲಸಗಾರರ ಸಾಲು – ಸಾಲು**

ಇದೊಂದು ಜಾಲದ (ನೆಟ್‌ವರ್ಕ) ತರಹ, ಅವರವರ ಕೆಲಸ ಆಯಾ ನಿಗದಿತ ಸಮಯಕ್ಕೆ ಮುಗಿಸಲೇಬೇಕು; ಈ ಜಾಲದಲ್ಲಿ ತೊಡಗಿಕೊಂಡುರುವ ಯಾರಾದರು ಆಲಸ್ಯದಿಂದ ಎಡವಟ್ಟು ಮಾಡಿಕೊಂಡರೆ ಅದರ ಹಾನಿ ಅವರಿಗೆ ತಟ್ಟುತ್ತದೆ. ಈ ಕಾರಣದಿಂದಲೇ ಬಿಡಿಸಿದ ಮೊಗ್ಗು ಗ್ರಾಹಕರ ಕೈ ಸೇರುವ ತನಕ ಒಂದು ತರಹ ಎಲ್ಲರಲ್ಲೂ ತವಕ ಮನೆ ಮಾಡಿರುತ್ತದೆ, ಸರಿಯಾದ ಸಮಯಕ್ಕೆ ಹೂ ಗ್ರಾಹಕರ ಕೈ ಸೇರಿದಾಗಲೇ ನಾವೆಲ್ಲರೂ ನಿರುಂಬಳವಾಗಿ ಉಸಿರಾಡುವುದು ಎಂದು ಪ್ರಮೀಳಾ ಮೊಗ್ಗು ತೂಗುತ್ತಲೇ ಪಟ–



ಪಟ ಹೇಳುತ್ತಾರೆ. ಅದೇ ರೀತಿ ಮಾರನೇ ದಿನ ಹೂವಿಗೆ ಸಂಬಂಧಿಸಿದ 'ಬಿಲ್' ಬಿಡಿ ವ್ಯಾಪಾರಸ್ಥರಿಂದ ಸಗಟು ವ್ಯಾಪಾರಸ್ಥರಿಗೆ, ಸಗಟು ವ್ಯಾಪಾರಸ್ಥರಿಂದ ಹೂ ಬೆಳೆಗಾರರ ಕೈಗೆ, ಬೆಳಗಾರರಿಂದ ಕೆಲಸಗಾರರ ಕೈಗೆ ಕೂಲಿ ರೂಪದಲ್ಲಿ ಸೇರುತ್ತದೆ.

ಬೆಳಿಗ್ಗೆ ಆರಂಭವಾಗುವ ಮೊಗ್ಗು ಬಿಡಿಸುವ ಕೆಲಸ ಮಧ್ಯಾಹ್ನ 3 ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಇಲ್ಲೂ ಕೂಡಾ ಮೊಗ್ಗು ಬಿಡಿಸುವ ಕೆಲಸವನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಹೀಗೆ ನಾಲ್ಕು ಹಂತಗಳನ್ನು ಮಾಡಿಕೊಳ್ಳುವುದರ ಹಿಂದೆ ವ್ಯವಹಾರದ ಮೌಲಿಕತೆಯೂ ಅಡಗಿರುವುದು ಕಂಡು ಬರುತ್ತದೆ. ಬೆಳಗಿನಿಂದ 9 ಗಂಟೆಯ ವರೆಗೆ ಬಿಡಿಸಿದ ಮೊಗ್ಗುಗಳು ಮೊದಲನೇ ಹಂತ, 9 ರಿಂದ 11 ಗಂಟೆಯುವರೆಗೆ ಬಿಡಿಸಿದ ಮೊಗ್ಗುಗಳು ಎರಡನೇ ಹಂತ, 11 ಗಂಟೆಯಿಂದ 1 ಗಂಟೆಯವರೆಗಿನ ಮೊಗ್ಗುಗಳು ಮೂರನೇ ಹಂತ, 1 ಗಂಟೆಯಿಂದ 3 ಗಂಟೆಯವರೆಗೆ ಬಿಡಿಸಿದ ಮೊಗ್ಗುಗಳು ಕೊನೆಯ ಹಂತದಲ್ಲಿ ಸಾಗುವ ಮೊಗ್ಗುಗಳಾಗಿರುತ್ತವೆ. ಈ ಹಂತಗಳನ್ನು ಅನುಸರಿಸಿಯೇ ದೂರದ ಮಾರುಕಟ್ಟೆಗಳಿಗೆ ಸಾಗಿಸುವ ವ್ಯವಸ್ಥೆಯೂ ಅದರ ಮೇಲೆ ಅಡಕವಾಗಿರುತ್ತದೆ. ಬೆಳಿಗ್ಗೆ ಉಸಿರು ಬಿಗಿ ಹಿಡಿದುಕೊಂಡು ಲಗುಬಗೆಯಿಂದ ಹೆಚ್ಚಿನ ತೂಕ ಬರುವಂತೆ ಹೆಚ್ಚು ಹೂ ಬಿಡಿಸಬೇಕು, ಹೆಚ್ಚು ಕೂಲಿ ಪಡೆದುಕೊಳ್ಳಬೇಕು ಎಂಬ ಹಂಬಲದಿಂದ ಹಕ್ಕಿಗಳು ತೆನೆಯಲ್ಲಿನ ಕಾಳುಗಳನ್ನು ಪಕಪಕನೇ ಕುಕ್ಕಿ ಕುಕ್ಕಿ ತಿನ್ನುವ ಹಾಗೆ ಹೂ ಬಿಡಿಸುವಲ್ಲಿ ಸಾಕಷ್ಟು ಪಳಗಿದ ಈ ಹೆಂಗಳೆಯರ ಕೈಗಳು ಗೊನೆಯಲ್ಲಿನ ಮೊಗ್ಗುಗಳನ್ನು ಪಕಪಕ ಬಿಡಿಸಿ ಉಡಿ ತುಂಬಿಸಿಕೊಳ್ಳುತ್ತಿರುತ್ತಾರೆ. ಉಡಿ-ಉಡಿ ಮೊಗ್ಗು ಬಿಡಿಸಿದ್ದಾಯ್ತು, ಈಗ ನೀರಿನ ತೇವ.

ತೋಟದ ಮನೆಯ ಗಡಿಯಾರದ ಮುಳ್ಳು ಬೆಳಗಿನ 9 ಗಂಟೆಗೆ ಬರುತ್ತಿದ್ದಂತೆ ಮಲ್ಲಿಗೆ ತೋಟದಲ್ಲಿರುವ ಆಳುಗಳ ಮೇಲಿನ ನಾಲ್ಕಾರು ಮೇಲ್ವಿಚಾರಕರು ಒಮ್ಮೆಲೆ ಮೊಗ್ಗು ತಗೊಂಡು ಬರ್‍ರೆವ್ರೋ, ತೂಕ ಚಾಲು ಆಗ್ಯೆತೆ ಎಂದು ಕೂಗುತ್ತಾರೆ. ಅದು ಒಂದು ರೀತಿ ಕೂಲಿಕಾರರಿಗೆ 'ಸೈರನ್' ಇದ್ದ ಹಾಗೆ. ಈ 'ಸೈರನ್' ಬಂದ ತಕ್ಷಣ ಯರೂ ತಡ ಮಾಡುವಂತಿಲ್ಲ! ಯಾಕೆಂದರೆ ಅವರಿಗೂ ಈ ಮೊಗ್ಗಿನ ಮೇಲಿರುವ ಸಮಯದ ಮಹತ್ವ ಗೊತ್ತಿರುತ್ತದೆ. ಹೀಗಾಗಿ ಬಿಡಿಸಿದ ಮೊಗ್ಗುಗಳನ್ನು ಅರಿವೆಯಲ್ಲಿ ಗಂಟು ಕಟ್ಟಿಕೊಂಡು ತೂಕ ಮಾಡುವ ತೋಟದ ಜೋಪಡಿಗೆ ಬರುತ್ತಿರುತ್ತಾರೆ. ತೂಕದಮನೆ ಪ್ರವೇಶಿಸುವ ಮೊದಲು ನೀರಿನ ತೊಟ್ಟಿಯಲ್ಲಿ ಮೊಗ್ಗಿನ ಗಂಟು ಮುಳುಗಿಸಿ ಮೊಗ್ಗುಗಳನ್ನು ಒದ್ದೆ ಮಾಡಿಕೊಂಡು ತೂಕ ಮಾಡಿಸಲು ಸಾಲಾಗಿ ನಿಲ್ಲುತ್ತಾರೆ. ಒಬ್ಬರ ನಂತರ ಒಬ್ಬರು ಸರಸರನೇ ತೂಕ ಮಾಡಿಸಿಕೊಂಡು, ಪುನಃ ಮೊಗ್ಗು ಬಿಡಿಸಲು ತೋಟದ ಕಡೆಗೆ ದೌಡಾಯಿಸುತ್ತಿರುತ್ತಾರೆ. ನೂರಾರು ಕೂಲಿ ಆಳುಗಳ ಹೆಸರು ನೆನಪಿಡಲು, ಅವರ ಹೆಸರು ಹುಡುಕಿ ತೂಕ ನಮೂದಿಸಿಕೊಳ್ಳುವುದು ಕಷ್ಟದ ಹಾಗೂ ಸಮಯ ಹಿಡಿಯುವ ಕೆಲಸವಾದ್ದರಿಂದ, ಪ್ರಮಿಳಾ ಅವರು ಕೂಲಿ ಆಳುಗಳಿಗೆ ಒಂದೊಂದು 'ರೋಲ್ ನಂಬರ್' ನೀಡಿದ್ದಾರೆ. ತೂಕದ ಕಟ್ಟೆಗೆ ತಮ್ಮ ಮೊಗ್ಗುಗಳ ಗಂಟು ಸುರಿಯುವ ಆಳುಗಳು ತಮ್ಮ 'ನಂಬರ್' ಕೂಗುತ್ತಾರೆ. ಅದೇ 'ನಂಬರ್'ಗೆ ತೂಕ ಮಾಡಿದ ವ್ಯಕ್ತಿ ಅಳತೆಯನ್ನು ಜೋರಾಗಿ ಕೂಗಿ ಹೇಳಿ ಎಂಟ್ರಿ ಮಾಡಿಸುತ್ತಾನೆ. ಇದು ತೂಕ ಎಂಟ್ರಿ ಮಾಡುವವರಿಗೂ ಹಾಗೂ ಕೂಲಿ ಆಳುಗಳಿಗೂ ತಮ್ಮ ಮೊಗ್ಗಿನ ತೂಕ ಎಷ್ಟಾಯಿತು ಎಂದು ಸರಳವಾಗಿ ತಿಳಿದುಕೊಳ್ಳಲು ಅನುಕೂಲವಾಗಿದೆ.

ತೂಕವಾದ ಮೊಗ್ಗುಗಳನ್ನು ಮತ್ತೊಂದು ತುದಿಯಲ್ಲಿ ಇಡಿಯಾಗಿ ತೂಕ ಮಾಡಲಾಗುತ್ತದೆ. ಇಲ್ಲಿ ಯಾವ ಮಾರುಕಟ್ಟೆಯ ವ್ಯಾಪಾರಸ್ಥರು ಎಷ್ಟು ಬೇಡಿಕೆ ನೀಡಿದ್ದಾರೆ? ಎಂಬ ಲೆಕ್ಕದಲ್ಲಿ ತೂಕ ಮಾಡಿ ತೇವಯುಕ್ತ ಗೋಣಿ ಚೀಲದಲ್ಲಿ ಮೊಗ್ಗುಗಳನ್ನು ತುಂಬುತ್ತಾರೆ. ಗೋಣಿ ಚೀಲ ತುಂಬುತ್ತಿದ್ದಂತೆ ಅದನ್ನು ಹೊಲಿದು ಆಯಾ ಅಂಗಡಿಗಳ 'ಲೇಬಲ್' ಅಂಟಿಸಿ 'ವ್ಯಾನ್'ಗೆ ಹಾಕುವುದು ಕೊನೆಯ ಕೆಲಸ; ಕಣ್ ಕಣ್ ಬಿಡುತ್ತಿದ್ದಂತೆಯೇ ಹತ್ತಾರು ಕೈಗಳ ನಡುವೆ ಅರ್ಧ ಗಂಟೆಯ ಹೊತ್ತಿನಲ್ಲಿಯೇ ಇದು ಮುಗಿದು ಹೋಗುತ್ತದೆ. ಮೊದಲನೇ ಹಂತದಲ್ಲಿನ ಮೊಗ್ಗುಗಳು ಸಮೀಪದ ಹೊಸಪೇಟೆ ಮರುಕಟ್ಟೆಗೆ ಸಾಗಿದರೆ, ಎರೆಡನೇ ಹಂತದಲ್ಲಿ ಬರುವ ಮೊಗ್ಗುಗಳು ಶಿವಮೊಗ್ಗ ಮಾರುಕಟ್ಟೆಗೆ, ಮೂರನೇ ಹಂತದ ಮೊಗ್ಗುಗಳು ಹುಬ್ಬಳ್ಳಿಗೆ, ನಾಲ್ಕನೇ ಹಂತದ ಮೊಗ್ಗುಗಳು ಮತ್ತೊಂದು ಬಾರಿಗೆ ಹೊಸಪೇಟೆ ಮಾರುಕಟ್ಟೆಗೆ ಸಾಗುತ್ತವೆ.

**ಸಮಯಕ್ಕೆ ಬೆಲೆ**

ಹೀಗೆ ಆಯಾ ಮಾರುಕಟ್ಟೆಗಳಿಗೆ ಸರಿಯಾದ ಸಮಯಕ್ಕೆ ಮೊಗ್ಗುಗಳು ತಲುಪಿದವೆಂದರೆ ಸಗಟು ವ್ಯಾಪರಸ್ಥನಿಗೆ ಎಲ್ಲಿಲ್ಲದ ಸಂತಸದ ಜೊತೆಗೆ ಹೆಚ್ಚು ಮೊಗ್ಗುಗಳಿಗೆ ಬೆಲೆ-ಬೇಡಿಕೆ ಲಭಿಸುತ್ತದೆ. ಸರಿಯಾದ ಸಮಯಕ್ಕೆ ತಲುಪಿದ ಮೊಗ್ಗುಗಳಿಗೆ ದಲ್ಲಾಳಿಗಳು ಮಾಡುವ ಲಿಲಾವಿನ ನಿಖರ ಬೆಲೆ ದೊರಕುತ್ತದೆ. ಶಿವಮೊಗ್ಗ ಮಾರುಕಟ್ಟೆಗೆ ಶೆಡ್ಯೂಲ್‌ಗಿಂತ ಒಂದು ಗಂಟೆ ಮೊದಲು ಮೊಗ್ಗು ತಲುಪಿದರೆ ಪ್ರತಿ ಕೇ.ಜಿ. ಗೆ ಹತ್ತು ರೂಪಾಯಿ 'ಎಕ್ಸ್ಟ್ರಾ ಬೋನಸ್' ನೀಡುತ್ತಾರೆ. ಶೆಡ್ಯೂಲ್‌ಗೆ ಒಂದು ಗಂಟೆ ತಡವಾಗಿ ಮೀರಿ ಬಂದ ಮೊಗ್ಗುಗಳಿಗೆ ನಿಗದಿಯಾದ ಬೆಲೆಯಲ್ಲಿ ಪ್ರತಿ ಕೆ.ಜಿ. ಗೆ ಹತ್ತು ರೂಪಾಯಿ ಖೋತಾ ಆಗುತ್ತದೆ. ಇನ್ನು ಎರಡು ಮೂರು ತಾಸು ತಡವಾಗಿ ಬಂದರೆ ಆ ಮೊಗ್ಗುಗಳಿಗೆ ದಲ್ಲಾಳಿ ಹಾಕಿದಷ್ಟೇ ಬೆಲೆ ದೊರಕುತ್ತದೆ. ಈ ಕಾರಣದಿಂದಲೇ ಪ್ರಮೀಳಾಬಾಯಿಯವರು ಮೊಗ್ಗುಗಳು ಮಾರುಕಟ್ಟೆ ಸೇರುವ ತನಕ ಯಾರೊಂದಿಗೂ ಖಾಲಿ ಮಾತನಾಡುವುದಾಗಲಿ, ಅತಿಥಿ ಸತ್ಕಾರವಾಗಲಿ ಮುಲಾಜಿಲ್ಲದೇ ಹಿಂದೆ ಸರಿಸಿ ಕೆಲಸದ ಕಡೆಗೆ ಗಮನ ನೀಡುತ್ತಾರೆ. ಎಷ್ಟು ತೂಕ ಮಾಡಿದರೂ ಕೈ ಸೋಲುವುದಿಲ್ಲ ಬಿಡಿ.

**ಸಾಗಾಣಿಕೆಗೊಂದು ಯೋಜನೆ**

ಕಳೆದ ವರ್ಷದ ಮಾತು, ಮೇ ತಿಂಗಳು ಎಂದರೆ ಮದುವೆ, ಮುಂಜಿಗಳ 'ಸೀಜನ್', ಮಾರುಕಟ್ಟೆಯಲ್ಲಿ ಒಂದು ಕಿಲೋ ಮೊಗ್ಗಿಗೆ 100 ರಿಂದ 120 ರೂಪಾಯಿ ಬೆಲೆ ಇತ್ತು. ಶಿವಮೊಗ್ಗ ವ್ಯಾಪಾರಿಯೊಬ್ಬರು ಸಾಕಷ್ಟು ಆರ್ಡರ್ ಹಿಡಿದಿದ್ದರಿಂದ ಹಿಂದಿನ ದಿನವೇ ಎತ್ತಿನಮನಿಯವರಿಗೆ ಹೆಚ್ಚಿನ ಪ್ರಮಾಣದಲ್ಲಿ ಮೊಗ್ಗು ಕಳಿಸಿಕೊಡಲು ಬೇಡಿಕೆ ಇಟ್ಟಿದ್ದರು. ಮೂರು ಗಂಟೆಯೊಳಗೆ ಶಿವಮೊಗ್ಗ ಮಾರುಕಟ್ಟೆ ತಲುಪಲು ಶೆಡ್ಯೂಲ್ ಇದ್ದುದ್ದರಿಂದ ನೂರಾರು ಕೆಲಸಗಾರರು ಬೆಳಿಗ್ಗೆಯಿಂದಲೇ ಮೊಗ್ಗು ಬಿಡಿಸುವ ಕೆಲಸ ಆರಂಭಿಸಿದ್ದರು. ಬೆಳಿಗಿನ 9 ಗಂಟೆಗೆ ಹಗರಿಬೊಮ್ಮನಹಳ್ಳಿಯಿಂದ ಹೊರಡುವ ಬಸ್‌ಗೆ 1 ಕ್ವಿಂಟಲ್ ಹೂವಿನ ಮೋಟೆ ಏರಿಸಿದ್ದು ಆಗಿತ್ತು. ಮೂರು ಗಂಟೆಯ ನಂತರ ಶಿವಮೊಗ್ಗ

ವ್ಯಾಪಾರಿಯಿಂದ ದೂರವಾಣಿ ಕರೆ ಬಂತು ನಮ್ಮ ಅಂಗಡಿ ಮುಂದೆ ಹೂವಿಗಾಗಿ ಬಿಡಿ ವ್ಯಾಪಾರಿಗಳ ಜಾತ್ರೆ ನೆರದೈತೆ, 4 ಗಂಟೆಯಾದ್ರೂ ನಿಮ್ಮ ಮಲ್ಲಿಗೆ ಮೊಗ್ಗಿನ ಮೂಟೆ ಪತ್ತೇ ಇಲ್ಲ, ನಾವು ನಿಮ್ಮ ಮೊಗ್ಗುಗಳನ್ನೇ ನಂಬಿ ವ್ಯಾಪಾರ ಮಾಡ್ತೀರ್ತಿವಿ ಹೀಗ ಮಾಡಿದ್ರ ಹ್ಯಾಂಗ್ರಿ? ಎಂದು ಆ ವ್ಯಾಪಾರಿ ತನ್ನೆಲ್ಲ ವೇದನೆಯನ್ನು ಒಂದೇ ಬಾರಿಗೆ ಉಸುರಿದ. ಆದರೆ ಬಸ್ ಸೇರಬೇಕಾಗಿದ್ದ ನಿಲ್ದಾಣ ಸೇರದೇ ದಾರಿಯ ಮಧ್ಯೆ ಅದು ನಿರ್ಜನ ಪ್ರದೇಶದಲ್ಲಿ ಕೆಟ್ಟು ನಿಂತಿತ್ತು, ಪ್ರಯಾಣಿಕರೆಲ್ಲ ಬೇರೆ ಬಸ್‌ಗೆ ಹೋಗಿದ್ದರೆ ಮೊಗ್ಗಿನ ಮೂಟೆಗಳು ಅನಾಥವಾಗಿ ಬಿದ್ದಿದ್ದವು. ಬಸ್ ನಿಂತಿರುವ ಸ್ಥಳ ಹುಡುಕಿ ಖಾಸಗಿ ವಾಹನವೊಂದರಲ್ಲಿ ಆ ಮೂಟೆಗಳನ್ನು ಹಾಕಿಕೊಂಡು ಶಿವಮೊಗ್ಗ ಮಾರುಕಟ್ಟೆ ತಲುಪುವುದರೊಳಗೆ ಸಾಯಂಕಾಲ 7 ಗಂಟೆಯಾಗಿತ್ತು. ಬಿಡಿ ವ್ಯಾಪರಿಗಳು ಬೇರೆ ದಲ್ಲಾಳಿಗರ ಕಡೆಯಿಂದ ಮೊಗ್ಗು ಕೊಂಡುಕೊಂಡು ಹೋಗಿದ್ದರು. ಸಾಕಷ್ಟು ತಡವಾಗಿ ಬಂದ ಈ ಮೊಗ್ಗಿನ ಮೂಟೆಗಳಿಗೆ ಬೆಲೆಯೇ ಇಲ್ಲದಂತಾಯಿತು. ಸುಮಾರು 10,000 ರೂಪಾಯಿ ಲಾಭ ತರಬೇಕಾಗಿದ್ದ ಹೂವಿನ ಮೂಟೆಗಳಿಗೆ ಆ ದಿನ ಮೊಗ್ಗು ಬಿಡಿಸಿದ ಕೆಲಸಗಾರರ ಕೂಲಿಯಷ್ಟೂ ದೊರಕಲಿಲ್ಲ.

ಈ ಕಾರಣದಿಂದಲೇ ಅಂದೇ ಶಿವಾನಂದ ಸುತ್ತಮುತ್ತಲಿರುವ ಬ್ಯಾಲಹಾಳು, ಕಡ್ಲಬಾಳು, ಬಾಚಿಗೊಂಡನಹಳ್ಳಿ, ದೇವನಹಳ್ಳಿ, ಕಟ್ಟೇನಬಂಡಿ, ನಂದಿಪುರ, ಮುಟಗನಹಳ್ಳಿ, ಬಲ್ಲಹುಣಸಿ ಹಳ್ಳಿಗಳಲ್ಲಿ ಸಣ್ಣಪ್ರಮಾಣದಲ್ಲಿ ಬೆಳೆಯುವ ಮಲ್ಲಿಗೆ ಬೆಳೆಯುವ 25 ಜನ ಬೆಳೆಗಾರರನ್ನೆಲ್ಲಾ ಸೇರಿಸಿ ಒಂದು "ಮಲ್ಲಿಗೆ ಬೆಳೆಗಾರರ ಸಂಘ" ಕಟ್ಟಿಕೊಂಡರು. ಸಾಗಾಣಿಕೆಯಲ್ಲಿ ಈ ಹಳ್ಳಿಗರು ಒಂದಿಲ್ಲೊಂದು ರೀತಿಯಲ್ಲಿ ತೊಂದರೆ ಅನುಭವಿಸಿದ್ದವರೆ ಆಗಿದ್ದರು. ಸಂಘದಿಂದ ಒಂದು ವಾಹನ ವ್ಯವಸ್ಥೆ ಮಾಡಿದರು. ಈಗ ಎಲ್ಲರೂ ನಿಗದಿತ ಸಮಯಕ್ಕೆ ನಿಗದಿತ ಸ್ಥಳಕ್ಕೆ ಬಂದು ಆ ವಾಹನದಲ್ಲಿ ತಮ್ಮೆಲ್ಲ ಮೊಗ್ಗಿನ ಮೂಟೆಗಳನ್ನು ಹಾಕಿ ಹೋಗುತ್ತಾರೆ. ಇಲ್ಲಿ ವಾಹನಕ್ಕೆ 'ರೈಟ್' ಹೇಳಿದರೆ ಅದು ನಿಲ್ಲುವುದು ಮಾರುಕಟ್ಟೆಯ ಮುಂದೆಯೇ. ಚಾಲಕನ ಕೈಯಲ್ಲಿ ಮೊಬೈಲ್ ನೀಡಿದ್ದರಿಂದ ವಾಹನವೇನಾದರೂ ದಾರಿ ಮಧ್ಯೆ ಕೈಕೊಟ್ಟರೆ ಮತ್ತೊಂದು ವಾಹನಕ್ಕೆ ಸಂದೇಶ ನೀಡುತ್ತಾನೆ. ಶೆಡ್ಯೂಲ್‌ಗಿಂತ ಮುಂಚೆಯೇ ಮಲ್ಲಿಗೆ ಹೂ ಮಾರುಕಟ್ಟೆ ಸೇರಿ ಕೇಜಿಗೆ 10 ರೂಪಾಯಿ 'ಎಕ್ಸ್ಟ್ರಾ ಬೋನಸ್' ದೊರಕಿಸುತ್ತದೆ. ವಾಹನದ ಬಾಡಿಗೆ, ಚಾಲಕನ ವೇತನ, ಇಂಧನದ ಖರ್ಚುವೆಚ್ಚಗಳನ್ನು ವಾರಕ್ಕೊಮ್ಮೆ ಲೆಕ್ಕ ಹಾಕಿ ಸಾಗಾಣಿಕೆಯಾದ ಪ್ರತಿ ಕೆ.ಜಿ. ಮೊಗ್ಗಿಗೆ ಅದನ್ನು ಭಾಗಿಸಿ ಯಾರು ಯಾರು ಒಂದು ವಾರದ ಅವಧಿಯಲ್ಲಿ ಎಷ್ಟೆಷ್ಟು ಕೆ.ಜಿ. ಮೊಗ್ಗು ಹಾಕಿದ್ದಾರೆ, ಅದಕ್ಕೆ ತಕ್ಕಂತೆ ಬಾಡಿಗೆ ನೀಡುತ್ತಾರೆ. ಯಾವುದೇ ಚೌಕಾಸಿ ಇಲ್ಲ, ಬಾಡಿಗೆ ಭಾರವೆನಿಸುವುದಿಲ್ಲ, ಸಾಗಾಣಿಕೆಯ ಕಿರಕ್ ಅಂತೂ ಇಲ್ಲವೇ ಇಲ್ಲ.

**ವ್ಯಾಪಾರ ವಹಿವಾಟು**

ಮಾರ್ಚ–ಎಪ್ರಿಲ್‌ನಲ್ಲಿ ಮೊಗ್ಗು ಕೊಯ್ಲು ಆರಂಭವಾದರೂ ಆ ಸಮಯದಲ್ಲಿ ಎಕರೆಗೆ ದಿನಕ್ಕೆ 10 ಕೆ.ಜಿ. ಯಷ್ಟು ಮೊಗ್ಗು ಮಾತ್ರ ದೊರಕುತ್ತದೆ. ಜೂನ್–ಜುಲೈ ಸಮಯದಲ್ಲಿ 25 ಕೇ.ಜಿ. ದಾಟುತ್ತದೆ. ಎಕರೆಗೆ ವಾರ್ಷಿಕ ಸರಾಸರಿ 20 ಕ್ವಿಂಟಲ್‌ಗಿಂತಲೂ ಹೆಚ್ಚು ಮೊಗ್ಗು ಪಡೆಯಬಹುದಾಗಿದೆ. ಸಾಮಾನ್ಯವಾಗಿ 40 ರೂಪಾಯಿ ಯಿಂದ ಆರಂಭವಾಗುವ ಬೆಲೆ 120 ರೂಪಾಯಿಗೆ ತಲುಪುವ ಸಾಧ್ಯತೆ ಇರುತ್ತದೆ. ಆಷಾಡ ಮಾಸದಲ್ಲಿ ಹೂವಿನ ಇಳುವರಿ ಹೆಚ್ಚು ಇರುತ್ತದೆ. ಆದರೆ ಆ ಸಮಯದಲ್ಲಿ ಧಾರ್ಮಿಕ ಹಾಗೂ ವಿವಾಹದಂತಹ ಕಾರ್ಯಕ್ರಮಗಳು ಇರುವುದಿಲ್ಲವಾದ್ದರಿಂದ ಬೆಲೆ ಮಾತ್ರ ಅತೀ ಕಡಿಮೆ.

ಸದ್ಯ ಒಂದು ಕೆ.ಜಿ. ಹಡಗಲಿ ಮೊಗ್ಗಿಗೆ 80 ರೂಪಾಯಿ ಬೆಲೆ ಇದೆ. ಏನಿಲ್ಲವೆಂದರೂ ಈಗ ದಿನಕ್ಕೆ ಮೂರು ಕ್ವಿಂಟಲ್ ಹೂ ದೊರಕುತ್ತವೆ. ಹೊಸಪೇಟೆ ಮಾರುಕಟ್ಟೆಯಲ್ಲಿ ಕೆ.ಜಿ. ಗೆ 60 ರಿಂದ 80 ರೂಪಾಯಿ, ಶಿವಮೊಗ್ಗ ಮಾರುಕಟ್ಟೆಯಲ್ಲಿ 80 ರಿಂದ 100 ರೂಪಾಯಿ, ಇನ್ನು ಹುಬ್ಬಳ್ಳಿ, ದಾವಣಗೆರೆ ಮಾರುಕಟ್ಟೆಯಲ್ಲಿ 90 ರಿಂದ 120 ರೂಪಾಯಿವರೆಗೆ ಬೆಲೆ ಸಿಗುತ್ತದೆ. ಇದು ಮುಂದೆ ವೃದ್ಧಿಯಾಗುವ ಸಾಧ್ಯತೆ ಇರುತ್ತದೆ. ಈಗಿನ ಬೆಲೆಯನ್ನೇ ಒಂದು ರೀತಿ ಅಂದಾಜು ಮಾಡಿದರೂ ಎರಡು ಕ್ವಿಂಟಲ್ ಮೊಗ್ಗಿಗೆ ಹೆಚ್ಚು ಕಡಿಮೆ 20,000 ರೂಪಾಯಿ ಸಹಜವಾಗಿ ದೊರಕುತ್ತದೆ. ಅಂದರೆ, ಇವರ ದಿನದ ಆದಾಯ 20,000 ರೂಪಾಯಿ ಇದರಲ್ಲಿ ನೂರಾರು ಕೂಲಿ ಕಾರ್ಮಿಕರ ವೇತನ, ತೋಟದ ನಿರ್ವಹಣೆಗೆ ಅರ್ಧಕ್ಕಿಂತಲೂ ಕೊಂಚ ಕಡಿಮೆ ಖರ್ಚಾಗುತ್ತದೆ. ಜುಲೈ ತಿಂಗಳದ ಸಮಯದಲ್ಲಿ ನಾಲ್ಕು ಕ್ವಿಂಟಲ್‌ವರೆಗೆ ಮೊಗ್ಗು ದೊರಕುತ್ತದೆ. ಆ ದಿನಗಳ ದಿನದ ಆದಾಯ 40,000 ರೂಪಾಯಿ. ಒಬ್ಬ ರೈತ ಮಹಿಳೆ ಬೆವರಿನ ಫಲ ಇಷ್ಟು ಎಂದರೆ ಅವರು ಈ ಮಟ್ಟಕ್ಕೆ ಬರಬೇಕಾದರೆ ಎಷ್ಟು ಕಷ್ಟಪಟ್ಟಿರಬೇಕು? ಎಷ್ಟು ತೊಂದರೆ ಅನುಭವಿಸಿರಬೇಕು? ಎಂಬುದು ಇಲ್ಲಿ ಮುಖ್ಯವಾದ ಅಂಶವಾಗಿದೆ.

**ಮಲ್ಲಿಗೆ ತೂಕ ಮಾಡಿಸಲು ಮುಗಿ ಬಿದ್ದ ಕೆಲಸಗಾರರು**

ಒಂದು ಎಕರೆ ಮಲ್ಲಿಗೆಯ ತೋಟ ವಾರ್ಷಿಕ ಸುಮಾರು 20 ಕ್ವಿಂಟಲ್ ಮೊಗ್ಗು ಕೊಡುತ್ತದೆ. ಒಂದು ಕೆ.ಜಿ. ಗೆ 60 ರೂಪಾಯಿಯಂತೆ, ಗುಣಿಸಿದರೆ ಕನಿಷ್ಠ ಪಕ್ಷ 1,20,000 ರೂಪಾಯಿ ದೊರಕುತ್ತದೆ. ಇದರಲ್ಲಿ 50,000 ರೂಪಾಯಿ ಖರ್ಚು ತಗೆದರೆ ಎಕರೆಗೆ 70,000 ರೂಪಾಯಿ ನಿವ್ವಳ ಲಾಭ ದೊರಕುತ್ತದೆ ಎನ್ನುತ್ತಾರೆ.

**ಬೆಳೆ ವಿಧಾನ**

10*10 ರ ಅಂತರದಲ್ಲಿ ಕಸಿ ಕಟ್ಟಿದ ಸಸಿಗಳನ್ನು ನಾಟಿ ಮಾಡಿರುವ ಇವರು ಬಹುತೇಕ ಸಾವಯವ ವಿಧಾನದಲ್ಲಿಯೇ ಕೃಷಿ ಮಾಡುತ್ತಿದ್ದಾರೆ. ಮಲ್ಲಿಗೆ ಬೆಳೆಗೆ ಇಲ್ಲಿನ ವಾತಾವರಣ ಸೂಕ್ತವಾದುದಾಗಿದೆ. ಹೀಗಾಗಿಯೇ ಉತ್ತಮ ಇಳುವರಿ, ತೂಕ, ಗಾತ್ರ ಬರುತ್ತದೆ. ಮಳೆ ಬಿದ್ದು ವಾತಾವರಣದಲ್ಲಿ ಸಾಕಷ್ಟು ನೀರಿನಾಂಶ ಇದ್ದರೆ ಮಲ್ಲಿಗೆ ಬೆಳೆಗೆ ಮತ್ತಷ್ಟು ಇಂಬು ದೊರತಂತೆ. ಎತ್ತಿನಮನಿಯವರು ಮೊದಲು 'ಫುಕೋವುಕೊ' ವಿಧಾನದಲ್ಲಿ ಸಹಜ ಕೃಷಿ ಮಾಡಿದ್ದರು. ಕಳೆ ತೆಗೆಯುವುದಾಗಲಿ, ಬಳ್ಳಿಗಳ ಮಧ್ಯೆ ಹರಗುವಂತಹ ಮಾನವನ ಕೃತಕ ವಿಧಾನ ಅವರ ಕೃಷಿಯಲ್ಲಿ ಬಳಕೆ ಕಡಿಮೆ ಇತ್ತು. ಮಲ್ಲಿಗೆ ಹೂವಿನ ಗಿಡದ ಅಡಿಯಲ್ಲಿ ಸಾರಜನಕ ಪೂರೈಸಲೆಂದು ದ್ವಿದಳ ಧಾನ್ಯದ ಬೆಳೆಗಳು, ಸೂರ್ಯನ ಅತಿ ನೇರಳೆ ಕಿರಣಗಳನ್ನು ತಡೆಹಿಡಿಯುವುದಕ್ಕಾಗಿ ನೆಲಕ್ಕೆ ಹಾಸಿದ ಹಬ್ಬುವ ಬಳ್ಳಿಗಳೂ ಹೀಗೆ ಒಂದಕ್ಕೊಂದು ಪೂರಕವಾಗಿ ಬೆಳೆದು ದಪ್ಪ ಪೊದೆಯಂತಾಗಿದ್ದವು. ಇಂತಹ ಸಹಜ ಕೃಷಿ ಪದ್ಧತಿಯಲ್ಲಿಯೇ ಖರ್ಚಿಲ್ಲದೇ ಸಾಕಷ್ಟು ಲಾಭ ಪಡೆದುಕೊಂಡಿದ್ದರು. ಆದರೆ ಈ ಬೆಳೆಗೆ



ನೂರಾರು ಕೂಲಿ ಆಳುಗಳೇ ಮುಖ್ಯ ಆಧಾರ, ಅವರು ಕೈಕೊಟ್ಟರೆ ಅಧೋಗತಿ ಇಂತಹ ಪರಸ್ಥಿತಿ ಇರುವಾಗ ಈ ಬಯಲು ಸೀಮೆಯ ಕಾರ್ಮಿಕರು ಇಂತಹ ಪೊದೆಯಲ್ಲಿ ಕಾಲೂರಿ ಕೆಲಸ ಮಾಡಲು ಹಿಂಜರಿಯುವ ವಾತಾವರಣ ಕಂಡು ಬಂದಿದ್ದರಿಂದಾಗಿ, ಈಗ ಆ ಎಲ್ಲ ಹಬ್ಬು ಬಳ್ಳಿಗಳನ್ನು ಹಾಗೂ ಮಲ್ಲಿಗೆ ಬೆಳೆಯಲ್ಲಿ ಬೆಳೆಯುವ ಎಲ್ಲ ನಮೂನೆಯ ಕಳೆಗಳನ್ನು ಕಳೆ ಕೊಚ್ಚುವ ಯಂತ್ರದಿಂದ ಕತ್ತರಿಸಿ ಅಲ್ಲಿಯೇ ಹೊದಿಕೆ ಮಾಡುವುದರಿಂದ ಭೂಮಿ ಸ್ಪಂಜಿನಂತೆ ಮೆತ್ತಗಾಗಿದೆ.

ಸಾಮಾನ್ಯವಾಗಿ ಚನ್ನಾಗಿ ನೀರು ಬಸಿದು ಹೋಗುವಂತಹ ಕೆಂಪು ಗೋಡುಮಣ್ಣು ಇಲ್ಲವೆ ಮರುಳು ಮಿಶ್ರಿತ ಗೋಡು ಮಣ್ಣು ಈ ಬೆಳೆ ಬೆಳೆಯಲು ಹೆಚ್ಚ ಸೂಕ್ತವಾದ ಮಣ್ಣು ಎಂದು ತೋಟಗಾರಿಕಾ ಅಧಿಕಾರಿಗಳು ಸಲಹೆ ನೀಡುತ್ತಾರೆ. ಮಲ್ಲಿಗೆ ನಾಟಿ ಮಾಡಲು ಮಳೆಗಾಲ ಅತ್ಯಂತ ಯೋಗ್ಯವಾದ ಸಮಯವಾಗಿದ್ದು, ಜೂನ್ ತಿಂಗಳಿನಿಂದ ಆಗಷ್ಟ್ ತಿಂಗಳುಗಳು ನಾಟಿ ಮಾಡಲು ಉತ್ತಮ ಅವಧಿಯಾಗಿದೆ. ನುಸಿರೋಗ, ಕೆಂಪು ಶಲ್ಕ ಕೀಟ, ಹಿಟ್ಟು ತಿಗಣೆ, ಮಲ್ಲಿಗೆ ತಿಗಣೆ, ಎಲೆ ತಿನ್ನುವ ಹುಳುಗಳ ಹಾವಳಿ, ಜೊತೆಗೆ ಎಲೆ ಚಿಕ್ಕೆ ರೋಗ, ಸೊರಗು ರೋಗ, ಬೂದಿ ರೋಗ, ಬೇರಿಗೆ ಜಂತು ರೋಗ ಕಾಣಿಸಿಕೊಳ್ಳುತ್ತವೆ.

**ಚೀಲಕ್ಕೆ ಭರ್ತಿಯಾದ ಮೊಗ್ಗು**

ಡಿಸೆಂಬರ್‌ನಲ್ಲಿ ಮಲ್ಲಿಗೆ ಗಿಡಗಳನ್ನು ಕಟಾವ್ ಮಡಿದಾಗ ಹಾಗೂ ಎಪ್ರಿಲ್, ಮೇ ತಿಂಗಳಿನಲ್ಲಿ ಬಿಸಿಲಿನ ಬೇಗೆ ಹೆಚ್ಚಾಗುವುದರಿಂದ ಸಾಮನ್ಯವಾಗಿ ಬೆಳೆಗಳಿಗೆ ಎಲೆಚುಕ್ಕೆ ರೋಗ, ಬೂದಿರೋಗ, ಶಿಲೀಂದ್ರಬಾಧೆ ಬರುವ ಸಾಧ್ಯತೆ ಇರುತ್ತದೆ. ಇಂತಹ ಸಮಯದಲ್ಲಿ ಪಕ್ಕಾ ಸಾವಯವ ಕೃಷಿಕರಾಗಿರುವ ಇವರು ಸಾಮಾನ್ಯವಾಗಿ ಅವುಗಳ ನಿಯಂತ್ರಣಕ್ಕಾಗಿ ಕ್ರಿಮಿನಾಶಕಗಳನ್ನು ಬಳಸದೆ, ತಮ್ಮ ಬೇಲಿಯ ಬದಿಯಲ್ಲಿಯೇ ಬೆಳೆದು ನಿಂತಿರುವ ಸರ್ವೇಗಿಡ (ಕ್ಯಾಜೋರಿನ್ ಕನ್ನಿಂಗ್ ಹ್ಯಾಮ್), ಲಂಟಾನ, ಸುವರ್ಣಗಡ್ಡೆ, ಕಾಗದ ಹೂ, ಎಕ್ಕ, ಕತ್ತಾಳೆ ವಿಷಮಧಾರಿ, ಅಡುಸೋಗೆ ಹಾಗೂ ಬೇವಿನ ಎಲೆಗಳಂತಹ 10 ಕೆ.ಜಿ. ಸೊಪ್ಪನ್ನು 100 ಲೀ. ನೀರಿನಲ್ಲಿ ಮೂರು ದಿನ ನೆನೆಹಾಕಿ ಕಷಾಯ ತಯಾರಿಸುತ್ತಾರೆ. ನಂತರ 10 ಲೀ. ನೀರಿನಲ್ಲಿ 100 ಮಿ.ಲೀ. ನಷ್ಟು ಈ ಕಷಾಯ ಬೆರೆಸಿ ಬೆಳೆಗೆ ಸಿಂಪರಣೆ ಮಡುತ್ತಾರೆ. ಹೂವಿನ ಗುಣಮಟ್ಟ ವೃದ್ಧಿಸಲು ಗೋ ಮೂತ್ರವನ್ನೂ ಸಿಂಪರಣೆ ಮಾಡುತ್ತಾರೆ. ಉಪದ್ರವಿ ಕೀಟಗಳು ವಿಕರ್ಷಿಸಲು ಎತ್ತಿನ ಕೋಡಿನ ತುಂಡು, ಕೊಳಗ, ಕೂದಲು, ಬಜಿಬೇರು ಸೇರಿಸಿ ಸಾಯಂಕಾಲ ತೋಟದ ಮೂಲೆ-ಮೂಲೆಗಳಲ್ಲಿ ಹೊಗೆ ಮಾಡಿ ನಿಯಂತ್ರಿಸುತ್ತಾರೆ. ತೋಟದ ಬದಿಯಲ್ಲಿ ಟ್ಯಾಂಕ್ ನಿರ್ಮಿಸಿದ್ದು ಅದರಲ್ಲಿ ಗೋಮೂತ್ರ, ಎರೆಜಲ, ಜೀವಾಮೃತ ಸಂಗ್ರಹಿಸಿ 'ಸಕ್ಷನ್ ಪೈಪ್'ಗಳ ಮೂಲಕ ಬೆಳೆಗಳಿಗೆ ಸಾಗಿಸುತ್ತಾರೆ. ಈ ಎಲ್ಲ ಕಾರಣಗಳಿಂದ ಮಲ್ಲಿಗೆ ಹೂಗಳು ಸುವಾಸನೆ, ಮತ್ತು ತೂಕವನ್ನು ಹೊಂದಿ ಹೆಚ್ಚು ಕಾಲದ ವರೆಗೆ ತಾಜಾತನ ಕಾಯ್ದುಕೊಳ್ಳುತ್ತವೆ. ಬಿಸಿ ವಾತಾವರಣದಲ್ಲಿ ಹೂವಿನ ಇಳುವರಿ ಕಡಿಮೆ ಇರುತ್ತದೆ, ಮಳೇ ಬಿದ್ದು ವಾತಾವರಣದಲ್ಲಿ ನೀರಿನಾಂಶ ಇದ್ದರೆ ಮೊಗ್ಗು ದಪ್ಪವಾಗಿ ತೂಕ ಹಾಗೂ ಆಕಾರ ಸೇರಿದಂತೆ ಹೆಚ್ಚು ಇಳುವರಿ ದೊರಕುತ್ತದೆ ಎನ್ನುತ್ತಾರೆ ಪ್ರಮೀಳಾ.

**ಕೆಲಸಗಾರರಿಗೆ ದುಡಿಮೆ ನೀಡಿದರು**

ಪಕ್ಕದ ಮುಟುಗನಹಳ್ಳಿಯಿಂದ ಮೊಗ್ಗು ಬಿಡಿಸಲು ನಿತ್ಯ 200 ಕ್ಕಿಂತ ಹೆಚ್ಚು ಕಾರ್ಮಿಕರು ಇವರ ತೋಟಕ್ಕೆ ಕೆಲಸಕ್ಕೆ ಬರುತ್ತಾರೆ. ಬಿಡಿಸಿದ ಪ್ರತಿ ಕೆ.ಜಿ. ಮೊಗ್ಗಿಗೆ 20 ರೂಪಾಯಿಯಂತೆ ಕೂಲಿ ಪಡೆಯುತ್ತಾರೆ. ದಿನಕ್ಕೆ ಸಾಮಾನ್ಯವಾಗಿ ಒಬ್ಬರು ಸೀಸನ್‌ನಲ್ಲಿ 4 ರಿಂದ 6 ಕೆ.ಜಿ. ಮೊಗ್ಗು ಬಿಡಿಸುತ್ತಾರೆ. ವಾರಕ್ಕೊಮ್ಮೆ ಕೂಲಿಕಾರರ ವೇತನ ಬಟಾವಡೆ ನಡೆಯುತ್ತದೆ. ಅಂದು ಪ್ರಮಿಳಾ ಅವರು ಪ್ರತಿ ದಿನ 30,000 ರೂಪಾಯಿಗಿಂತಲೂ ಹೆಚ್ಚು ಹಣವನ್ನು ವಿತರಣೆ ಮಾಡುತ್ತಾರೆ. ಮೊಗ್ಗು ಬಿಡಿಸುವ 50 ಕಾರ್ಮಿಕರಿಗೊಬ್ಬರಂತೆ ಮೇಲ್ವಿಚಾರಕರನ್ನು ನೇಮಿಸಿದ್ದಾರೆ. ಕೆಲಸಗಾರರ ಕುಟುಂಬದಲ್ಲಿ ಮದುವೆ, ಮುಂಜಿಯಂತಹ ಕಾರ್ಯಗಳು ಬಂದಾಗ ಮುಂಗಡವಾಗಿ ಹಣ ನೀಡುವುದು ಅನಿವಾರ್ಯ. ಒಂದು ಎಕರೆ ಮಲ್ಲಿಗೆ ಮೊಗ್ಗು ಬಿಡಿಸಲು 40,000 ರೂಪಾಯಿ ಕೂಲಿ ತಗುಲುತ್ತದೆ. ವಾರ್ಷಿಕವಾಗಿ ಸುಮಾರು ಐದರಿಂದ ಆರು ಲಕ್ಷ ರೂಪಾಯಿ ಕಾರ್ಮಿಕರಿಗೆ ಕೂಲಿ ನೀಡುತ್ತೇವೆ ಎಂದು ವಿವರಣೆ ನೀಡುತ್ತಾರೆ ಶಿವಪುತ್ರಪ್ಪ ಎತ್ತಿನಮನಿಯವರು. ಹೆಚ್ಚು ಕಡಿಮೆ ಬರಗಾಲದ ನೆರಳಲ್ಲಿಯೇ ಇರುವ ಈ ಭಾಗದ ಜನತೆಗೆ ಈ ತೋಟ ಕೆಲಸ ನೀಡಿ ಕೈತುಂಬ ಕೂಲಿ ನೀಡುವ ತಾಣವಾಗಿದೆ. ನಾಲ್ಕಾರು ತಿಂಗಳು ಬಿಡುವಿಲ್ಲದೇ ನೂರಾರು ಜನರಿಗೆ ಕೆಲಸ ದೊರೆತರೆ, ಉಳಿದ ದಿನಗಳಲ್ಲಿ ಬಳ್ಳಿ ಕಟಾವ್ ಮಾಡುವುದು, ನೀರು ಹಾಯಿಸುವುದು, ಸಾವಯವ ಗೊಬ್ಬರ ತಯಾರಿಕೆ, ಕಳೆ ತೆಗೆಯಲು, ಸಾವಯವ ಔಷಧಿ ಸಿಂಪರಣೆ ಮಾಡಲು, ತೋಟದ ಸುತ್ತಲಿರುವ ತೆಂಗಿನ ಮರದ ಕಾಯಿ ಇಳಿಸುವುದು, ಗಿಟಗ ಬಿಡಿಸುವುದು, ಹೊಸ ಪ್ಲಾಂಟೇಶನ್‌ನಂತಹ ವಿವಿಧ ಕೆಲಸಗಳು ಇದ್ದೇ ಇರುತ್ತವೆ. ಹೀಗಾಗಿ ವರ್ಷ ಪೂರ್ತಿ ಕೆಲಸ ದೊರಕುತ್ತದೆ.

**ಬ್ಯಾಂಕಿನಿಂದ ಜಮೀನಿಗೆ**

ಅಂದ ಹಾಗೆ ಎತ್ತಿನಮನಿಯವರು ಮೂಲತಃ ಕೃಷಿಕರಲ್ಲ.. 25 ವರ್ಷಗಳ ಹಿಂದೆ ಪ್ರಮೀಳಾ ಅವರು ಶಿವಪುತ್ರಪ್ಪನವರ ಕೈಹಿಡಿದು ಮನೆಗೆ ಬಂದಾಗ ಶಿವಪುತ್ರಪ್ಪ ಗ್ರಾಮೀಣ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಬ್ಯಾಂಕ್ ಮಾನೇಜರೊಬ್ಬರ ಹೆಂಡತಿಯಾಗಿ ಸುಖದ ಜೀವನ ನಡೆಸುತ್ತಿದ್ದ ಆ ಸಮಯ ಬಹಳ ದಿನ ಉಳಿಯಲಿಲ್ಲ. ಕೆಲವೊಂದು ಕಾರಣಗಳಿಂದ ಶಿವಪುತ್ರಪ್ಪ ಸ್ವತಃ ಸೇವೆಯಿಂದಲೇ ಮುಕ್ತಿ ಹೊಂದಿದರು. ಹಿರಿಯರ ಆಸ್ತಿ ಎಂಬುದೇನೂ

ಇವರಿಗೆ ಇದ್ದಿಲ್ಲ. ಇಂತಹ ಸಂದರ್ಭದಲ್ಲಿ ಆಕಾಶವೇ ಕಳಚಿ ಮೇಲೆ ಬಿದ್ದಂತಾಯಿತು. ಎದೆಗುಂದಿದ ಶಿವಪುತ್ರಪ್ಪ ಅವರ ಮನಸ್ಸಿಗೆ ಸತಿ ಪ್ರಮೀಳಾ ಅವರ ಮಾತುಗಳು ಧೈರ್ಯ ತುಂಬುತ್ತಿದ್ದವು. ಕಷ್ಟ ಕಾಲದಲ್ಲಿ ಕೆಲವೊಬ್ಬರು ಅಲ್ಪ ಸಹಾಯ ಮಾಡಿದರು. ಜಮೀನು ಹಿಡಿದು ಕೃಷಿ ಮಾಡಿ ಬದುಕು ನಡೆಸೋಣ ಎಂಬ ಪ್ರಮಿಳಾ ಅವರ ಒತ್ತಾಸೆಗೆ ಮಣಿದರು. ಬಂಗಾರದ ಆಸೆ ಬಿಟ್ಟ ಪ್ರಮೀಳಾ ಬಂಗಾರದ ಬೆಳೆ ಪಡೆಯಲು ನಿಶ್ಚಯಿಸಿ ತಮ್ಮ ಮೈಮೇಲೆ ಹಾಕಿಕೊಂಡಿದ್ದ ಬಂಗಾರದ ಒಡವೆಗಳನ್ನೆಲ್ಲಾ ಬಿಚ್ಚಿ ಕೊಟ್ಟರು. 1984ರಲ್ಲಿ ಹಗರಿಬೊಮ್ಮನಹಳ್ಳಿಯ ಶಿವಾನಂದ ನಗರದಲ್ಲಿ 5 ಎಕರೆ ಜಮೀನು ಖರೀದಿಸಿದರು. ಆರಂಭದಲ್ಲಿ ಜೋಳ, ಸಜ್ಜೆ, ಮೆಕ್ಕೆಜೋಳದಂತಹ ಬೆಳೆ ಬೆಳೆದರು. ಆದಿನ ನಮಗೆ ಎಂತಹ ಕಷ್ಟದ ಕಾಲ ಇತ್ತು ಅನ್ನೋದು ಹೇಳಿತೀನ್ರಿ, ಜೋಳ ಕೊಯ್ದ ಆಳುಗಳಿಗೆ ಕೂಲಿ ಕೊಡ್ಲಿಕ್ಕೆ ನಮ್ಮಲ್ಲಿ ದುಡ್ಡು ಇದ್ದಿಲ್ಲ, ಮೇಲಿಂದ ಮೇಲೆ ಕೂಲಿ ಆಳುಗಳು ಹಣಕ್ಕಾಗಿ ಮನೆಗೆ ಅಲೆಯುವುದರಿಂದ ಬೇಸರವಾಗಿ ಬಡ್ಡಿ ರೂಪದಲ್ಲಿ ಸಾಲ ತರಲೆಂದು ನಾನು ಪೇಟೆಗೆ ಹೋಗಿದ್ದ ಸಮಯದಲ್ಲಿ, ಮೂರು ತಿಂಗಳ ಬಾಣಂತಿಯಾಗಿದ್ದ ನನ್ನ ಶ್ರೀಮತಿಯವರು ನನ್ನ ಕಷ್ಟ ನೋಡದೇ ತಾವೊಬ್ಬರೇ ಒಣಗಿದ ತೆನೆಗಳನ್ನು ಆಯ್ದು ಬಡಿದು ರಾಶಿ ಮಾಡಿ 20 ಸೇರು ಕಾಳು ಮಾಡಿದ್ದರು. ಅದೇ ಜೋಳ ಮಾರಿ ಆಳುಗಳಿಗೆ ಕೂಲಿ ನೀಡಿದೆವು, ಆದಾಗ್ಯೂ ನಮಗೂ ಒಂದು ಉತ್ತಮ ಕಾಲ ಬಂದೇ ಬರುತ್ತದೆ ಎಂಬ ಆಶಾಭಾವನೆ ಇದ್ದೇ ಇತ್ತು. ಅದೀಗ ಬಂದಿದೆ, ಅದೆಲ್ಲ 'ಕ್ರೆಡಿಟ್' ನಮ್ಮ ಶ್ರೀಮತಿಯವರ ಶ್ರಮಕ್ಕೆ ಸಲ್ಲುತ್ತದೆ ಎಂದು ಹೇಳುತ್ತಾರೆ. ಅಂದ ಹಾಗೆ 2005–06ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಈ ಆದರ್ಶ ರೈತ ಮಹಿಳೆಯನ್ನು ಗುರುತಿಸಿ, "ಕೃಷಿ ಪಂಡಿತ" ಪ್ರತಿಷ್ಠಿತ ಪ್ರಶಸ್ತಿಯನ್ನು ಈ ದಂಪತಿಗಳಿಬ್ಬರಿಗೂ ಜಂಟಿಯಾಗಿ ನೀಡಿ ಅವರ ಕೃಷಿ ಕಾರ್ಯಕ್ಕೆ ಮತ್ತಷ್ಟು ಇಂಬು ನೀಡಿದೆ. ●

# ಬೆಲೆ ಅಪಾಯಗಳನ್ನು ಎದುರಿಸಲು ಒಂದು "ಮಾದರಿ ಒಪ್ಪಂದ ಕೃಷಿ ಕಾನೂನು"

**ಡಾ|| ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ**

ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯವು "ಮಾದರಿ ಒಪ್ಪಂದ ಕೃಷಿ ಕಾನೂನಿನ" ಒಂದು ಕರಡು ಪ್ರತಿಯನ್ನು ಸಿದ್ಧಪಡಿಸಿದೆ. ಕೃಷಿ ಕ್ಷೇತ್ರದ ಉದ್ಯಮದಲ್ಲಿರುವವರ ಪ್ರಕಾರ ಈ ಕಾನೂನು ಬೆಲೆ ಅಪಾಯಗಳಿಂದ ರಕ್ಷಣೆ ಕೊಡುತ್ತದೆ, ಮತ್ತು ಆಹಾರ ಸಂಸ್ಕರಣಾ ಕಂಪನಿಗಳು ಮೂಲಸೌಕರ್ಯಕ್ಕಾಗಿ ಹೆಚ್ಚು ಹೂಡಿಕೆ ಮಾಡಲು ಮತ್ತು ಈ ಕಾನೂನನ್ನು ಒಪ್ಪಿಕೊಂಡ ನಂತರ ರಾಜ್ಯ ಸರ್ಕಾರಗಳು ಕೃಷಿ ತಂತ್ರಜ್ಞಾನಕ್ಕಾಗಿ ಹೆಚ್ಚು ಹೂಡಿಕೆ ಮಾಡಲು ಸಾಧ್ಯವಾಗುತ್ತದೆ. ದೇಶದ ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಆಯ–ವ್ಯಯ ವರದಿಯಲ್ಲಿ (ಬಜೆಟ್) ಘೋಷಿಸಿರುವಂತೆ, ಕೃಷಿಕರನ್ನು ಮತ್ತು ಕೃಷಿ–ಕೈಗಾರಿಕೆಗಳನ್ನು ಸಂಯೋಜಿಸಿ ಕೃಷಿಕರ ಉತ್ಪಾದನೆಗಳಿಗೆ ಉತ್ತಮ ಬೆಲೆ ದೊರಕಲು ಸಹಾಯವಾಗುವಂತೆ "ಒಪ್ಪಂದ ಕೃಷಿ" ಕಾನೂನಿ ಒಂದು ಕರಡು ಪ್ರತಿಯನ್ನು ಸಿದ್ಧಪಡಿಸಿದೆ. ಕೃಷಿ–ಕೈಗಾರಿಕೆಯಲ್ಲಿರುವವರು ಈ ಕರಡು ಪ್ರತಿಯನ್ನು ಸ್ವಾಗತಿಸಿದ್ದಾರೆ. ಏಕೆಂದರೆ, ಇದು ಕೃಷಿಕರು ಮತ್ತು ಖರೀದಿಸುವವರು ಮುಂಚಿನ–ಒಪ್ಪಂದದ ಪ್ರಕಾರ ಬೆಲೆ ಮತ್ತು ಪ್ರಮಾಣವನ್ನು ಪೂರೈಸಲು ಖಾತ್ರಿಪಡಿಸುತ್ತದೆ. ಇದರಿಂದ ಕೃಷಿಕರಿಗೆ ಕೊಯ್ಲೋತ್ತರ ಮಾರುಕಟ್ಟೆಯ ಅನಿರೀಕ್ಷಿತತೆಯಿಂದ ಉಂಟಾಗುವ ನಷ್ಟವನ್ನು ತಪ್ಪಿಸಿ ರಕ್ಷಣೆ ಕೊಡುತ್ತದೆ, ಮತ್ತು ಕೃಷಿಕರ ಜಮೀನುಗಳ ಮಾಲೀಕತ್ವವನ್ನು ಕಂಪನಿಗಳಿಗೆ ವರ್ಗಾಯಿಸುವುದನ್ನು ನಿರ್ಬಂಧಿಸುತ್ತದೆ. ಸಣ್ಣ ಹಿಡುವಳಿ ಕೃಷಿಕರ ಹಿತಾಸಕ್ತಿಯನ್ನು ರಕ್ಷಿಸುವುದರ ಮೂಲಕ ಈ ಕಾನೂನು ಮಂಡಿಗಳು ಅಥವಾ ಕೃಷಿ ಉತ್ಪನ್ನನ ಮಾರುಕಟ್ಟೆ ಸಮಿತಿಗಳನ್ನು ಕಡೆಗಣಿಸಿ ಕಚ್ಚಾ ಪದಾರ್ಥಗಳು ಕೈಗಾರಿಕೆಗಳಿಗೆ ಸರಾಗವಾಗಿ ತಲುಪುವಂತೆ ಮಾಡುತ್ತದೆ, ಎಂದು 'ಜೈನ್ ಇರಿಗೇಷನ್ ಸಿಸ್ಟಮ್ಸ್'ನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅನಿಲ್ ಜೈನ್ ರವರು ಹೇಳಿರುತ್ತಾರೆ. "ಆದಾಗ್ಯೂ, ಈ ಕರಡು ಪ್ರತಿಯ ಕಾನೂನಿನಲ್ಲಿರುವ ಕೆಲವು ಷರತ್ತುಗಳನ್ನು ಎಚ್ಚರಿಕೆಯಿಂದ ಪುನಃ ಪರಿಶೀಲಿಸಬೇಕು. ಇದರಿಂದ ಎಲ್ಲಾ ಭಾಗೀದಾರರಿಗೂ ನ್ಯಾಯ ದೊರಕುವಂತಾಗಬೇಕು. ಈ ಪ್ರಸ್ತಾಪಿತ ಕಾನೂನಿನಿಂದ ಸರ್ಕಾರಿ ಕಚೇರಿಗಳಲ್ಲಿ ಕಡತಗಳ ವಿಲಂಬಗತಿಯನ್ನು ತಪ್ಪಿಸಬಹುದು" ಎಂದು ಶ್ರೀ ಜೈನ್ ರವರು ಹೇಳಿರುತ್ತಾರೆ. "ವಿವಾದಗಳನ್ನು ಬಗೆಹರಿಸುವ ವಿಧಾನವು ಕಾರ್ಯಸಾಧುವಾಗಿರಬೇಕು, ಮತ್ತು ಶೀಘ್ರವಾಗಿರಬೇಕು" ಎಂದು ಶ್ರೀ ಜೈನ್ ರವರು ಹೇಳಿರುತ್ತಾರೆ. ಪ್ಯಾಕೇಜ್ಡ್ ಫುಡ್ಸ್ ಕಂಪನಿಯಾದ "ಫೀಲ್ಡ್ ಫ್ರೆಷ್"ನ ಮುಖ್ಯ ಕಾರ್ಯಕಾರಿ ಅಧಿಕಾರಿಯಾದ ಶ್ರೀ ಯೋಗೇಶ್ ಬೆಲ್ಲಾನಿಯವರ ಪ್ರಕಾರ ಈ ಕಾನೂನಿನಿಂದ ಕೃಷಿ ಕ್ಷೇತ್ರಕ್ಕೆ ಹೂಡಿಕೆ ಹೆಚ್ಚಾಗುತ್ತದೆ. ಏಕೆಂದರೆ, ದೇಶದ ಜನಸಂಖ್ಯೆಯ ಶೇಕಡಾ 58ರಷ್ಟು ಜನರಿಗೆ ಕೃಷಿ ಕ್ಷೇತ್ರವೇ ಜೀವನೋಪಾಯವಾಗಿದೆ.

(**ಆಧಾರ**: ದಿ ಎಕನಾಮಿಕ್ ಟೈಮ್ಸ್, ನವ ದೆಹಲಿ, 1.1.2018)

# ಯುವಜನತೆಯನ್ನು ವಾಪಸ್ಸು ಹಳ್ಳಿಗೆ ಕರೆತನ್ನಿ – ಬಜೆಟ್‌ನಲ್ಲಿ ಕೃಷಿ ಯುವನೀತಿ ಬೇಕಿತ್ತು

**ಶೋಭಾ.ಹೆಚ್.ಜಿ, ಪತ್ರಕರ್ತೆ, ಮತ್ತು ಸಂಪಾದಕರು, 'ಸ್ತ್ರೀ ಜಾಗೃತಿ' ಮಾಸಪತ್ರಿಕೆ, ಬೆಂಗಳೂರು**

ಮುಖ್ಯಮಂತ್ರಿ ಕುಮಾರಸ್ವಾಮಿಯವರು ತಮ್ಮ ಬಜೆಟ್‌ನಲ್ಲಿ ಸಾಲ ಮನ್ನಾದ ಜೊತೆ ಯುವಜನತೆಯ ಅಭಿವೃದ್ಧಿಯ ಹೊಸ ಯೋಜನೆಗಳ ಬಗ್ಗೆ ಹೇಳಬಹುದು ಎನ್ನುವ ನಿರೀಕ್ಷೆ ಇತ್ತು. ಈ ಬಾರಿ ಬಜೆಟ್ ಯುವಕರನ್ನು ಕೃಷಿ ಚಟುವಟಿಕೆಗಳಿಗೆ ಆಕರ್ಷಿಸಲು ವಿಫಲಗೊಂಡಿದೆ – ಸಾಮಾಜಿಕ–ಆರ್ಥಿಕ ಅಂಶಗಳ ಕಾರಣದಿಂದಾಗಿ ಲಾಭದಾಯಕತೆಯೂ ಸೇರಿದಂತೆ. ಹಲವಾರು ಸವಾಲುಗಳನ್ನು ಕೃಷಿ ಚಟುವಟಿಕೆಗಳಲ್ಲಿ ಕಾಣುತ್ತಿದ್ದೇವೆ. ಹಳ್ಳಿಗಳಿಂದ ಉದ್ಯೋಗ ಹುಡುಕಿಕೊಂಡು ಜೀವನೋಪಾಯಕ್ಕೆ ಬರುವವರ ಸಂಖ್ಯೆ ಇಂದು ಹೆಚ್ಚುತ್ತಿದೆ, ಈಗ ಹಳ್ಳಿಗಳಲ್ಲಿ ನಾವು ಯುವ ರೈತರನ್ನು ನೋಡಲು ಸಾಧ್ಯವಾಗುತ್ತಿಲ್ಲ. ಎಂತಹ ಕೆಲಸ ಅದರೂ ಸರಿ ಪಟ್ಟಣಗಳ ವಿಲಾಸಿ ಸುಲಭ ಜೀವನಕ್ಕಾಗಿ ನಗರಕ್ಕೆ ತಂಡೋಪತಂಡವಾಗಿ ಹಳ್ಳಿಗಳಿಂದ ವಲಸೆ ಬರುತ್ತಿದ್ದಾರೆ. ಅದಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ಯುವಜನತೆಗೆ ಸ್ವಾವಲಂಬಿ ಜೀವನ ನಡೆಸುವಂತಹ ವೃತ್ತಿ ತರಬೇತಿಗಳು ಮತ್ತು ಅದನ್ನು ಅಲ್ಲಿಯೇ ಮಾಡುವಂತಹ ಕೃಷಿ ಕೆಲಸವನ್ನು ಸೇರಿಸಿಕೊಂಡಂತೆ ಒಂದು ಯುವ ನೀತಿಯೊಂದನ್ನು ಸರಕಾರ ರೂಪಿಸಬೇಕಿತ್ತು.

ಪಾರಂಪರಿಕ ಕೌಶಲ್ಯಗಳು ಹೆಚ್ಚಿಸುವಲ್ಲಿ ಸ್ಥಳೀಯ ಪರಿಸರಕ್ಕೆ ತಕ್ಕಂತೆ ಯುವ ಜನಾಂಗವನ್ನು ಬೆಳೆಸುವತ್ತ ಯೋಚಿಸಬೇಕು. ಯುವಜನಾಂಗ ಸ್ವಾವಲಂಬಿ ಆಗುವಂತೆ ವೃತ್ತಿಶಿಕ್ಷಣ ಹಾಗೂ ಪ್ರತಿಭೆ ಕೌಶಲ್ಯ ಪ್ರೋತ್ಸಾಹಿಸುವಂತಹ ಯೋಜನೆಗಳ ಬಗ್ಗೆ ಚಿಂತನೆ ಮತ್ತು ಜಾರಿ ತರಬೇಕು. ಗ್ರಾಮೀಣ ಪ್ರದೇಶದಲ್ಲಿ ಯುವಜನರು ಪೋಷಕರ ಜೊತೆ ಉಳಿಯಲು ಪ್ರಾಮುಖ್ಯತೆ ನೀಡಬೇಕಾಗಿದೆ. ಅದಕ್ಕಾಗಿ ಸರಕಾರ ವಿವಿಧ ಉದ್ಯೋಗ ಮತ್ತು ಸ್ವಯಂ ಉದ್ಯೋಗಗಳನ್ನು ಸೃಷ್ಟಿಸಬೇಕಿದೆ. ವಿವಿಧ ಚಟುವಟಿಕೆಗಳು ಕೃಷಿ ಕಾರ್ಯಕ್ರಮಗಳು: ಡೈರಿ, ಕೋಳಿ, ತೋಟಗಾರಿಕೆ, ತೋಟಗಾರಿಕೆ, ರೇಷ್ಮೆ ಕೃಷಿ, ಮಶ್ರೂಮ್ ಕೃಷಿ, ಹೂ ಕೃಷಿ, ಮೀನುಗಾರಿಕೆ ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಹೆಚ್ಚು ಮಾಡುವಲ್ಲಿ ಮತ್ತು ಅದಕ್ಕೆ ಬೇಕಾದ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡಬೇಕಿದೆ. ಹಳ್ಳಿಗಳಲ್ಲಿ ಕೃಷಿಯ ವಿಸ್ತರಣೆಗಾಗಿ ರೈತರಿಗೆ ಉಪಯುಕ್ತ ಮಾಹಿತಿಯನ್ನು ನೀಡುವುದಕ್ಕಾಗಿ ಮತ್ತು ಅಗತ್ಯವಿರುವ ಜ್ಞಾನ, ಕೌಶಲ್ಯ ಅಭಿವೃದ್ಧಿಪಡಿಸಲು ಉತ್ತಮ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಬಗ್ಗೆ ಯೋಚಿಸಬೇಕಿದೆ. ರೇಡಿಯೋ, ದೂರದರ್ಶನ ಮತ್ತು ಮುದ್ರಣ ಮಾಧ್ಯಮಗಳನ್ನು ಕೃಷಿ ವಿಸ್ತರಣೆಗಾಗಿ ಉಪಯೋಗಿಸಿಕೊಳ್ಳಬಹುದು.

ನಮ್ಮ ದೇಶ ಸಂಪ್ರದಾಯಗಳು ಮತ್ತು ಸಂಸ್ಕೃತಿಯೊಂದಿಗೆ ಸಂಪರ್ಕ ಹೊಂದಿದ ಕಾರಣ ಕೃಷಿಯ ಸಂಪ್ರದಾಯವನ್ನು ಮುಂದುವರಿಸುವುದು ಯುವಜನರ ಜವಾಬ್ದಾರಿಯಾಗಿದೆ, ಜಾಗತೀಕರಣ ಯುಗದಲ್ಲಿ ನಗರಗಳಲ್ಲಿ ಕೈಗಾರಿಕೀಕರಣ ಹೆಚ್ಚಾಗಿರುವುದರಿಂದ ಗ್ರಾಮೀಣ ಪ್ರದೇಶ ನಗರೀಕರಣ ಆಗುವುದನ್ನು ತಡೆಯಲು ಕೃಷಿಯನ್ನು ನಾವು ಪ್ರಮುಖ ಉದ್ಯಮವಾಗಿ ಪರಿಗಣಿಸಬೇಕಾಗಿದೆ. ಕೃಷಿ ಆಧುನೀಕರಣದ ಪ್ರಯೋಜನಗಳೆಂದರೆ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಅಗತ್ಯವಾದ ಅತ್ಯಾಧುನಿಕ ವಿಧಾನಗಳ ಬಗ್ಗೆ ಯುವ ರೈತರಿಗೆ ತರಬೇತಿ ನೀಡಿ ಸೌಲಭ್ಯ ಒದಗಿಸಬೇಕಿದೆ.

**ಕೃಷಿಯ ಜೊತೆಗೆ ಇತರ ಗ್ರಾಮೀಣ ಕಾರ್ಯಕ್ರಮಗಳ ಬಗ್ಗೆ ಸಹ ಸರಕಾರ ಯೋಚಿಸಬಹುದು**

ಸ್ಥಳೀಯ ಅವಶ್ಯಕತೆಗಳನ್ನು ಅವಲಂಬಿಸಿ ಯಾವುದೇ ಕ್ಷೇತ್ರದಂತಹ ವಲಯಗಳಿಗೆ ಸಂಬಂಧಿಸಿದ ಅಂದರೆ, ಕಾಟೇಜ್ ಇಂಡಸ್ಟ್ರಿ ಇದು ಭಾರತದಲ್ಲಿ ಬಡ ಹಳ್ಳಿಗರಿಗೆ ಲೈಫ್‌ಲೈನ್ ಆಗಿದೆ: ಗ್ರಾಮೀಣ ಪ್ರದೇಶದಿಂದ ಬಂದು ನಗರದಲ್ಲಿರುವ ಯುವಜನರು ತಮ್ಮ ಹಳ್ಳಿಗಳಿಗೆ ಹಿಂತಿರಗಬಹುದು. ಆದರೆ ಅದರ ಬಗ್ಗೆ ಜಾಗೃತಿಯನ್ನು ಮೂಡಿಸುವ ಪ್ರಯತ್ನಗಳಾಗ ಬೇಕಿದೆ.

ದೂರದರ್ಶನ ಮತ್ತು ಖಾಸಗಿ ಚಾನೆಲ್‌ಗಳ ಮುಖಾಂತರ ಕೃಷಿಯನ್ನು ಸುಧಾರಿಸಲು ಆಧುನಿಕ ತಂತ್ರಜ್ಞಾನದ ಪಾತ್ರದ ಬಗ್ಗೆ ಸುದ್ದಿಗಳನ್ನು ಪ್ರಸಾರ ಮಾಡುವುದು ಮತ್ತು ಕೃಷಿ ಕ್ಷೇತ್ರದಲ್ಲಿನ ತಂತ್ರಜ್ಞಾನದ ವಿಕಸನಗಳನ್ನು ತ್ವರಿತವಾಗಿ ತಿಳಿಯಪಡಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಅಭಿವೃದ್ಧಿ ಪಡಿಸುವುದರ ಬಗ್ಗೆ ನಿರಂತರ ಮಾಹಿತಿ ನೀಡಲು ಯುವಜನತೆಗೆ ಚಾನೆಲ್‌ಗಳು ಶಕ್ತಿಶಾಲಿ ಸಂವಹನ ಸಾಧನವಾಗಿದೆ.

ಟಿವಿಗಳಲ್ಲಿ ವ್ಯವಸಾಯ ವಿಸ್ತರಣೆಗಾಗಿ ರೈತರ ಅನುಭವವನ್ನು ಹಂಚಿಕೊಳ್ಳುವ ಮಾತುಕತೆಗಳು, ಗುಂಪು ಚರ್ಚೆಗಳು, ಸಂಭಾಷಣೆ ಮತ್ತು ನಾಟಕಗಳು ಸಾಮಾನ್ಯವಾಗಿ ಆಯೋಜಿಸಲ್ಪಡಬೇಕಾಗುತ್ತದೆ. ನಿರಂತರ ಮಾಹಿತಿಯ ಹರಿವು ಬೇಕಾಗಿರುವ ಕೃಷಿ ಯಾವಾಗಲೂ ಹೆಚ್ಚಿನ ಜ್ಞಾನ–ತೀವ್ರ ಕ್ಷೇತ್ರವಾಗಿದೆ. ಕೃಷಿಗೆ ಸಂಬಂಧಪಟ್ಟಂತೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಹೊಸ ವಿಧಾನಗಳು ಮತ್ತು ತಂತ್ರಗಳ ಬಗ್ಗೆ ಮಾಹಿತಿಯನ್ನು ಪ್ರಸರಿಸುವ, ಬೆಳೆ ಕೀಟಗಳು ಮತ್ತು ರೋಗಗಳ ನಿಯಂತ್ರಣ, ಹವಾಮಾನ, ಮಾರುಕಟ್ಟೆ ಸುದ್ದಿ ಮುಂತಾದ ಸಕಾಲಕ್ಕೆ ಮಾಹಿತಿಯನ್ನು ನೀಡುವಂತಹ ಸಮುದಾಯ ರೇಡಿಯೋಗಳನ್ನು ಹೆಚ್ಚು ಮಾಡಬೇಕು.

**ಉದ್ಯೋಗ ಸೃಷ್ಟಿಗೆ ರಾಜ್ಯದಲ್ಲಿ ಉದ್ಯಮಗಳಿಗೆ ಪ್ರೋತ್ಸಾಹ**

ರಾಜ್ಯದ ಯುವಕರಿಗೆ, ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ಸರ್ಕಾರ ಬದ್ಧವಾಗಿದೆ. ಈ ವಿಚಾರ ಬಜೆಟ್‌ನಲ್ಲಿ ಎಲ್ಲವೂ ತಿಳಿಯಲಿದೆ. ಉದ್ಯಮಗಳನ್ನು ಬೆಂಗಳೂರಿಗಷ್ಟೇ ಸೀಮಿತಗೊಳಿಸದೇ ಎಲ್ಲೆಡೆಯೂ ಆರಂಭಿಸ ಲಾಗುವುದು. ಚೀನಾದಲ್ಲಿ ನಡೆದಿರುವ ಔದ್ಯಮೀಕರಣಕ್ಕೆ ಪೈಪೋಟಿ ನೀಡುವ ಮಟ್ಟಕ್ಕೆ ಉದ್ಯಮಗಳನ್ನು ತಂದು ಉದ್ಯೋಗ ಸೃಷ್ಟಿಸಲಾಗುವದು. ಅಲ್ಲಿವರೆಗೆ ಯುವಕರು ತಾಳ್ಮೆ ಇಟ್ಟುಕೊಳ್ಳಬೇಕು ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಹೇಳಿದ್ದಾರೆ, ಅದನ್ನು ಎಷ್ಟರ ಮಟ್ಟಿಗೆ ಅನುಷ್ಠಾನ ಮಾಡುತ್ತಾರೆ ಎಂದು ಕಾದು ನೋಡಬೇಕಿದೆ.

# ಪಾರ್ಥೇನಿಯಂ ದೈತ್ಯ ಕಳೆಯ ಹಾವಳಿ, ಮೂರು ದಶಕಗಳ ಹಿಂದೆ ಮತ್ತು ಇಂದು

ಡಾ॥ ಎಂ. ಮಹದೇವಪ್ಪ



ಲ್ಯಾಟಿನ್ ಅಮೇರಿಕ ಮೂಲದ, ಆಕ್ರಮಣಕಾರಿ ವಿಷಪೂರಿತ ಪಾರ್ಥೇನಿಯಂ ಕಳೆ (ಕಾಂಗ್ರೆಸ್ ಕಸ), 1956ನೆಯ ಇಸವಿಯಲ್ಲಿ ಮೊದಲ ಬಾರಿಗೆ ಪುಣೆಯಲ್ಲಿ ಕಾಲಿಟ್ಟು, 1960ರಿಂದ 1990ರವರೆಗೆ ಈಗ ಇಡೀ ದೇಶವನ್ನೇ ಆಕ್ರಮಿಸಿ, ಜನ ಜಾನುವಾರು ಮತ್ತು ಇತರೇ ಸಸ್ಯಗಳಿಗೆ ಮಾರಕವಾಗಿದ್ದುದು ತಿಳಿದ ವಿಷಯ. ಈ ಕಳೆಯಿಂದ ವಿವಿಧ ಕೃಷಿ, ತೋಟಗಾರಿಕೆ, ಮೇವು ಮುಂತಾದ ಅನೇಕ ಬೆಳೆಗಳ ಇಳುವರಿ ಅಲ್ಲಲ್ಲಿ ಪ್ರತಿಶತ 40 ರಷ್ಟು ಅಥವಾ ಇನ್ನೂ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿರುವುದು ದಾಖಲಾಗಿದೆ. ಬೀಳು ಬಿಟ್ಟಿರುವ ಯಾವುದೇ ಭೂಮಿ ಅಥವಾ ಗೋಮಾಳಗಳನ್ನು ಆಕ್ರಮಿಸಿ ತನ್ನದೇ ಸಾಮ್ರಾಜ್ಯ ಸ್ಥಾಪಿಸಬಲ್ಲ ಸಾಮರ್ಥ್ಯ ಈ ಕಳೆಯ ವೈಶಿಷ್ಟ್ಯ. ಇದರಿಂದಾಗಿ ಜಾನುವಾರುಗಳಿಗೆ ಮೇವಿನ ಅಭಾವ ಉಂಟಾಗಿ ಜಾನುವಾರುಗಳು ಕಂಗೆಟ್ಟಿರುವುದು ಎಲ್ಲರಿಗೂ ತಿಳಿದಿದೆ. ಕಳೆಯ ಹಸಿ ಅಥವಾ ಒಣಗಿದ ಭಾಗಗಳ ಸೋಂಕು ಸೂಕ್ಷ್ಮಗ್ರಾಹಿಗಳಿಗೆ ಚರ್ಮರೋಗಗಳನ್ನುಂಟು ಮಾಡುತ್ತದೆ. ಪಾರ್ಥೇನಿಯಂ ಸಸ್ಯದ ಪರಾಗ ಕಣಗಳು ಬಹಳ ಹಾನಿಕಾರಿಯಾಗಿದ್ದು, ಶ್ವಾಸೋಚ್ಛಾಸದ ತೊಂದರೆ ಉಂಟುಮಾಡುತ್ತವೆಯಲ್ಲದೆ, ಇದರಿಂದ ಅಸ್ತಮಾ, ರೈನೈಟಿಸ್ ಇಂತಹ ಬಾಧೆಗಳು ಉಲ್ಬಣಿಸುತ್ತವೆ. ಸಾಕು ಪ್ರಾಣಿಗಳು ಈ ಕಳೆಯ ಆಸುಪಾಸಿನ ಸಸ್ಯಗಳನ್ನು ತಿಂದಾಗ ಅವುಗಳ ಆರೋಗ್ಯದ ಮೇಲೆ ಅಹಿತಕರ ಪರಿಣಾಮ ಉಂಟಾಗುವುದು. ಈ ಕಳೆಯಲ್ಲಿರುವ "ಪಾರ್ಥೆನಿನ್" ಎಂಬ ವಿಷವಸ್ತು ಹಾಲಿನಲ್ಲಿ ಕಾಣಿಸಿಕೊಂಡಿರುವ ವರದಿಯಿದೆ. ಪರಿಸರಕ್ಕೆ ಇದರಿಂದ ಉಂಟಾಗಿರುವ ಹಾನಿಯ ಬಗ್ಗೆ ಅಸಂಖ್ಯ ದಾಖಲೆಗಳಿರುವುದನ್ನು ಇಲ್ಲಿಸ್ಮರಿಸಬಹುದು.

ಸುಮಾರು 0.5 ರಿಂದ 1.5 ಮೀಟರ್ ಎತ್ತರ ಬೆಳೆಯುವ ಈ ವಾರ್ಷಿಕ ಸಸ್ಯ, ಮಣ್ಣಿನಲ್ಲಿ ಸ್ವಲ್ಪವಷ್ಟೇ ತೇವಾಂಶವಿದ್ದರೂ ಸಾಕು, ಇದರ ಬೀಜಗಳು ಮೊಳಕೆ ಬಂದು, ಯಾವ ಕಾಲವೇ ಆಗಿರಲಿ, ವರ್ಷವಿಡೀ ಬೆಳೆಯುತ್ತಲೇ ಇರುತ್ತದೆ. ಪಾರ್ಥೇನಿಯಂ ಕಳೆಯ ಒಂದು ಸಸ್ಯ 8000–15000 ಬೀಜಗಳನ್ನು ಉತ್ಪಾದಿಸಿ ಗಾಳಿ, ನೀರು ಮತ್ತು ಇತರ ಎಲ್ಲ ಪ್ರಸರಣ ಮಾಧ್ಯಮಗಳ ಮೂಲಕ ಬೀಜವು ಸತತವಾಗಿ ಸುಲಭವಾಗಿ ಎಣಿಸಲಾರದಷ್ಟು ಸಂಖ್ಯೆಯಲ್ಲಿ ಎಲ್ಲೆಡೆಗೆ ಪ್ರಸಾರವಾಗುವ ಸಾಮರ್ಥ್ಯ ಬಹುಶಃ ಬೇರೆ ಯಾವ ಸಸ್ಯಕ್ಕೂ ಇರಲಾರದು.

**ಪಾರ್ಥೇನಿಯಂ ಕಳೆಯ ನಿರ್ವಹಣೆ**

ಪಾರ್ಥೇನಿಯಂ ಕಳೆಯನ್ನು ನಿಯಂತ್ರಿಸಲು ಭೌತಿಕ, ರಾಸಾಯನಿಕ ಹಾಗೂ ಜೈವಿಕ ಕ್ರಮಗಳನ್ನೊಳಗೊಂಡ ಕೃಷಿ ವಿಶ್ವವಿದ್ಯಾಲಯ ರೂಪಿಸಿದ "ಸಮಗ್ರ ನಿರ್ವಹಣೆ"ಯ ವಿಧಾನ ಹೆಚ್ಚು ಪರಿಣಾಮಕಾರಿಯಾಗಿದ್ದು ರಾಜ್ಯದ ಬಹುತೇಕ ಭಾಗಗಳು ಪಾರ್ಥೇನಿಯಂ ಮುಕ್ತವಾಗಿರುವುದು ಸರ್ವವೇದ್ಯ. ಆದರೂ ತಿಳಿವಳಿಕೆ ಇಲ್ಲದ ಕಾರಣ ಉಪಯೋಗಿ ಸಸ್ಯಗಳನ್ನು ಕಿತ್ತೊಗೆದು ಪಾರ್ಥೇನಿಯಂ ಕಳೆಗೆ ಹಾಸಿಗೆ ಹಾಸಿ ಸ್ವಾಗತಿಸುತ್ತಿರುವ ಇನ್ನೂ ಕೆಲವು ಪ್ರದೇಶಗಳಿವೆ. ಅವರಿಗೆ ಅರಿವು ಮೂಡಿಸುವ ಸಲುವಾಗಿ ಈ ಲೇಖನ.

**ಭೌತಿಕ ವಿಧಾನ**: ಈ ಕಳೆಯನ್ನು ಹೂ ಬಿಡುವ ಮೊದಲು ಬೇರು ಸಹಿತ ಕಿತ್ತುಹಾಕಬೇಕು. ಇದರ ಸೋಂಕಿನ ಸೂಕ್ಷ್ಮಗ್ರಾಹಿಗಳು ಕಳೆ ಕೀಳುವ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು. ಸಸ್ಯಗಳನ್ನು ಎಳೆಯ ವಯಸ್ಸಿನಲ್ಲಿ ಪದೇ ಪದೇ ಕಿತ್ತು ನಾಶಪಡಿಸುತ್ತಲೇ ಇರಬೇಕು. ಅಗಾಧ ಪ್ರಮಾಣದಲ್ಲಿ ಕಳೆಯು ಹರಡಿರುವಾಗ ಈ ವಿಧಾನ ಸೂಕ್ತವಲ್ಲ. ಕೃಷಿ ಬೆಳೆಗಳಲ್ಲಿ ಮೇಲಿಂದ ಮೇಲೆ ಅಂತರ ಬೇಸಾಯ ಕ್ರಮಗಳಿಂದ ಈ ಕಳೆಯನ್ನು ನಿರ್ವಹಿಸಬಹುದಾಗಿದೆ. ಬೀಳು ಬಿಟ್ಟಿರುವ ಕೃಷಿ ಭೂಮಿಯಲ್ಲಿ ಇದು ತನ್ನದೇ ಸಾಮ್ರಾಜ್ಯ ಸ್ಥಾಪಿಸುತ್ತದೆ. ಬೆಳೆ ಬೆಳೆಯಲು ಭೂಮಿಯನ್ನು ಹದಪಡಿಸಿದಾಗ ಇದು ವಿಶೇಷ ಖರ್ಚಿಲ್ಲದೆ ಹತೋಟಿಗೆ ಬರುತ್ತದೆ.

**ರಾಸಾಯನಿಕ ವಿಧಾನ**: ಈ ವಿಧಾನದಿಂದ ತಾತ್ಕಾಲಿಕ ಹತೋಟಿ ಮಾತ್ರ ಸಾಧ್ಯ. ಅಲ್ಲದೆ ಪರಿಸರ ಕೆಡುತ್ತದೆ. ಹೆಚ್ಚು ಖರ್ಚು ತಗಲುತ್ತದೆ ಎಂಬುದನ್ನು ಅರಿತು ಅತ್ಯವಶ್ಯವಿದ್ದಲ್ಲಿ ಮಾತ್ರ ಅನುಸರಿಸಬೇಕು.

**ಜೈವಿಕ ವಿಧಾನ**: ಸಜೀವಿಗಳ (ಕೀಟ, ರೋಗ ಹಾಗೂ ಅಪಾಯವಿಲ್ಲದ ಸಸ್ಯಗಳು) ಸಹಾಯದಿಂದ ಈ ಕಳೆಯನ್ನು ನಿಯಂತ್ರಿಸುವುದು ಮಿತವ್ಯಯಕಾರಿಯಾಗುವುದಲ್ಲದೆ ಪರಿಸರದ ಮೇಲೆ ಯಾವುದೇ ಅಹಿತಕರ ಪರಿಣಾಮ ಬೀರುವುದಿಲ್ಲ. ಜೈವಿಕ ವಿಧಾನದಲ್ಲಿ ಸಸ್ಯಶತ್ರುಗಳ ಬಳಕೆ ಅತಿ ಮುಖ್ಯವಾದುದು. ಸ್ವಾಭಾವಿಕವಾಗಿ ದೊರೆಯುವ ಜೈವಿಕ ವಿಶಾಲತೆಯನ್ನು ಕಾಪಾಡಿಕೊಂಡು, ಆಯ್ದ ಹಾಗೂ ಪರಿಣಾಮಕಾರಿ ಸಸ್ಯಜಾತಿಗಳನ್ನು ಬೆಳೆಸುವುದರಿಂದ ಪಾರ್ಥೇನಿಯಂ ಕಳೆಯನ್ನು ನಿಯಂತ್ರಿಸಬಹುದು. ಇವುಗಳಲ್ಲಿ ಪ್ರಭಾವಶಾಲಿಯಾದವುಗಳೆಂದರೆ ಕ್ರಮವಾಗಿ *ಕ್ಯಾಸಿಯಾ ಸೆರಿಸಿಯಾ* (ಕ್ಯಾಸೆ/ತಗಸೆ), *ಟೆಫ್ರೋಸಿಯಾಪರ್‍ಪ್ಯೂರಿಯಾ* (ಕಾಡು ಹುರುಳಿ), *ಸ್ಟೈಲೋಸ್ಯಾಂತಸ್ ಹೆಮ್ಯಾಟಾ* (ಸ್ಟೈಲೋ), *ಕ್ರೋಟಾನ್ ಸ್ಪಾರ್ಸಿಫ್ಲೋರಸ್* (ಸೀಮೆ ಎಣ್ಣೆ ಗಿಡ, ಕೋಳಿ ಕಾಲು ಗಿಡ), *ಸೀಡಾ ಸ್ಪೈನೋಸಾ* (ಪೊರಕೆ ಗಿಡ, ಸೀರೆ ಗಿಡ, ಕಾಡು ಮೆಂತೆ), *ಹೆಪ್ಟಿಸ್* (ನಾಯಿ/ಕಾಡು ತುಳಸಿ) *ಕ್ಯಾಸಿಯಾ ಟೋರಾ* (ಚಗಟೆ), *ಅಮರ್‍ಯಾಂತಸ್ ಸ್ಪೈನೋಸಸ್* (ಮುಳ್ಳು ದಂಟು, ಕಾಡುದಂಟು, ರಾಜಗಿರಿ); *ಮೈರಾಬಿಸ್ ಜಿಲಾಪ* (ಸಂಜೆ ಮಲ್ಲಿಗೆ) ಇತ್ಯಾದಿ.

ಈ ಸಸ್ಯಗಳನ್ನು ಬೆಳೆದಾಗ ಅವುಗಳಿಂದ

ಅಥವಾ ಅವುಗಳ ಅವಶೇಷದಿಂದ ಮಣ್ಣಿನಲ್ಲಿ ಸೇರುವ ರಸವಸ್ತುಗಳು (Allelo-chemicals) ಪಾರ್ಥೇನಿಯಂ ಬೀಜಗಳ ಮೊಳೆಯುವಿಕೆಗೆ ತಡೆಯೊಡ್ಡುವುವು. ಈ ಕ್ರಿಯೆಯಲ್ಲಿ ಕ್ಯಾಸೆ ಸಸ್ಯವು ಅತಿ ಚುರುಕು ಎಂದು ಕಂಡುಬಂದಿದೆ. ಮೇಲೆ ಹೆಸರಿಸಿರುವ ಸಸ್ಯಗಳು ನಾನಾ ರೀತಿಯಲ್ಲಿ ಅಂದರೆ ಮಣ್ಣಿನ ಹೊದಿಕೆಯಾಗಿ ಭೂ ಸವಳಿಕೆಯನ್ನು ತಡೆಯುವಲ್ಲಿ, ಹಸಿರು ಗೊಬ್ಬರ ರೂಪದಲ್ಲಿ ಉಪಯೋಗಕ್ಕೆ ಬರುತ್ತವೆ. ಇವುಗಳು ಪಾರ್ಥೇನಿಯಂ ಹೊರತಾಗಿ ಬೇರೆ ಜೀವಿಗಳ ಮೇಲೆ ಯಾವುದೇ ತರಹದ ಅಹಿತಕರ ಪರಿಣಾಮ ಬೀರುವುದಿಲ್ಲ. ಅಲ್ಲದೆ ಇವುಗಳಿಂದ ಇನ್ನು ಇತರೇ ತರಹದ (ಮೇವು, ಹಸಿರುಗೊಬ್ಬರ, ಬೀಜದಿಂದ ಮೇಣ ಉತ್ಪಾದನೆ, ದಿನಬಳಕೆಗಾಗಿ ಹೂವು, ಉರುವಲು, ಚಿಪ್ ಬೋರ್ಡ್ ತಯಾರಿಕೆ, ಮಣ್ಣು ಸವಕಳಿ ತಪ್ಪಿಸಲು ಭೂಮಿಯ ಮೇಲ್ಪದರದ ಬೆಳೆಯಾಗಿ, ಇತ್ಯಾದಿ) ಉಪಯೋಗಗಳನ್ನು ಪಡೆಯಬಹುದು. ಹೀಗೆ ಬಳಕೆಯಲ್ಲಿರುವುದನ್ನು ಇಗಾಗಲೇ ಗಮನಿಸಬಹುದಾಗಿದೆ. ಅಲ್ಲದೆ, ಈ ವಿಧಾನದಿಂದ ಈಗಾಗಲೇ ನೈಸರ್ಗಿಕವಾಗಿಯೇ ಲಕ್ಷಾಂತರ ಹೆಕ್ಟೇರು ಪ್ರದೇಶಗಳಲ್ಲಿ (ಕರ್ನಾಟಕ, ಮಹಾರಾಷ್ಟ್ರ, ಸ್ವಲ್ಪಮಟ್ಟಿಗೆ ಆಂಧ್ರಪ್ರದೇಶ, ತಮಿಳುನಾಡು ಮತ್ತು ಉತ್ತರ ಪ್ರದೇಶ) ಪರಿಣಾಮಕಾರಿಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಒಂದು ಉದಾಹರಣೆಯನ್ನು ಚಿತ್ರದಲ್ಲೂ ತೋರಿಸಲಾಗಿದೆ. ಇದೀಗ ಮೈಸೂರು (ನಂಜನಗೂಡು), ಚಾಮರಾಜನಗರ ಜಿಲ್ಲೆಗಳ ಕೆಲವು ಭಾಗಗಳಲ್ಲಿ , ಮಂಡ್ಯ ಜಿಲ್ಲೆಯ ಮದ್ದೂರು, ಮಳವಳ್ಳಿ, ಬ್ಲಫ್, ಗಗನ ಚುಕ್ಕಿ–ಭರಚುಕ್ಕಿ ಮತ್ತು ಅಕ್ಕ ಪಕ್ಕದ ಪ್ರದೇಶಗಳಲ್ಲಿ ಹಾಗೂ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಬಹುಭಾಗ ಈ ತಾಂತ್ರಿಕತೆ, ಸ್ವಾಭಾವಿಕವಾಗಿ ಹಾಗೂ ಜನರ, ಸರ್ಕಾರದ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವದ ಪ್ರಯತ್ನದಿಂದ ಪಾರ್ಥೇನಿಯಂ ಹತೋಟಿಗೆ ಬಂದಿರುವುದು ಆಶಾದಾಯಕ ವೆನಿಸಿದೆ. ಈ ಪ್ರಯತ್ನ ಮತ್ತು ಪರಿಣಾಮ ಇತರೇ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿರುವುದು ಸಂತೋಷದ ಸಂಗತಿ.

**ಸಮಗ್ರ ಕಳೆ ನಿರ್ವಹಣೆ**

ಭೌತಿಕ, ರಾಸಾಯನಿಕ ಹಾಗೂ ಜೈವಿಕ ವಿಧಾನಗಳನ್ನು ಏಕಕಾಲಕ್ಕೆ ಒಂದಕ್ಕೊಂದನ್ನು ಪೂರಕವಾಗಿ ಅನುಸರಿಸುವುದರಿಂದ ಈ ಕಳೆಯ ನಿರ್ವಹಣೆ ಸಾಧ್ಯ. ಈ ವಿಧಾನ ನಿಸರ್ಗದ ವಿಧಾನವಾದುದರಿಂದ ಯಾವ ತರಹದ ಹಾನಿಯೂ ಎದುರಾಗದು. ಪಾರ್ಥೇನಿಯಂ ಕಳೆಯ ಸಮಗ್ರ ನಿರ್ವಹಣೆಯನ್ನು ಈ ಕೆಳಕಂಡ ಕ್ರಮದಲ್ಲಿ ಮಾಡಬಹುದು. ಸ್ವಾಭಾವಿಕ ಜೈವಿಕ ವಿಶಾಲತೆ ಕ್ಷೀಣಿಸದಂತೆ ಎಲ್ಲಾ ಪ್ರದೇಶಗಳನ್ನು ಕಾಪಾಡಿಕೊಳ್ಳುವುದು. ಪಾರ್ಥೇನಿಯಂ ಕಳೆ ಇರುವ ಪ್ರದೇಶಗಳಲ್ಲಿ ಮಳೆಗಾಲ ಪ್ರಾರಂಭವಾದೊಡನೆಯೇ ಕ್ಯಾಸಿಯಾ ಅಥವಾ ಅದೇ ತರಹದ ಸ್ವಾಭಾವಿಕವಾಗಿ ದೊರೆಯುವ (ಜೈವಿಕ ವಿಧಾನದಲ್ಲಿ ಸೂಚಿಸಿರುವ ಇತರ ಸಸ್ಯಗಳು) ಸಸ್ಯಗಳ ಬೀಜವನ್ನು ಬಿತ್ತನೆ ಮಾಡುವುದು, ಇಂತಹ ಪ್ರದೇಶಗಳಲ್ಲಿ ಬೆಳೆಯುವ ಪಾರ್ಥೇನಿಯಂ ಕಳೆಯನ್ನು ಮೊದಲ ಒಂದೆರಡು ವರ್ಷ ಕೈಯಿಂದ ಕಿತ್ತು ಶತ್ರುಸಸ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು. ಮೇಲ್ಕಂಡ ವಿಧಾನಗಳನ್ನು ಅನುಸರಿಸಲಾಗದಂತಹ ಸನ್ನಿವೇಶಗಳಲ್ಲಿ ಭೌತಿಕ ವಿಧಾನವನ್ನು ಸಹ ಅನುಸರಿಸಬೇಕು. ಹೆಚ್ಚು ವಿಸ್ತಾರವಾಗಿ ಪಾರ್ಥೇನಿಯಂ ಆಕ್ರಮಿಸಿಕೊಂಡ ಸ್ಥಳಗಳಲ್ಲಿ ಹಾಗೂ ತತ್‌ಕ್ಷಣದ ಅಥವಾ ತಾತ್ಕಾಲಿಕ ಹತೋಟಿ ಅವಶ್ಯವೆನಿಸಿದಲ್ಲಿ ಕೊನೆಯ ಅಸ್ತ್ರವಾಗಿ ರಾಸಾಯನಿಕ ವಿಧಾನಗಳನ್ನು ಬಳಸಬೇಕು.

ಮಳೆಗಾಲ ಪ್ರಾರಂಭವಾಗುವ ಸಮಯದಲ್ಲಿ ಈ ಕಳೆಯ ನಿಯಂತ್ರಣದ ಕ್ರಮಗಳನ್ನು ಕೈಗೊಳ್ಳಬೇಕು. ಪಾರ್ಥೇನಿಯಂ ಬೆಳೆಯುವ ಪ್ರದೇಶಗಳಲ್ಲಿ ಕ್ಯಾಸಿಯ ಮತ್ತು ಇತರೆ ಶತ್ರುಸಸ್ಯಗಳ ಬೀಜಗಳನ್ನು ಮಳೆ ಬೀಳುವ ಮುಂಚೆ ಅಥವಾ ತೇವಾಂಶವಿರುವಾಗ ಬಿತ್ತನೆ ಮಾಡಬೇಕು. ಇಂತಹ ಬೀಜಗಳನ್ನು ಬಿತ್ತುವುದಕ್ಕೆ ಮುನ್ನ ಸುಪ್ತಾವಸ್ಥೆಯನ್ನು ಹೋಗಲಾಡಿಸಲು ಬೀಜೋಪಚಾರ ಅವಶ್ಯಕ. ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ ಒಣಗಿರುವ ಕ್ಯಾಸಿಯ ಕಾಯಿಗಳನ್ನು ಗಿಡಗಳಿಂದ ಅಥವಾ ಗಿಡದ ಬುಡಗಳಲ್ಲಿ ಉದುರಿರುವ ಸ್ಥಳಗಳಿಂದ ಸಂಗ್ರಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಸಕ್ತಿಯುಳ್ಳವರು ಕೃಷಿ ವಿಶ್ವವಿದ್ಯಾಲಯಗಳು ಅಥವಾ ಕೃಷಿ ವಿಜ್ಞಾನಿಗಳೂಡನೆ ಸಂಪರ್ಕ ಸಾಧಿಸಬಹುದು.

**ಪಾರ್ಥೇನಿಯಂ ಕಳೆಯ ಉಪಯೋಗ**

ಈ ಕಳೆಯಿಂದ ಪ್ರಯೋಜನ ಪಡೆಯುವ ಮಾರ್ಗಗಳೂ ಇವೆ. ಈ ಸಸ್ಯದಲ್ಲಿ ಕ್ಯಾನ್ಸರ್ ಹತೋಟಿಯಲ್ಲಿಡಬಹುದಾದ ರಾಸಾಯನಿಕಗಳಿವೆ ಎಂದು ತಿಳಿದುಬಂದಿದೆ. ಕೀಟನಾಶಕಗಳನ್ನು ತಯಾರಿಸುವುದರಲ್ಲೂ ಇದು ಪ್ರಯೋಜನಕಾರಿ ಎಂದು ತಿಳಿದುಬಂದಿದೆ. ಈ ಸಸ್ಯದ ರಸವನ್ನು ಬಳಸಿ ರೇಷ್ಮೆ ಹುಳುಗಳ ಗಾತ್ರವನ್ನು ಹೆಚ್ಚಿಸಿ ಹೆಚ್ಚು ಗೂಡು ಉತ್ಪಾದನೆಯಾಗುವಂತೆ ಮಾಡಬಹುದೆಂದು ತಿಳಿದುಬಂದಿದೆ. ಈ ಕಳೆಯಲ್ಲಿ ಎಲ್ಲಾ ತರಹದ ಅಹಿತಕರ ಹವಾಗುಣಗಳನ್ನು ಸಹಿಸಿಕೊಳ್ಳಬಲ್ಲ ವಂಶವಾಹಿಗಳಿರುವುದರಿಂದ, ಬೆಳೆಗಳ ಉತ್ಪಾದಕತೆ ಹೆಚ್ಚಿಸಲು, ಅಂದರೆ ಅವುಗಳಲ್ಲಿ ಅಂತಹ ಗುಣಗಳನ್ನು ಸೇರ್ಪಡೆ ಮಾಡಲು ಸಂಶೋಧನೆಗೆ ನೆರವಾಗುವ ಸಾಧ್ಯತೆ ಇರುವುದನ್ನು ಇಲ್ಲಿ ಗಮನಿಸಬಹುದು.



ಪಾರ್ಥೇನಿಯಂನ ಬಲವಾದ ಶತ್ರುಸಸ್ಯ ಕ್ಯಾಸಿಯ (ತಗಸೆ)

# ಸುಸ್ಥಿರ ಕೃಷಿ ಅಭಿವೃದ್ಧಿ ಮತ್ತು ಕೃಷಿ ಉದ್ದಿಮೆಗೆ ಪೂರಕವಾದ ಬಜೆಟ್ /ಆಯವ್ಯಯ

ಪ್ರೊ॥ ಶಿವಾನಂದ ಬಿ. ಹೊಸಮನಿ, ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ.



ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ವ್ಯವಸಾಯವು ಪ್ರಧಾನ ಕ್ಷೇತ್ರವೆನಿಸಿಕೊಂಡಿದೆ. ಆದರೆ, ಈ ಕ್ಷೇತ್ರದಿಂದ ರಾಷ್ಟ್ರಾದಾಯಕ್ಕೆ ಲಭ್ಯವಾಗುತ್ತಿರುವ ಕೊಡುಗೆಯು ಶೇ.15ರಷ್ಟಿದ್ದು ಅಲ್ಪ ಪಾಲೆನಿಸಿದೆ. ಕೃಷಿಯು ಬಹುಸಂಖ್ಯಾತರ ಜೀವನೋಪಾಯವಾಗಿರುವುದರಿಂದ ಭಾರತೀಯರ ಬೆನ್ನೆಲುಬಾಗಿರುವುದರ ಜೊತೆಗೆ ಅಸಂಖ್ಯಾತರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳು ಉದ್ಯೋಗವನ್ನು ಒದಗಿಸಿಕೊಟ್ಟಿವೆ. ಕೃಷಿಯ ಸಮೃದ್ಧಿಯು ದೇಶದ ಸಮೃದ್ಧಿ ಎನ್ನುವ ಮಟ್ಟಿಗೆ ತನ್ನ ಪ್ರಭಾವವನ್ನು ಬೀರುತ್ತಿರುವುದರಿಂದ ಕೃಷಿಯ ಅಭಿವೃದ್ಧಿಯು ಅತ್ಯವಶ್ಯಕವಾಗಿದೆ.

ಈ ಆಧುನಿಕ ಜಗತ್ತಿನಲ್ಲಿ ಕೃಷಿಯಲ್ಲಾಗುತ್ತಿರುವ ಏರುಪೇರುಗಳು ಹಾಗೂ ಬದಲಾವಣೆಗಳು, ಇದರ ಜೊತೆಗೆ ಜಾಗತಿಕ ಮಟ್ಟದ ಸ್ಪರ್ಧೆ, ಪರಿಸರದಲ್ಲಿನ ವೈಪರಿತ್ಯಗಳಿಂದ ಕೃಷಿಯನ್ನು ಅವಲಂಬಿಸುವಿಕೆಯ ಪ್ರಮಾಣವು ದಿನೇ ದಿನೇ ಕುಗ್ಗುತ್ತಿದೆ ಮತ್ತು ಕೃಷಿ ವಸ್ತುಗಳ ಬೆಲೆಯಲ್ಲಾಗುತ್ತಿರುವ ವ್ಯತ್ಯಾಸದಿಂದಾಗಿ ಕೃಷಿಯು ಲಾಭದಾಯಕವಲ್ಲವೆಂಬ ಅಭಿಪ್ರಾಯ ಜನರ ಮನದಲ್ಲಿ ಆತಂಕವನ್ನು ಸೃಷ್ಟಿಸುತ್ತಿದೆ. ಈ ಆತಂಕದಿಂದಾಗಿಯೇ ಆತ್ಮಹತ್ಯೆಯಂತಹ ಪ್ರಕರಣಗಳು ಮರುಕಳಿಸುತ್ತಿವೆ. ಇದಕ್ಕಾಗಿ ಪ್ರಸ್ತುತ ಕೃಷಿಯ ಸುಸ್ಥಿರ ಅಭಿವೃದ್ಧಿಗೆ ಸರ್ಕಾರದ ಪ್ರೋತ್ಸಾಹ, ನೆರವು ಅತ್ಯಗತ್ಯವಾಗಿದೆ. ರೈತರಲ್ಲಿ ಆತ್ಮವಿಶ್ವಾಸ ಹಾಗೂ ಧೈರ್ಯ ಸ್ಥೈರ್ಯಗಳನ್ನು ತುಂಬುವಂತಹ ಕಾರ್ಯಕ್ರಮಗಳ, ನೆರವುಗಳ ಅವಶ್ಯಕತೆಯಿರುತ್ತದೆ. ಸರ್ಕಾರಗಳು ರೈತರ ಕಲ್ಯಾಣವನ್ನು ಕಾಪಾಡುವುದರೊಂದಿಗೆ ವ್ಯವಸಾಯದ ಸುಸ್ಥಿರ ಅಭಿವೃದ್ಧಿಗೆ ಸಹಾಯ ಹಸ್ತವನ್ನು ಚಾಚುವಂತಹ ಕಾರ್ಯಗಳನ್ನು ಆಗಾಗ್ಗೆ ಆಯವ್ಯಯದ (ಬಜೆಟ್) ಮೂಲಕ ಹಾಗೂ ಹತ್ತು ಹಲವಾರು ಕಾರ್ಯಕ್ರಮಗಳ ಮೂಲಕ ಕೈಗೊಳ್ಳುತ್ತಿವೆ. ಇಂತಹ ಮೊತ್ತೊಂದು ದಿಟ್ಟ ಹೆಜ್ಜೆಯತ್ತ ಪ್ರಸ್ತುತ 2018–19ನೇ ಸಾಲಿನ ಆಯವ್ಯಯದಲ್ಲಿ ಕೇಂದ್ರ ಸರ್ಕಾರವು ಅಡಿಯಿಟ್ಟಿರುವುದು ಗಮನಾರ್ಹವಾದುದಾಗಿದೆ.

ರೈತರ ಆದಾಯವನ್ನು 2022ರ ವೇಳೆಗೆ ದುಪ್ಪಟ್ಟು ಮಾಡುವುದು 2018–19ನೇ ಸಾಲಿನ ಕೇಂದ್ರದ ಆಯವ್ಯಯದ ಪ್ರಮುಖ ಧ್ಯೇಯವಾಗಿದೆ. 2022ರ ವೇಳೆಗೆ ಭಾರತವು ಸ್ವಾತಂತ್ರ್ಯಗಳಿಸಿ 75 ವರ್ಷ ಪೂರೈಸುತ್ತಿರುವ ಸುಸಂದರ್ಭದಲ್ಲಿ ಎಲ್ಲಾ ಕೃಷಿಕರ ಆದಾಯ ಇಮ್ಮಡಿಯಾಗಬೇಕೆಂಬ ಮಹಾತ್ವಾಕಾಂಕ್ಷೆಯು ಕೇಂದ್ರ ಸರ್ಕಾರದ ಸದಾಶಯವಾಗಿದೆ. ಇದಕ್ಕಾಗಿ 2018–19ನೇ ಸಾಲಿನಲ್ಲಿ ರೂ.58,090 ಕೋಟಿಯಷ್ಟನ್ನು (2017–18ರಲ್ಲಿ ರೂ.51,576 ಕೋಟಿ ಮೀಸಲಿಡಲಾಗಿತ್ತು) ಮೀಸಲಿರಿಸಿ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರವು ಬೆಲೆ ಕುಸಿತ ಹಾಗೂ ಪ್ರಕೃತಿಯ ವಿಕೋಪಗಳಿಂದ ಜರ್ಜರಿತವಾಗಿರುವ ರೈತನ ಬಾಳನ್ನು ಬೆಳಗಲು ಹಾಗೂ ಕೃಷಿಯನ್ನು ಲಾಭದಾಯಕ ಉದ್ಯಮವನ್ನಾಗಿ ಬದಲಾಯಿಸುವ ನಿಟ್ಟಿನಲ್ಲಿ 2018–19ನೇ ಸಾಲಿನ ಆಯವ್ಯಯದಲ್ಲಿ ಕೃಷಿಗೆ ಉತ್ತೇಜನ ನೀಡುವಂತಹ ಹಲವಾರು ಉತ್ತಮ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಕಾರ್ಯಕ್ರಮಗಳನ್ನು ಕೆಳಕಂಡಂತೆ ವಿಶ್ಲೇಷಿಸಬಹುದಾಗಿದೆ:

### ಕೃಷಿ ಉದ್ದಿಮೆ

ದೇಶದಲ್ಲಿನ ಕೃಷಿ ನೀತಿ ಹಾಗೂ ಕಾರ್ಯಕ್ರಮಗಳು ಉತ್ಪಾದನಾ ಕೇಂದ್ರೀಕೃತವಾಗಿರುವುದರಿಂದ ರೈತರ ಹಿತರಕ್ಷಣೆ ಕಷ್ಟಕರವಾಗಿದೆ. ಬದಲಾಗಿ ಮಾರುಕಟ್ಟೆಯಾರಿತ ಕೃಷಿ ಉದ್ದಿಮೆಯನ್ನಾಗಿ ಪರಿವರ್ತಿಸುವುದರಿಂದ ರೈತರ ಆದಾಯವನ್ನು ದ್ವಿಗುಣಗೊಳಿಸಬಹುದು. ಹಾಗೆಯೇ ಆಧುನಿಕ ಕೃಷಿ ಪದ್ಧತಿ ಮತ್ತು ಮಾರಾಟ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದರಿಂದ ಇರುವ ಜಮೀನಿನಲ್ಲೇ ಕಡಿಮೆ ವೆಚ್ಚದಲ್ಲಿ ಹೆಚ್ಚು ಬೆಳೆ ತೆಗೆದು ಲಾಭಗಳಿಸಬಹುದಾಗಿದೆ. ಇಂತಹ ಪೂರಕ ವಾತಾವರಣವನ್ನು ಸೃಷ್ಟಿಸುವಂತಹ ಪ್ರಯತ್ನವನ್ನು ಪ್ರಸ್ತುತ ಆಯವ್ಯಯದಲ್ಲಿ ಕಾಣಬಹುದಾಗಿದೆ.

### ಆಪರೇಷನ್ ಗ್ರೀನ್

ಟೊಮೆಟೋ, ಈರುಳ್ಳಿ, ಆಲೂಗಡ್ಡೆ ಹಾಗೂ ಇನ್ನಿತರ ತರಕಾರಿಗಳ ಬೆಲೆಯು ತುಂಬ ಏರಿಳಿತಕ್ಕೊಳಗಾಗುತ್ತಿರುವುದರಿಂದ ರೈತರಿಗೆ ನಿರೀಕ್ಷಿತ ಲಾಭ ಲಭ್ಯವಾಗುತ್ತಿಲ್ಲ. ಆದ್ದರಿಂದ 70ರ ದಶಕದಲ್ಲಿ ಅಳವಡಿಸಿಕೊಂಡ ಆಪರೇಷನ್ ಫ್ಲಡ್ ಕ್ಷೀರಕ್ರಾಂತಿ ಮಾದರಿಯ ಆಪರೇಷನ ಗ್ರೀನ್ ಯೋಜನೆಯನ್ನು ಜಾರಿ ತರಲು ಕೇಂದ್ರ ಸರ್ಕಾರವು





ಮುಂದಾಗಿದೆ. ಇದಕ್ಕಾಗಿ ರೂ.500 ಕೋಟಿ ಹಣವನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ.

ತರಕಾರಿಗಳು ವರ್ಷವಿಡಿ ಜನಸಾಮಾನ್ಯರಿಗೆ ಅಗತ್ಯವಿರುವ ವಸ್ತುವಾಗಿದ್ದರೂ ಋತು ಹಾಗೂ ಪ್ರಾದೇಶಿಕ ಉತ್ಪಾದನೆ ಮೇಲೆ ಅವಲಂಬಿತವಾಗಿರುವ, ಬೇಗ ಹಾಳಾಗುವ ಈ ಪದಾರ್ಥಗಳಿಂದ ರೈತರು ಹಾಗೂ ಬಳಕೆದಾರರು ಇಬ್ಬರಲ್ಲೂ ತೃಪ್ತಿ ಮೂಡಿಸುವುದು ಸವಾಲು. ಇದಕ್ಕಾಗಿ 'ಆಪರೇಷನ್ ಫ್ಲಡ್' ಮಾದರಿಯಲ್ಲಿ 'ಆಪರೇಷನ್ ಗ್ರೀನ್' ಆರಂಭಿಸಲಾಗುತ್ತಿದೆ. ಈ ರೀತಿಯ ಪ್ರಯತ್ನದಿಂದ ರೈತ ಉತ್ಪಾದಕ ಸಂಘಟನೆಗಳು, ಕೃಷಿ ಸಾಗಣೆ ವ್ಯವಸ್ಥೆ, ಸಂಸ್ಕರಣೆ ಸೌಕರ್ಯ ಹಾಗೂ ವೃತ್ತಿಪರ ನಿರ್ವಹಣೆಯನ್ನು ಪ್ರೋತ್ಸಾಹಿಸಬಹುದು.

**ಪ್ರಧಾನಮಂತ್ರಿ ಕೃಷಿ ಸಂಪದ**

ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಆಹಾರ ಸಂಸ್ಕರಣಾ ಕ್ಷೇತ್ರವು ಪ್ರವರ್ಧಮಾನಕ್ಕೆ ಬರುತ್ತಿದ್ದು ವಾರ್ಷಿಕ ಶೇ.8ರ ದರದಲ್ಲಿ ಪ್ರಗತಿ ಹೊಂದುತ್ತಿರುವ ಸಂದರ್ಭದಲ್ಲಿ, ಈ ಕ್ಷೇತ್ರದಲ್ಲಿ ಹೂಡಿಕೆಯನ್ನು ಉತ್ತೇಜಿಸುವ ಸಲುವಾಗಿ ಪ್ರಧಾನಮಂತ್ರಿ ಸಂಪದ ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. 2017-18ನೇ ಸಾಲಿನಲ್ಲಿ ಆಹಾರ ಸಂಸ್ಕರಣಾ ಸಚಿವಾಲಯಕ್ಕೆ ರೂ.715 ಕೋಟಿ ಹಣವನ್ನು ಮೀಸಲಿಡಲಾಗಿತ್ತು. 2018-19ನೇ ಸಾಲಿನಲ್ಲಿ ರೂ.1400 ಕೋಟಿ ಗಳಷ್ಟಕ್ಕೆ ಏರಿಸಿ ದ್ವಿಗುಣಗೊಳಿಸಲಾಗಿದೆ. ಜೊತೆಯಲ್ಲಿ ವಿಶೇಷ ಕೃಷಿ ಸಂಸ್ಕರಣೆ ಹಣಕಾಸು ಸಂಸ್ಥೆಗಳು ಸ್ಥಾಪನೆಗೆ ಸರ್ಕಾರ ಒತ್ತುಕೊಡಲು ನಿರ್ಧರಿಸಿದೆ.

**ಫುಡ್ ಪಾರ್ಕ್**

ಭಾರತದಲ್ಲಿ ರೂ.6 ಲಕ್ಷ ಕೋಟಿಗಳಷ್ಟು ಕೃಷಿ ಉತ್ಪನ್ನಗಳನ್ನು ರಫ್ತು ಮಾಡುವ ಸಾಮರ್ಥ್ಯ ಭಾರತಕ್ಕಿದೆ. ಆದರೆ ಸದ್ಯ ರೂ.2 ಲಕ್ಷಗಳಷ್ಟು ಕೃಷಿ ಪದಾರ್ಥಗಳನ್ನಷ್ಟೇ ರಫ್ತು ಮಾಡಲಾಗುತ್ತಿದೆ. ನೈಜ ಸಾಮರ್ಥ್ಯಗಳಿಸಿಕೊಳ್ಳಲು ದೇಶದ 42 ಮೆಗಾ ಫುಡ್ ಪಾರ್ಕ್‌ಗಳಲ್ಲಿ ಅತ್ಯಾಧುನಿಕ ಪರೀಕ್ಷಾ ಘಟಕಗಳನ್ನು ಸ್ಥಾಪಿಸಲಾಗುತ್ತದೆ.

**ಗ್ರಾಮೀಣ ಕೃಷಿ ಮಾರುಕಟ್ಟೆ (ಗ್ರಾಮ್ಸ್)**

ದೇಶದಲ್ಲಿರುವ ಶೇ.86ರಷ್ಟು ರೈತರು ಸಣ್ಣ ಹಾಗೂ ಅತಿ ಸಣ್ಣ ಕೃಷಿಕರಾಗಿದ್ದಾರೆ. ಎ.ಪಿ.ಎಂ.ಸಿ.ಗಳು ಹಾಗೂ ಇತರ ಸಗಟು ಮಾರುಕಟ್ಟೆಗಳಲ್ಲಿ ನೇರವಾಗಿ ವ್ಯಾಪಾರ ವಹಿವಾಟು ಮಾಡಲು ಸಾಧ್ಯವಾಗುವುದಿಲ್ಲ. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ನೇರ ವಹಿವಾಟು ನಡೆಸುವುದರಿಂದ ವಂಚಿತವಾಗಿರುವ ಸಣ್ಣ ಮತ್ತು ಅತಿಸಣ್ಣ ರೈತರ ಅನುಕೂಲಕ್ಕಾಗಿ ಹಳ್ಳಿಗಳಲ್ಲಿ ನಡೆಯುವ 22,000 ಸಂತೆಗಳನ್ನು ಗ್ರಾಮೀಣ ಕೃಷಿ ಮಾರುಕಟ್ಟೆ (ಗ್ರಾಮ್ಸ್) ಗಳನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಹಾತ್ಮಾ ಗಾಂಧೀ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹಾಗೂ ಇನ್ನಿತರ ಸರ್ಕಾರಿ ಯೋಜನೆಗಳನ್ನು ಬಳಸಿಕೊಂಡು ಈ ಮಾರುಕಟ್ಟೆಗಳಲ್ಲಿ ಭೌತಿಕ ಮೂಲ ಸೌಕರ್ಯವನ್ನು ಬಲಪಡಿಸಲಾಗುತ್ತದೆ.

'ಗ್ರಾಮ್ಸ್' ಮಾರುಕಟ್ಟೆಗಳನ್ನು ಇ-ನ್ಯಾಮ್ (ಎಲೆಕ್ಟ್ರಾನಿಕ್ ನ್ಯಾಷನಲ್ ಮಾರ್ಕೆಟ್) ಜತೆ ಜೋಡಿಸಲಾಗುತ್ತದೆ. ಹಾಗೆಯೇ ಎ.ಪಿ.ಎಂ.ಸಿ. ನಿಯಂತ್ರಣಗಳಿಂದ ಮುಕ್ತಗೊಳಿಸಲಾಗುತ್ತದೆ. ಗ್ರಾಹಕರು ಮತ್ತು ಸಗಟು ಖರೀದಿದಾರರಿಗೆ ತಮ್ಮ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡುವ ಅವಕಾಶಗಳನ್ನು ಗ್ರಾಮ್ಸ್‌ಗಳಲ್ಲಿ ರೈತರಿಗೆ ಒದಗಿಸುತ್ತದೆ. ಈ 22,000 ಗ್ರಾಮೀಣ ಮಾರುಕಟ್ಟೆಗಳು ಹಾಗೂ 585 ಎ.ಪಿ.ಎಂ.ಸಿ.ಗಳಲ್ಲಿ ಕೃಷಿ ಮಾರುಕಟ್ಟೆ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಮೇಲ್ದರ್ಜೆಗೇರಿಸಲು ರೂ.22,000 ಕೋಟಿಯ 'ಕೃಷಿ ಮಾರುಕಟ್ಟೆ ಮೂಲ ಸೌಕರ್ಯ ನಿಧಿ'ಯನ್ನು ಸ್ಥಾಪಿಸಲಾಗುತ್ತದೆ. ಹಾಗೆಯೇ 'ಇ-ನ್ಯಾಮ್' ಸೌಲಭ್ಯವನ್ನು ಬಲಪಡಿಸಿ 585 ಎ.ಪಿ.ಎಂ.ಸಿ.ಗಳಿಗೆ ವಿಸ್ತರಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಈಗಾಗಲೇ 470 ಎ.ಪಿ.ಎಂ.ಸಿ.ಗಳು ಇ-ನ್ಯಾಮ್ ಜಾಲಕ್ಕೆ ಸೇರ್ಪಡೆಗೊಂಡಿವೆ. ಉಳಿದವುಗಳನ್ನು ಮಾರ್ಚ್ 2018 ರೊಳಗೆ ಜೋಡಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

**ಕನಿಷ್ಠ ಬೆಂಬಲ ಬೆಲೆ (ಎಂ.ಎಸ್.ಪಿ)**

ಬೆಲೆ ಕುಸಿತದಿಂದ ಕಂಗಲಾಗಿ ಆತ್ಮಹತ್ಯೆಯ ಹಾದಿ ತುಳಿಯುತ್ತಿರುವ ಕೃಷಿಕರಲ್ಲಿ ವಿಶ್ವಾಸ ಮೂಡಿಸಲು ಕನಿಷ್ಠ ಬೆಂಬಲ ಬೆಲೆ ನಿಗದಿಯಲ್ಲಿ ಬಹುದೊಡ್ಡ ಸುಧಾರಣೆ ತರುವಂತಹ ಮಹತ್ವದ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇದರ ಫಲವಾಗಿ, ಬೆಳೆ ಬೆಳೆಯಲು ತಗಲುವ ವೆಚ್ಚದ ಒಂದೂವರೆ ಪಟ್ಟನಷ್ಟು ಬೆಂಬಲ ಬೆಲೆ ರೈತರಿಗೆ ಸಿಗಲಿದೆ. ಈಗಾಗಲೇ ಬಹುತೇಕ ಹಿಂಗಾರು ಬೆಳೆಗಳಿಗೆ ಒಂದೂವರೆ ಪಟ್ಟನಷ್ಟು ಬೆಂಬಲ ಬೆಲೆ ನಿಗದಿ ಮಾಡಲಾಗಿದೆ. ಇದನ್ನು ಎಲ್ಲಾ ಪ್ರಕಟಿತ ಬೆಳೆಗಳಿಗೂ ಮುಂಗಾರು ಹಂಗಾಮಿನಲ್ಲಿ ವಿಸ್ತರಿಸಲಾಗುತ್ತದೆ. ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

**ರಾಷ್ಟ್ರೀಯ ಬಿದಿರು ಮಿಷನ್ (ಹಸಿರು ಚಿನ್ನ)**

ಬಿದಿರನ್ನು 'ಹಸಿರು ಚಿನ್ನ' ಎಂದು ಪರಿಗಣಿಸಿರುವ ಸರ್ಕಾರ ಇದರ ಉತ್ತೇಜನಕ್ಕೆ ಬಜೆಟ್‌ನಲ್ಲಿ ರೂ.1290 ಕೋಟಿಗಳನ್ನು ಮೀಸಲಿರಿಸಿದೆ. ಅಲ್ಲದೆ ರಾಷ್ಟ್ರೀಯ ಬಿದಿರು ಮಿಷನ್ನನ್ನು ಮರು ರಚನೆ ಮಾಡಿದೆ. ಇತ್ತೀಚೆಗಷ್ಟೇ ಅರಣ್ಯ ಪ್ರದೇಶದಿಂದ ಹೊರಗೆ ಬೆಳೆಯುವ ಬಿದಿರನ್ನು ಮರದ ವ್ಯಾಖ್ಯಾನದಿಂದ ಹೊರಗಿಟ್ಟು ಕಾನೂನು ತಿದ್ದುಪಡಿ ಮಾಡಲಾಗಿತ್ತು.

**ಕೃಷಿ ಸಾಲಕ್ಕೆ ರೂ.11 ಲಕ್ಷ ಕೋಟಿ ಮೀಸಲು**

ನಿರೀಕ್ಷೆಯಂತೆಯೇ ಕೃಷಿ ಸಾಲಕ್ಕಾಗಿ ಪ್ರಸ್ತುತ ಸಾಲಿನಲ್ಲಿ ಕಳೆದ ವರ್ಷಕ್ಕಿಂತ ಒಂದು ಲಕ್ಷ ಕೋಟಿ ರೂಪಾಯಿ ಹೆಚ್ಚುವರಿ ಹಣವನ್ನು ಮೀಸಲಿಡಲಾಗಿದೆ. 2017-18ರಲ್ಲಿ ರೂ.10 ಲಕ್ಷ


ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿತ್ತು. ಈ ಬಾರಿ ರೂ.11 ಲಕ್ಷ ಕೋಟಿ ರೂಪಾಯಿಗೆ ಹೆಚ್ಚಿಸಲಾಗಿದೆ. ಇದರಿಂದಾಗಿ ರೈತರ ಹಣಕಾಸು ಸಮಸ್ಯೆಯನ್ನು ಅಲ್ಪಮಟ್ಟಿಗಾದರೂ ಪರಿಹರಿಸಬಹುದಾಗಿದೆ.

**ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ:** ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹರ್ ಖೇತ್ ಕೋ ಪಾನಿ) ಯಡಿಯಲ್ಲಿ 96 ಜಿಲ್ಲೆಗಳಲ್ಲಿ ನೀರಾವರಿಗಾಗಿ ರೂ.2600 ಕೋಟಿಗಳಷ್ಟು ಮೀಸಲಿಡಲಾಗಿದೆ. ಶೇ.30ಕ್ಕಿಂತ ಕಡಿಮೆ ಪ್ರಮಾಣದ ಭೂಮಿಗೆ ನೀರಾವರಿ ಸೌಲಭ್ಯವನ್ನು ಈ ಜಿಲ್ಲೆಗಳು ಹೊಂದಿದ್ದು, ನೀರಾವರಿಗೆ ಬಳಸಿಕೊಳ್ಳಲಾಗುತ್ತದೆ. ಇದೊಂದು ಅಂತರಜಲ ನೀರಾವರಿ ಯೋಜನೆಯಾಗಿದ್ದು, ನೀರಾವರಿ ಸೌಲಭ್ಯ ವಂಚಿತ ಜಮೀನಿಗಷ್ಟೇ ಖಚಿತ ನೀರಾವರಿ ಸೌಲಭ್ಯವನ್ನು ಅನುಷ್ಠಾನಕ್ಕೆ ತರಲಾಗುತ್ತದೆ.

**ತೋಟಗಾರಿಕೆಗೆ ಕ್ಲಷ್ಟರ್ ನಿರ್ಮಾಣ:** ಉದ್ಯಮ ವಲಯದ ಕ್ಲಸ್ಟರ್ ವಿಧಾನವನ್ನೇ ತೋಟಗಾರಿಕೆಗೂ ಅಳವಡಿಸಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ತೋಟಗಾರಿಕೆ ಬೆಳೆಯ ಉತ್ಪನ್ನಗಳಿಗಾಗಿ ಕ್ಲಸ್ಟರಗಳನ್ನು ನಿರ್ಮಿಸಲಾಗುತ್ತದೆ. ವೈಜ್ಞಾನಿಕ ವಿಶ್ಲೇಷಣೆ ಆಧರಿಸಿ ಈ ವಲಯಗಳನ್ನು ರೂಪಿಸಿ, ಆ ಜಿಲ್ಲೆಯಲ್ಲಿ ನಿರ್ದಿಷ್ಟ ಬೆಳೆಗಳಿಗೆ ಹೆಚ್ಚು ಪ್ರಾಧ್ಯಾನ್ಯತೆಯನ್ನು ನೀಡಲಾಗುವುದು. ಈಗಾಗಲೇ ಕೃಷಿ ಮತ್ತು ಕೃಷಿಕರ ಕಲ್ಯಾಣ ಸಚಿವಾಲಯ ಹೊಂದಿರುವ ಯೋಜನೆಗಳನ್ನು ಇದಕ್ಕಾಗಿ ಮರು ರೂಪಿಸಲಾಗುತ್ತಿದೆ. ಮತ್ತು ಆಹಾರ ಸಂಸ್ಕರಣೆ ವಾಣಿಜ್ಯ ಹಾಗೂ ಇತರ ಸಚಿವಾಲಯಗಳ ಸಹಭಾಗಿತ್ವದ ಸಹಕಾರದಲ್ಲಿ ಕ್ಲಸ್ಟರ್ ರೂಪಿಸಲಾಗುತ್ತದೆ.

**ಬೋಗ್ಯದ ಜಮೀನಿನಲ್ಲಿನ ಕೃಷಿಗೂ ಬೆಳೆ ಸಾಲ:** ಬೇರೆಯವರ ಜಮೀನನ್ನು ಬೋಗ್ಯ ಪಡೆದು ಕೃಷಿ ಮಾಡುವವರಿಗೆ ಸದ್ಯ ಬೆಳೆ ಸಾಲ ಸಿಗುವುದಿಲ್ಲ. ಜಮೀನಿನ ಒಡೆತನ ಅವರ ಬಳಿ ಇಲ್ಲದ ಕಾರಣ, ಅವರು ಲೇವಾದೇವಿಗಾರರಿಂದ ಸಾಲ ಪಡೆದು ಶೋಷಣೆಗೆ ಒಳಗಾಗುತ್ತಿದ್ದಾರೆ. ಸಾಲ ಸಿಗದೇ ಇದ್ದರೆ ಕೃಷಿಯಿಂದಲೇ ವಿಮುಖರಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಗೇಣಿದಾರರಿಗೂ ಬೆಳೆ ಸಾಲ ಒದಗಿಸಲು ಸರ್ಕಾರ ಆಲೋಚಿಸುತ್ತಿದೆ. ಪ್ರಸ್ತುತವಾಗಿ ಇಂತಹ ವ್ಯವಸ್ಥೆಯನ್ನು ಕೇರಳ ರಾಜ್ಯದ ಕೆಲವು ಸಹಕಾರಿ ಬ್ಯಾಂಕುಗಳು ಅಳವಡಿಸಿಕೊಂಡಿದ್ದು ಕೇವಲ ಮೂಲ ಮಾಲೀಕ ಮತ್ತು ಗೇಣಿದಾರರ ಕರಾರು ಒಪ್ಪಂದ ಪತ್ರದ ಆಧಾರದಲ್ಲಿ ಸಾಲ ಸೌಲಭ್ಯವನ್ನು ನೀಡುತ್ತಿರುವುದು ಪ್ರಶಂಸನೀಯವಾದುದಾಗಿದೆ.

**ಸೋಲಾರ್ ವಿದ್ಯುತ್ ಖರೀದಿ:** ಕೃಷಿ ಜಮೀನಿಗೆ ನೀರು ಒದಗಿಸಲು ಸೌರ ಪಂಪಸೆಟ್ ಬಳಕೆ ಮಾಡುತ್ತಿರುವ ರೈತರು, ತಾವು ಉತ್ಪಾದಿಸುವ ಹೆಚ್ಚುವರಿ ವಿದ್ಯುತ್ತನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಉತ್ತಮ ಬೆಲೆಗೆ ಮಾರುವ ವ್ಯವಸ್ಥೆಯೊಂದನ್ನು ರೂಪಿಸುವಂತೆ ರಾಜ್ಯ ಸರ್ಕಾರಗಳಿಗೆ ಪ್ರೋತ್ಸಾಹಿಸುವುದಾಗಿ ಬಜೆಟ್‌ನಲ್ಲಿ ಸರ್ಕಾರ ಹೇಳಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಈಗಾಗಲೇ ಪ್ರಸ್ತುತ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು ಸಂತಸದ ಸಂಗತಿಯಾಗಿದೆ.




**ಸಾವಯುವ ಕೃಷಿ, ಔಷಧ, ಸಸ್ಯಕ್ಕೆ ಪ್ರೋತ್ಸಾಹ:** ಸಾವಯುವ ಕೃಷಿಗೆ ಪ್ರೋತ್ಸಾಹ ಮುಂದುವರಿಸಿರುವ ಸರ್ಕಾರ, ಔಷಧೀಯ ಹಾಗೂ ಪರಿಮಳ ಭರಿತ ಸಸ್ಯ ಬೆಳೆಯುವುದಕ್ಕೂ ಬೆಂಬಲ ಘೋಷಿಸಿದೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದಡಿ ಮಹಿಳಾ ಸ್ವಸಹಾಯ ಸಂಘಗಳು ಕ್ಲಸ್ಟರ್‌ಗಳಲ್ಲಿ ಸಾವಯವ ಕೃಷಿ ಕೈಗೆತ್ತಿಕೊಂಡರೆ ಅವರನ್ನು ಪ್ರೋತ್ಸಾಹಿಸಲಾಗುತ್ತದೆ. ಔಷಧ ಸುಗಂಧ ಭರಿತ ಸಸ್ಯಗಳ ಸಂಘಟಿತೆಳೆಯುವವರಿಗೆ ಪ್ರೋತ್ಸಾಹಿಸಲು ರೂ.200 ಕೋಟಿ ರೂಪಾಯಿ ಗಳನ್ನು ಮೀಸಲಿರಿಸಲಾಗಿದೆ.

**ಮೀನುಗಾರರು, ಪಶು ಸಾಕುವವರಿಗೆ ಕ್ರೆಡಿಟ್ ಕಾರ್ಡ್:** ಪ್ರಸ್ತುತ ಕೃಷಿಕರಿಗೆ ನೀಡಲಾಗುತ್ತಿರುವ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಮೀನುಗಾರರು ಮತ್ತು ಹೈನುಗಾರಿಕೆಯಲ್ಲಿ ತೊಡಗಿಕೊಂಡವರಿಗೂ ಒದಗಿಸಲಾಗುತ್ತದೆ. ಇದರಿಂದ ಸಣ್ಣ ಕೃಷಿಕರು,



ಮೀನುಗಾರರು ಹಾಗೂ ಹಸು, ಕುರಿ, ಕೋಳಿ ಸಾಕಾಣಿಕೆಯಲ್ಲಿ ತೊಡಗಿಕೊಂಡವರಿಗೆ ಅನುಕೂಲವಾಗುತ್ತದೆ. ಇದರಿಂದಾಗಿ ಸಾಲಕ್ಕಾಗಿ ಸ್ಥಳೀಯ ಲೇವಾದೇವಿಗಾರರ ಮೊರೆ ಹೋಗುವುದನ್ನು ತಪ್ಪಿಸಬಹುದಾಗಿದೆ.

**ಹೈನುಗಾರಿಕೆ ಮತ್ತು ಮೀನುಗಾರಿಕೆಗೆ 10,000 ಕೋಟಿ ರೂಪಾಯಿ ಮೀಸಲು:** ಕಳೆದ ವರ್ಷ ಸೂಕ್ಷ್ಮ ನೀರಾವರಿ ಮತ್ತು ಡೈರಿ ಸಂಸ್ಕರಣೆ ಮೂಲ ಸೌಕರ್ಯ ಅಭಿವೃದ್ಧಿ ನಿಧಿಯನ್ನು ಸರ್ಕಾರ ಘೋಷಿಸಿತ್ತು. ಈ ಬಾರಿ ಮೀನುಗಾರಿಕೆ ಮತ್ತು ಅಕ್ವಾಕಲ್ಚರ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಹಾಗೂ ಹೈನುಗಾರಿಕೆ ಮೂಲ ಸೌಕರ್ಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗಿದೆ. ಈ ಎರಡು ನಿಧಿಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ.

ಈ ಮೇಲಿನ ಪ್ರಮುಖ ಯೋಜನೆಗಳ ಜೊತೆಗೆ ಗ್ರಾಮೀಣ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಲು 14.34 ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಈ ಪೈಕಿ




ಆಯವ್ಯಯ ಹೊರತಾದ ಮತ್ತು ಹೆಚ್ಚುವರಿ ಆಯವ್ಯಯ ಸಂಪನ್ಮೂಲ 11.98 ಲಕ್ಷ ಕೋಟಿ ರೂಪಾಯಿ ಕೂಡ ಒಳಪಟ್ಟಿದೆ. ಕೃಷಿ ಚಟುವಟಿಕೆ ಹಾಗೂ ಸ್ವಯಂ ಉದ್ಯೋಗದ ಹೊರತಾಗಿಯೂ 321 ಕೋಟಿ ದಿನಗಳ ಉದ್ಯೋಗ ಅವಕಾಶ ಸೃಷ್ಟಿಯಾಗಲಿದೆ. 1.88 ಕೋಟಿ ಶೌಚಾಲಯ

ಹಾಗೂ 1.75 ಕೋಟಿ ಮನೆಗಳಿಗೆ ವಿದ್ಯುತ್ ಸೌಕರ್ಯ ಸಹ ಲಭಿಸಲಿದೆ. ಇದರಿಂದ ಕೃಷಿ ಹಾಗೂ ಕೃಷಿ ಸಿಂಬಂಧಿ ಚಟುವಟಿಕೆಗಳ ಪೂರಕ ಅಭಿವೃದ್ಧಿ ಸಾಧ್ಯವಾಗುತ್ತದೆ. ಹಾಗೆಯೇ ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆಯಡಿ ಕೃಷಿ ಮಾರುಕಟ್ಟೆ, ಮಾಧ್ಯಮಿಕ ಶಾಲೆ ಮತ್ತು ಆಸ್ಪತ್ರೆಗಳ ಜೊತೆ ಗ್ರಾಮದ ರಸ್ತೆಗೆ ಸಂಪರ್ಕ ಕಲ್ಪಿಸಲು ನಿರ್ಧರಿಸಲಾಗಿರುವುದು ಸಹ ಮೂಲ ಸೌಕರ್ಯ ಅಭಿವೃದ್ಧಿಗೆ ಉತ್ತೇಜನ ದೊರೆಯುತ್ತಿದೆ. ಗ್ರಾಮೀಣ ಪ್ರದೇಶಗಳನ್ನು ತ್ಯಾಜ್ಯ ಮುಕ್ತಗೊಳಿಸಲು ಗೋಬರ್ ಧನ ಎಂಬ ಹೊಸ ಯೋಜನೆಯೊಂದನ್ನು ಘೋಷಿಸಲಾಗಿದೆ. ಈ ಯೋಜನೆಯಡಿ ಸೆಗಣಿ ಮತ್ತು ಘನತ್ಯಾಜ್ಯ ಬಳಸಿ ಗೊಬ್ಬರ, ಬಯೋಗ್ಯಾಸ್ ಮತ್ತು ಬಯೋ ಸಿ.ಎನ್.ಜಿ ಉತ್ಪಾದಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಕೃಷಿ ಸಂಬಂಧ ಚಟುವಟಿಕೆಗಳಿಗೆ ನೆರವಾಗುವ ಸಹಕಾರಿ ಸಂಘಗಳ ಲಾಭದಲ್ಲಿ ಶೇ.100 ರಷ್ಟು ತೆರಿಗೆ ವಿನಾಯಿತಿಯನ್ನು ಘೋಷಿಸಲಾಗಿದೆ. ಇದರಿಂದ ಸಹಕಾರಿ ಸಂಘಗಳು ರೈತರು ಬೆಳೆದ ಉತ್ಪನ್ನಗಳ ಸಂಸ್ಕರಣೆ ಹಾಗೂ ಕಟಾವು ನಂತರದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದಂತಾಗಲಿದೆ.

**ಉಪಸಂಹಾರ**

ಭಾರತವು ಪ್ರಮುಖವಾಗಿ ಹಳ್ಳಿ ಪ್ರದಾನ ದೇಶವಾಗಿದ್ದು ಹೆಚ್ಚಿನ ಗ್ರಾಮೀಣ ಜನರ ಮೂಲ ಕಸುಬು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾಗಿರುವುದರಿಂದ ಅವರ ಜೀವನ ಮಟ್ಟ ಮತ್ತು ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಸರ್ಕಾರದ ಸಹಾಯ ಹಸ್ತ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಪ್ರಸ್ತುತ ಕೇಂದ್ರ ಸರ್ಕಾರವು 2018–19ನೇ ಸಾಲಿನಲ್ಲಿ ಘೋಷಿಸಿರುವ ಆಯವ್ಯಯವು ಒಂದಿಷ್ಟು ಪ್ರಮಾಣದ ಕೃಷಿಕರ ಬಾಳನ್ನು ಹಸನು ಮಾಡುವಂತಹ ಪ್ರಯತ್ನವೆಂದೇ ಅರ್ಥೈಯಿಸಬಹುದು. ಆದರೆ ಈ ಯೋಜನೆಗಳು ಹಾಗೂ ಕಾರ್ಯಕ್ರಮಗಳು ನಿಜವಾದ ಫಲಾನುಭವಿಗೆ ದೊರೆತು ಕೃಷಿಕರ ಅಭಿವೃದ್ಧಿ ಪಡಿಸುವಂತಹ ಕೆಲಸ ಸವಾಲಿನದ್ದಾಗಿದೆ. ಪ್ರಜ್ಞಾವಂತ ನಾಗರೀಕರು ಹಾಗೂ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗಳು ಪ್ರಾಮಾಣಿಕವಾಗಿ ಕಾರ್ಯಕ್ರಮಗಳನ್ನು ಅಳವಡಿಸಿದ್ದೇ ಆದಲ್ಲಿ ಕೃಷಿಯ ಸುಸ್ಥಿರ ಅಭಿವೃದ್ಧಿ ಹಾಗೂ ದೇಶದ ಅಭಿವೃದ್ಧಿಯಾಗುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ನೂರಾರು ವರ್ಷಗಳಿಂದ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳನ್ನೇ ಅವಲಂಬಿಸಿಕೊಂಡಿರುವ ಕೃಷಿಕರ ಕುಟುಂಬಗಳನ್ನು ಗಮನಿಸಿದಾಗ ಅವರ ಜೀವನಮಟ್ಟ ಮತ್ತು ಕೊಂಡುಕೊಳ್ಳುವ ಶಕ್ತಿಯಲ್ಲಿ ಯಾವುದೇ ಬದಲಾವಣೆಯಿಲ್ಲ. ಕಾರಣ ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಲಭ್ಯವಾಗದಿದ್ದರೆ ಮತ್ತೊಂದೆಡೆ ಮದ್ಯವರ್ತಿಗಳ ಹಾವಳಿ ಹಾಗೆಯೇ ಪ್ರಕೃತಿ ವಿಕೋಪ ಹೀಗೆ ಹತ್ತು ಹಲವಾರು ಹೊಡೆತಗಳಿಂದ ಜರ್ಜರಿತವಾಗಿರುವ ರೈತನು ಆತ್ಮಹತ್ಯೆಯೆಡೆಗೆ ಮುಖ ಮಾಡಿರುವುದರಲ್ಲಿ ಆಶ್ಚರ್ಯವಿಲ್ಲ. ಅದಕ್ಕಾಗಿಯೇ ಪ್ರಸ್ತುತ ಸರ್ಕಾರಗಳು ಕೃಷಿಕರ ಕಲ್ಯಾಣವನ್ನು ಹೆಚ್ಚು ಮಾಡುವಂತಹ ಅವರ ಬದುಕನ್ನು ಅಭಿವೃದ್ಧಿಪಡಿಸುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದಲ್ಲಿ ಕೃಷಿಕರ ಮುಖದಲ್ಲಿ ಹರ್ಷದ ಹೊನಲನ್ನು ಕಾಣಬಹುದಾಗಿದೆ.

2018–19ನೇ ಸಾಲಿನ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕೃಷಿಯ ವಿವಿಧ ಆಯಾಮಗಳೆಡೆಗೆ ಗಮನ ಹರಿಸಿರುವುದು ಕಂಡುಬರುತ್ತದೆ. ಆದರೂ ಸಹ ಕೃಷಿಕರ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುವಂತಹ ಹಾಗೆಯೇ ಪಾರದರ್ಶಕ ಮಾರುಕಟ್ಟೆ ವ್ಯವಸ್ಥೆಯ ಮೂಲಕ ಉತ್ತಮ ಬೆಲೆಯನ್ನು ಒದಗಿಸಿಕೊಡುವ ಕಾರ್ಯಕ್ರಮಗಳು ಮತ್ತಷ್ಟು ಜಾರಿಗೆಬಂದರೆ ಕೃಷಿಕರಿಗೆ ಹಾಗೂ ಕೃಷಿಯನ್ನವಲಂಬಿಸಿರುವವರಿಗೆ ಅನುಕೂಲಕಾರಿಯಾಗಲಿದೆ. ಭಾರತದಲ್ಲಿ ಹೆಚ್ಚಿನ ಪ್ರಮಾಣದ ರೈತರು ಅನಕ್ಷರಸ್ಥರಾಗಿರುವುದರಿಂದ ವೈಜ್ಞಾನಿಕವಾಗಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಇದರಿಂದ ಹವಾಮಾನ ವೈಪರಿತ್ಯಕ್ಕೊಳಗಾದಾಗ, ಬೆಲೆ ಕುಸಿತಗೊಂಡಾಗ ರೈತರು ಕಂಗಾಲಾಗುತ್ತಾರೆ. ಇಂತಹ ರೈತರ ನೆರವಿಗೆ ಸರ್ಕಾರದ ಪ್ರತಿನಿಧಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ದಾವಿಸಿದ್ದಲ್ಲಿ ಖಂಡಿತವಾಗಿ ಭಾರತದಲ್ಲಿ ಸುಸ್ಥಿರ ಕೃಷಿ ಅಭಿವೃದ್ಧಿ ಸಾಧ್ಯವಾಗುತ್ತದೆ ಹಾಗೂ ಕೃಷಿಯನ್ನು ಉದ್ದಿಮೆಯಾಗಿ ಅಭಿವೃದ್ಧಿಪಡಿಸಬಹುದಾಗಿದೆ. ●



**ಡಾ|| ಮಹಾದೇವ ಬಿ. ಚೆಟ್ಟಿ ರವರು ಧಾರವಾಡ ಕೃಷಿ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ ದಿನಾಂಕ 20–9–2018 ರಂದು ಅಧಿಕಾರವನ್ನು ಸ್ವೀಕರಿಸಿರುತ್ತಾರೆ. ಈ ಸಂದರ್ಭದಲ್ಲಿ "ಕೃಷಿ ಕಾಯಕ" ಪತ್ರಿಕೆಯ ಸಂಪಾದಕ ಮಂಡಳಿಯು ಅವರನ್ನು ಹಾರ್ಧಿಕವಾಗಿ ಅಭಿನಂದಿಸುತ್ತದೆ.**



**ಡಾ|| ಎಸ್. ರಾಜೇಂದ್ರ ಪ್ರಸಾದ್ ರವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ ದಿನಾಂಕ 17.9.2018ರಂದು ಅಧಿಕಾರವನ್ನು ಸ್ವೀಕರಿಸಿರುತ್ತಾರೆ. ಈ ಸಂದರ್ಭದಲ್ಲಿ "ಕೃಷಿ ಕಾಯಕ" ಪತ್ರಿಕೆಯ ಸಂಪಾದಕ ಮಂಡಳಿಯು ಅವರನ್ನು ಹಾರ್ಧಿಕವಾಗಿ ಅಭಿನಂದಿಸುತ್ತದೆ.**

# ಕೊಳಚೆ ನೀರನ್ನು ಉಪಚರಿಸುವ ಪರಿಸರ ಸ್ನೇಹಿ ಪರಿಹಾರಗಳು

ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ

ಪ್ರತಿ ಸಾರಿಯೂ ನಾವು ಶೌಚಾಲಯದ ನೀರನ್ನು ಒಮ್ಮೆಗೇ ಹರಿಸಿದಾಗ (ಫ್ಲಷಿಂಗ್) ಸುಮಾರು 5 ಲೀಟರ್ ನಷ್ಟು ಕೊಳಚೆ ನೀರು ಉತ್ಪತ್ತಿಯಾಗುತ್ತದೆ. ಅದೇ ರೀತಿ ನಾವು ಹಲ್ಲುಜ್ಜುವಾಗ, ಸ್ನಾನ ಮಾಡುವಾಗ, ವಾಷಿಂಗ್ ಮೆಷೀನ್ ಉಪಯೋಗಿಸಿದಾಗ ಹೆಚ್ಚು ಹೆಚ್ಚು ಕೊಳಚೆ ನೀರು ಉತ್ಪತ್ತಿಯಾಗುತ್ತದೆ. ಈ ಕಾರಣದಿಂದ ಕೊಳಚೆ ನೀರಿನ/ಚರಂಡಿ ನೀರಿನ ಪ್ರಮಾಣ ಅಧಿಕವಾಗುತ್ತದೆ. ನಮ್ಮ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿ ದಿನ ಸುಮಾರು ಸರಾಸರಿ 80ರಿಂದ 150ಲೀಟರ್ ಕೊಳಚೆ ನೀರನ್ನು ಉತ್ಪತ್ತಿ ಮಾಡುತ್ತಾನೆ. ಪ್ರತಿಯೊಂದು ಕುಟುಂಬವೂ ಪ್ರತಿ ದಿನ ಸುಮಾರು ಸರಾಸರಿ 250ರಿಂದ 300 ಲೀಟರ್ ಕೊಳಚೆ ನೀರನ್ನು ಉತ್ಪತ್ತಿ ಮಾಡುತ್ತದೆ. ಪ್ರತಿಯೊಂದು ನಗರ ಪಾಲಿಕೆಯೂ ಪ್ರತಿ ದಿನ ಸುಮಾರು ಸರಾಸರಿ 300ರಿಂದ 700 ಮಿಲಿಯನ್ ಲೀಟರ್ ಕೊಳಚೆ ನೀರನ್ನು ಉತ್ಪತ್ತಿ ಮಾಡುತ್ತದೆ. ದೇಶದಲ್ಲಿರುವ ಎಲ್ಲಾ ನಗರ ಪಾಲಿಕೆಗಳೂ ಸೇರಿ ಪ್ರತಿ ದಿನ ಸುಮಾರು 38,354 ಮಿಲಿಯನ್ ಲೀಟರ್ ಕೊಳಚೆ ನೀರನ್ನು ಉತ್ಪತ್ತಿ ಮಾಡುತ್ತವೆ. ಇದನ್ನು 365ರಿಂದ ಗುಣಿಸಿದರೆ, ಪ್ರತಿ ವರ್ಷವೂ ನಮಗೆ ಸಾಕಷ್ಟು ಪ್ರಮಾಣದಲ್ಲಿ ಕೊಳಚೆ ನೀರು ಸಿಗುತ್ತದೆ. ಈ ನೀರನ್ನು ಉಪಚರಿಸಿ, ಶುದ್ಧೀಕರಿಸಿದಲ್ಲಿ, ಅದು ಒಂದು ಅಥವಾ ಎರಡು ಸಣ್ಣ ರಾಷ್ಟ್ರಗಳ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸ ಬಲ್ಲದು.

ಈ ಕೊಳಚೆ ನೀರು ಯಾವುದೇ ರೀತಿಯ ಉಪಚಾರಕ್ಕೆ ಒಳಪಡದೆ, ನೀರಾವರಿ ಕಾಲುವೆಗಳು, ಸರೋವರಗಳು, ಕೆರೆ ಕುಂಟೆಗಳು, ನದಿಗಳು ಮುಂತಾದವುಗಳನ್ನು ಸೇರುತ್ತದೆ. ಈ ಕಾರಣದಿಂದ ಕುಡಿಯುವ ನೀರು ಮತ್ತು ನೀರಾವರಿಗೆ ಬಳಸುವ ನೀರು ಕಲುಷಿತಗೊಳ್ಳುತ್ತದೆ. ಈ ಕಲುಷಿತ ನೀರು ಭೂಮಿಯ ಕೆಳಭಾಗಕ್ಕೂ ತಲುಪಿ, ಅಂತರ್ಜಲವನ್ನೂ ಕಲುಷಿತಗೊಳಿಸುತ್ತದೆ. ಕೊಳಚೆ ನೀರನ್ನು ಉಪಚರಿಸುವ ಘಟಕಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆಯೋ ಅಲ್ಲೆಲ್ಲ ಕೊಳಚೆ ನೀರನ್ನು ಶುದ್ಧೀಕರಿಸಲಾಗುತ್ತದೆ. ಆದರೆ, ನಾವು ನಲ್ಲಿಗಳ ಮೂಲಕ ಪಡೆಯುವ ಈ ನೀರು ಅಷ್ಟೊಂದು ಶುದ್ಧವಾಗಿರುವುದಿಲ್ಲ, ಮತ್ತು ಅಂತಾರಾಷ್ಟ್ರೀಯ ಮಾನದಂಡಕ್ಕೆ ಅನುಗುಣವಾಗಿರುವುದಿಲ್ಲ. ಈ ನೀರು ಬ್ಯಾಕ್ಟೀರಿಯಾ, ಫೀಕಲ್ ಕೋಲಿಫಾರಂ ಬ್ಯಾಕ್ಟೀರಿಯಾ, ಇ-ಕೋಲಿ ಬ್ಯಾಕ್ಟೀರಿಯಾ, ಮುಂತಾದವುಗಳಿಂದ ತುಂಬಿದ್ದು, ಬಣ್ಣ ಬದಲಾವಣೆ ಮತ್ತು ದುರ್ವಾಸನೆಯನ್ನು ಹೊಂದಿರುತ್ತದೆ. ಇದು ಮುಂದುವರಿದಲ್ಲಿ, ಈ ತೊಂದರೆಗಳು ಹೆಚ್ಚಾಗುತ್ತಾ ಹೋಗುತ್ತವೆ, ಮತ್ತು ಮುಂದಿನ 50 ವರ್ಷಗಳಲ್ಲಿ ನಮ್ಮ ದೇಶವು ಭೇದಿ (ಡೀಸೆಂಟ್ರಿ), ಅತಿಸಾರ (ಡಯೇರಿಯಾ), ಟೈಫಾಯಿಡ್ ಜ್ವರ, ಯಕೃತ್ತಿನ ಉರಿಯೂತ (ಹೆಪಟೈಟಿಸ್), ಮತ್ತು ನೀರಿನಿಂದ ಹರಡುವ ಅನೇಕ ರೋಗಗಳಿಂದ ನರಳುವವರಿಂದ ತುಂಬಿರುತ್ತದೆ.

ಕೊಳಚೆ ನೀರನ್ನು ಹೇಗೆ ಉಪಚರಿಸಬಹುದು ಎಂಬುದನ್ನು ತೋರಿಸಲು ಎರ್ನಾಕುಲಂನ ಗಿರಿನಗರದ ಮೂಲಕ ಹರಿಯುವ ಕಾಲುವೆಯಿಂದ 10 ಲೀಟರ್ ನೀರನ್ನು ತೆಗೆದುಕೊಳ್ಳಲಾಯಿತು. ಈ ನೀರು ಕುಡಿಯಲು ಯೋಗ್ಯವಲ್ಲದ ನೀರು. ಈ ನೀರಿಗೆ 0.4 ಮಿಲಿ ಲೀಟರ್ "ಈಕೊ ಕ್ಲೀನ್ 20"ಅನ್ನು (ಫ್ಲಾಕ್ಯುಲೇಟಿಂಗ್ ರೀಯೇಜಂಟ್) ಹಾಕಲಾಯಿತು (1000 ಲೀಟರ್ ಕೊಳಚೆ ನೀರಿಗೆ 40 ಮಿಲಿ ಲೀಟರ್ ಈಕೊ ಕ್ಲೀನ್ 20); ನಂತರ ಸರಿಯಾಗಿ ಮಿಶ್ರವಾಗಲು, ಅದನ್ನು ಒಂದು ಕಡ್ಡಿಯಿಂದ ಕಲಕಲಾಯಿತು. ಈ ರೀತಿಯಲ್ಲಿ ಉಪಚರಿಸಿದ ನೀರಿನ ಮಾದರಿಯನ್ನು ಒಂದು ಚಿಕ್ಕ 'ಬೀಕರ್'ನಲ್ಲಿ ತೆಗೆದುಕೊಳ್ಳಲಾಯಿತು. ಒಂದು ಗಂಟೆಯ ನಂತರ, ನೀರಿನಲ್ಲಿ ತೇಲುತ್ತಿದ್ದ ಮತ್ತು ಕರಗಿದ್ದ ಎಲ್ಲಾ

**ಆಧಾರ:** Sunil, K.P. 2018. Environmental Friendly Water Treatment Solutions. Ecohealth Products Private Limited, Mathrika Marketing, Shree Bhagavathi Complex, Gokula 1st Stage, Mathikere, Bengaluru-560054



**ಕೊಳಚೆ ನೀರು**



**ಈಕೊ ಕ್ಲೀನ್ 20 ಮತ್ತು 50ರಿಂದ ಉಪಚರಿಸಿದ**

**ನಂತರ ಪಡೆದ ಶುದ್ಧವಾದ ನೀರು**

ಕಲ್ಮಷಗಳೂ ಬೀಕರ್ ನ ತಳಭಾಗದಲ್ಲಿ ಬಂದು ಮಡ್ಡಿಯಾಗಿ ಸೇರಿದವು. ತಿಳಿಯಾದ ನೀರನ್ನು ಮತ್ತೊಂದು ಬೀಕರ್ ಗೆ ಸುರಿದುಕೊಳ್ಳಲಾಯಿತು, ಮತ್ತು ಈ ನೀರಿಗೆ "ಈಕೊ ಕ್ಲೀನ್ 50"ಅನ್ನು (ಬ್ಯಾಕ್ಟೀರಿಸೈಡಲ್ ರೀಯೇಜಂಟ್/ ಬೊಂತೆಕಟ್ಟುವಂತೆ ಮಾಡುವ ಕಾರಕ) ಹಾಕಲಾಯಿತು. ಇದು ನೀರಿನಲ್ಲಿರುವ ಎಲ್ಲಾ ಬ್ಯಾಕ್ಟೀರಿಯಾ, ಫೀಕಲ್ ಕೋಲಿಫಾರಂ ಬ್ಯಾಕ್ಟೀರಿಯಾ, ಇ–ಕೋಲಿ ಬ್ಯಾಕ್ಟೀರಿಯಾ, ಮುಂತಾದವುಗಳನ್ನು ಸಾಯಿಸುತ್ತದೆ. ನಂತರ ಈ ನೀರನ್ನು 'ಸ್ಟ್ಯಾಂಡರ್ಡ್ ಕಾರ್ಬನ್ ಫಿಲ್ಟರ್' ಮುಖಾಂತರ ಶೋಧಿಸಬೇಕು, ನಂತರ ಕುಡಿಯಲು ಉಪಯೋಗಿಸಬಹುದು. ಮಡ್ಡಿಯನ್ನು ಉತ್ತಮ ಗೊಬ್ಬರವನ್ನಾಗಿ ಉಪಯೋಗಿಸಬಹುದು.

ಕೊಳಚೆ ನೀರಿನ ನಿರ್ವಹಣೆಯಲ್ಲಿ "ಈಕೊ ಕ್ಲೀನ್ 20 ಮತ್ತು ಈಕೊ ಕ್ಲೀನ್ 50" ಬಹಳ ಉಪಯುಕ್ತವಾಗಿವೆ. ಈ ಕಾರಕಗಳು ಕೊಳಚೆ ನೀರನ್ನು ಕುಡಿಯಲು ಯೋಗ್ಯವಾದ ನೀರನ್ನಾಗಿ ಪರಿವರ್ತನೆ ಮಾಡುತ್ತವೆ. ಆದುದರಿಂದ, ದೊಡ್ಡ ಪ್ರಮಾಣದಲ್ಲಿ ಈ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳಬಹುದು. ಎಲ್ಲೆಲ್ಲಿ ಕೊಳಚೆ ನೀರನ್ನು ಉಪಚರಿಸುವ ಘಟಕಗಳು ಇವೆಯೋ ಅಲ್ಲೆಲ್ಲಾ "ಈಕೊ ಹೆಲ್ತ್ ಪ್ರಾಡಕ್ಟ್ಸ್"ಗಳನ್ನು ಉಪಯೋಗಿಸಿಕೊಳ್ಳಬಹುದು. ಈ ರೀತಿಯಲ್ಲಿ ಉಪಚರಿಸಿದ ನೀರನ್ನು ಕುಡಿಯಲು ಉಪಯೋಗಿಸದಿದ್ದರೂ, ಮನೆ ಕೈತೋಟಗಳು, ಕಟ್ಟಡಗಳ ನಿರ್ಮಾಣದ ಕೆಲಸಗಳು ಮುಂತಾದವುಗಳಲ್ಲಿ ಉಪಯೋಗಿಸಿ ಕೊಳ್ಳಬಹುದು. ●



## ಮರವಾಗು

ಮರವಾಗೆಲೆ, ಓ ಜೀವವೇ, ಮರವಾಗು
ಹಲಬಗೆಯಲಿ ಈ ಲೋಕಕೆ ನೆರವಾಗು
ಅಲೆದಾಡುವ ಜೀವಕ್ಕೆಲ್ಲಿ ಯಾವ ನೆಲೆ?
ನೆಲದಾಳಕೆ ಬೇರನೂರಿ ಸ್ಥಿರವಾಗು

ಭೂಸಾರವ ನೀ ಹೀರಿ ತೊಡು ಹಸಿರನ್ನು
ಪರಿಸರಕೆ ನೀಡು ನಿರ್ಮಲ ಉಸಿರನ್ನು
ರೆಂಬೆಯಲ್ಲೂ ತುಂಬಲಿ ಹೂ ಹಣ್ಣು
ತಂಪು ನೆರಳ ಕೊಡುವ ಚಪ್ಪರವಾಗು

ಹಲವು ಜೀವಗಳಿಗೆ ಆಗು ನೀನು ನೆಲೆ
ಕಾರ್ಮುಗಿಲನು ಇಳೆಗೆ ಸೆಳೆದು ಸುರಿದು ಮಳೆ
ಪ್ರತಿ ಚೈತ್ರ ನಿನಗೆ ತರಲಿ ಹೊಸ ಜೀವಕಳೆ
ಹಡೆದ ನೆಲತಾಯಿಗೆ ನೀ ವರವಾಗು.

–ಬಿ.ಆರ್. ಲಕ್ಷ್ಮಣರಾವ್



## ಒಂದು ಮಣ್ಣಿನ ಜೀವ

ಒಂದು ಮಣ್ಣಿನ ಜೀವ ಎಂದೂ ಮಣ್ಣಿನಲ್ಲಿಯೇ
ಉಳಿಯದು
ಸಣ್ಣ ಸಸಿಯೇ ಬೆಳೆದು ಬೇರಿಗೆ ಪಾರಿಜಾತವ ಸುರಿವುದು

ನೀರು ತುಂಬಿದ ಮಣ್ಣಪಾತಿಯೇ ಕಂದರಿಗೆ ಕದಲಾರತಿ
ನೂರು ಗುಡಿಗಳ ದೀಪ ವೃಕ್ಷವೇ ಅಮ್ಮನೆತ್ತುವ ಆರತಿ
ಹಕ್ಕಿಪಕ್ಕಿಯ ಬಣ್ಣದಕ್ಷತೆ ಹರಕೆ ಬಾಗಿದ ಮುಡಿಯಲಿ
ಹಸಿರಿನೆಲೆಗಳ ಉಸಿರಿನಾಶೀರ್ವಚನ ಅರಗಿಳಿ ನುಡಿಯಲಿ

ಯಾವುದೋ ಸೋಬಾನೆ ಬಾನೆ ತುಂಬಿ
ತುಳುಕಿದ ಝೇಂಕೃತಿ
ತುಟಿಯ ಬಟ್ಟಲು ಸುರಿವ ಅಮೃತಕೆ ಎಲ್ಲಿ
ಇದೆಯೋ ಇತಿಮಿತಿ?
ಅಂದು ಒಂದೇ ಬಿಂದು ಇಂದೋ ಎಂದೂ
ಬತ್ತದ ನೀರ್ಝರಿ
ಮಣ್ಣ ಮಕ್ಕಳ ಕಣ್ಣನೆರೆಸುವ ಹಸಿರ ಸೆರಗೋ ಥರಾವರಿ

ಹರಕೆ ಇದ್ದರೆ ಯಾವ ಅರಕೆ ನಮ್ಮ ಅಮ್ಮನ ಮಡಿಲಲಿ
ಹಾಲುಗೆನ್ನೆಯ ನಾರಿ ನನ್ನ ಅನ್ನಪೂರ್ಣೆಯ ಗುಡಿಯಲಿ
ಹೂವು ಸಾವಿರ ಸೇರಿ ಒಂದೇ ಹಾರವಾಗುವ ಪಕ್ಷಕೆ
ಲಕ್ಷ ಮಕ್ಕಳೆ ಅಕ್ಷಮಾಲೆ ನಮ್ಮ ತಾಯಿಯ ವಕ್ಷಕೆ.

–ಎಚ್.ಎಸ್. ವೆಂಕಟೇಶಮೂರ್ತಿ

# ಅಖಂಡೇಶ್ವರ ವಚನಗಳಲ್ಲಿ ಕೃಷಿ ಮತ್ತು ಪಾರಮಾರ್ಥ

**ಡಾ|| ಬಿ. ಎಮ್. ಚಿತ್ತಾಪೂರ, ಪ್ರಾಚಾರ್ಯರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು**

**ಸಾರಲೇಖ**

ಅನರಕ್ಷ ರೈತಾಪಿಜನರಿಗೆ ವೇದಗಳು ಕಬ್ಬಿಣದ ಕಡಲೆಯಾದಾಗ ಶರಣರು ಆಡುಭಾಷೆಯಲ್ಲಿ ಸರಳ ವಚನಗಳನ್ನು ರಚಿಸಿ ಮೌಲಿಕ ಜೀವನಕ್ಕೆ ಅಡಿಪಾಯ ಹಾಕಿದರು. ವಚನಗಳಲ್ಲಿ ಜೀವನ್ಮುಕ್ತಿ ವಿಧಾನ ಕುರಿತು ಪ್ರಸ್ತಾಪಿಸುವಾಗ ಕೃಷಿ, ಕೃಷಿ ಸಂಬಂಧಿತ ಮತ್ತು ಗ್ರಾಮೀಣ ದೈನಂದಿನ ಜೀವನ ವಿಷಯಗಳ ಉಪಮೆಗಳ ಬಳಕೆ ಸಾಮಾನ್ಯ. ಇಂತಹ ಶರಣರ ಸಾಲಿನಲ್ಲಿ ಹದಿನೇಳನೇಯ ಶತಮಾನದ ಕಲಬುರಗಿಯ ಜೇವರಿಗಿಯ ಶ್ರೀ ಷಣ್ಮುಖ ಶಿವಯೋಗಿಗಳೂ ಒಬ್ಬರು. ಗುರುಗಳಾದ ಅಖಂಡೇಶ್ವರರ ನಾಮದಡಿ 722 ವಚನಗಳನ್ನು ಶ್ರೀಗಳು ರಚಿಸಿದ್ದಾರೆ. ಜೀವನ್ಮುಕ್ತಿಗಾಗಿ ಜಗವಾತನ ಭಕ್ತಿಯಿಂದ ಮೆರೆಯಬೇಕು ಇಲ್ಲದಿದ್ದರೆ ಈ ಜನ್ಮ ಕೋಳಿ ಕತ್ತೆಗಳಿಗಿಂತಲೂ ಹೀನಾಯ ವಾದುದೆಂದು, ಪ್ರತಿಯೊಬ್ಬರೂ ಶಿವಸ್ವರೂಪಿಗಳು, ಇದನ್ನು ಅರಿತಾಗ ಮಾತ್ರ ಮಾನವ ಸ್ವರೂಪ ಶಿವ ಸ್ವರೂಪವಾಗಬಲ್ಲುದು. ಹೆಣ್ಣು, ಹೊನ್ನು ಮತ್ತು ಮಣ್ಣುಗಳ ಮೋಹ ಸುಂದರ ಸ್ತ್ರೀಯ ಬಿನ್ನಾಣಕ್ಕೆ ಕಣ್ಣುಗಳು ಮನಸೋಲುವಂತೆ ಸಹಜವಾದುದಾದರೂ ದೇಹವಿಲ್ಲದ ಪುರುಷ, ಹದವಾದ ಭೂಮಿಯಲ್ಲಿ ಸ್ವಾರ್ಥದ ಆಸೆಯಿಲ್ಲದೆ ಬಿತ್ತಿದ ಬೀಜ ಮೊಳೆತು, ಎಲೆಗಳು ಚಿಗುರಿ, ಟೊಂಗೆಗಳು ಪಸರಿಸಿ, ಹೂಗಳು ಅಂಕುರಿಸಿ ಕಾಯಿ ಬೆಳೆದು ರಸಭರಿತ ಫಲವಾದಂತೆ, ಆ ಫಲವನ್ನು ತಿನ್ನದೆ ಸವಿಸಿದಂತೆ ಶಿವನೊಳಗೊಂದಾಗಬೇಕು ನಮ್ಮ ಜಡರಹಿತ ಚೇತನವೆನ್ನುತ್ತಾರೆ ಶ್ರೀಗಳು. ಯಾವುದು ಸಾಮಾನ್ಯವಾಗಿ ಸಾಧ್ಯವೆನಿಸುವುದಿಲ್ಲವ್ರೋ, ಆದರೂ ಸಾಧ್ಯ. ಅದುವೇ ಸೃಷ್ಠಿ ವಿಚಿತ್ರ, ವಿಶೇಷ ಮತ್ತು ಪರಮ ಸತ್ಯ. ಹೀಗೆ ಶಿವಯೋಗಿಗಳು ಜನಸಾಮಾನ್ಯರಿಗೆ ಅರ್ಥವಾಗುವಂತೆ ಕೃಷಿ ಸನ್ನಿವೇಶ ಸಂದರ್ಭಗಳ ಉಪಮೆಗಳ ಬಳಕೆ ಮಾಡಿ ಶಿವಾನುಭವ ಜ್ಞಾನವನ್ನು ಮತ್ತು ಪಾರಮಾರ್ಥವನ್ನು ತಮ್ಮ ವಚನಗಳ ಮೂಲಕ ನೀಡಿದ್ದಾರೆ. ಈ ವಚನಗಳು ಸರಳವಾಗಿದ್ದರೂ ಆಳ ಜ್ಞಾನದಿಂದ ಕೂಡಿದ್ದು ಸದಾಕಾಲಕ್ಕೂ ಸ್ತುತ್ಯವಾದ ಸತ್ಯನುಡಿಗಳಾಗಿವೆ.

– 0 –

ಹನ್ನೆರಡನೆಯ ಶತಮಾನದಲ್ಲಿ ಅನಕ್ಷರಸ್ತ ಸಾಮಾನ್ಯ ಜನರಿಗೆ ವೇದಗಳು ಕಬ್ಬಿಣದ ಕಡಲೆಯಾದಾಗ ಶರಣರು ಆಡುಭಾಷೆಯಲ್ಲಿ ಮಿತ ಶಬ್ದಗಳಲ್ಲಿ ವಚನಗಳನ್ನು ರಚಿಸಿ ಮೌಲಿಕ ಜೀವನಕ್ಕೆ ಅಡಿಪಾಯ ಹಾಕಿದರು. ವಚನಗಳಲ್ಲಿ ಶರಣರು ಸರಳ ಜೀವನ ಮುಕ್ತಿ ವಿಧಾನ ಕುರಿತು ಪ್ರಸ್ತಾಪಿಸುವಾಗ ಕೃಷಿ, ಕೃಷಿ ಸಂಬಂಧಿತ ಮತ್ತು ಗ್ರಾಮೀಣ ದೈನಂದಿನ ಜೀವನ ವಿಷಯಗಳ ಉಪಮೆಗಳ ಬಳಕೆ ಸಾಮಾನ್ಯ. ಕಾರಣವಿಷ್ಟೇ, ಸರಳ ಶಿವಯೋಗ ಮಾರ್ಗದ ಪರಿಚಯ ಮತ್ತು ಅದರ ಸಾಧನೆ ಜನಸಾಮಾನ್ಯರಿಗೆ ಸುಲಭ ಸಾಧ್ಯವಾಗಲೆಂಬುದು. ಒಮ್ಮೆ ವಿಜಯಪುರದ ನಡೆದಾಡುವ ದೇವರೆಂದೆ ಖ್ಯಾತಿವೆತ್ತ ಶ್ರೀಗಳಾದ ಸಿದ್ದೇಶ್ವರ ಸ್ವಾಮಿಗಳು ಪ್ರವಚನವೊಂದರಲ್ಲಿ ಶರಣರ ವಚನವೊಂದನ್ನು ವಿಷಯುವಾಗಿಟ್ಟುಕೊಂಡು 'ಶಿವಾರಾಧನೆಯೂ ಕೂಡ ಕೃಷಿಗಿಂತ ಭಿನ್ನವಾಗಿಲ್ಲ; ಬೆಳೆ ಬೇಸಾಯದಲ್ಲಿ ಮೊದಲು ಭೂಮಿಯ ಹಸನಾದ (ಕಳೆರಹಿತ) ಮತ್ತು ಹದವಾದ ತಯಾರಿಕೆ ಬಲು ಮುಖ್ಯ. ನಂತರ ಉತ್ತಮ ಬೀಜದ ಆಯ್ಕೆ, ಹದವರಿತು ಸರಿಯಾದ ಸಮಯದಲ್ಲಿ ಬಿತ್ತನೆ; ನಂತರ ನೀರು ಗೊಬ್ಬರಗಳನ್ನು ನೀಡಿ ಬೆಳೆ ಜೋಪಾನ (ವ್ಯವಸಾಯ) ಮಾಡುವುದು ಹೇಗೆ ಮಹತ್ವದ್ದೊ ಹಾಗೆಯೇ ಶಿವನ ಸಾಕ್ಷಾತ್ಕಾರ ಪಡೆಯಲು ಶಿವನ/ದೇವರ ಆರಾಧನೆಗೆ ಮೊದಲು ನಮ್ಮ ಮನಸ್ಸೆಂಬ ಹೊಲವನ್ನು ಕಸಗಳಿಂದ (ಕೀಳು ವಿಚಾರಗಳಿಂದ) ಹಸನು (ಸ್ವಚ್ಛ/ಮುಕ್ತ) ಮಾಡಬೇಕು. ಕಸವಿದ್ದರೆ ಹೇಗೆ ಒಳ್ಳೆಯ ಬೆಳೆಯ ಉತ್ಪಾದನೆಯು ಸಾಧ್ಯವಿಲ್ಲವ್ರೋ ಹಾಗೆ ಕಲುಷಿತ ಮನದಲ್ಲಿ ದೈವೀಭಾವನೆ ಹುಟ್ಟುವುದು ಕಷ್ಟ. ಯಾವುದೆ ಲೋಭ ಕಾಮನೆಗಳಿಲ್ಲದ ನೀರಾಳ ಮನಸ್ಸಿನಲ್ಲಿ ಶಿವನಾಮ ಸ್ಮರಣೆಯ ಬೀಜ ಬಿತ್ತಬೇಕು. ಪ್ರತಿ ಹಂತದಲ್ಲೂ ಸೂಕ್ತ ಅನುಭಾವದ ನೀರೆರೆಯಬೇಕು. ಭಕ್ತಿಯೆಂಬ ಪರಿಶ್ರಮದ ಮೂಲಕ ಏಕೋಭಾವದಿಂದ ಶರಣರ ನಡೆಯನ್ನು ಆಧಾರವಾಗಿಟ್ಟುಕೊಂಡು ಉಪಾಸನೆ ಮಾಡಿದರೆ ಮುಕ್ತಿಯೆಂಬ ಫಲ ಸಾದ್ಯ' ಎಂದು ಹೇಳುತ್ತಿದ್ದರು. ಹೀಗೆ ಕೃಷಿ ಮತ್ತು ಪರಿಸರದ ವಿಷಯಗಳನ್ನು ಆಧಾರವಾಗಿಟ್ಟುಕೊಂಡು, ಮತ್ತು ದೃಷ್ಟಾಂತಗಳನ್ನು ನೀಡಿದಲ್ಲಿ ವಿಷಯಗ್ರಹಣ ಸುಲಭಸಾದ್ಯ ಎಂಬುದು ಈ ವಚನಗಳಲ್ಲಿ ವಿಧಿತವಾಗುತ್ತದೆ.

ಹೀಗೆ ಆರಂಭವಾದ ಶರಣ ಸಾಹಿತ್ಯ ಬರುಬರುತ್ತ ಕಡಿಮೆಯಾದರೂ ಅನೇಕ ಶರಣರು/ಶಿವಯೋಗಿಗಳು ನಂತರದಲ್ಲೂ ಈ ಸಾಧನವನ್ನು ಬಳಸಿದ್ದುಂಟು. ಅಂತಹ ಪೂಜನೀಯ ನರಶ್ರೇಷ್ಠರಲ್ಲಿ ಹದಿನೇಳನೇಯ ಶತಮಾನದಲ್ಲಿ ಆಗಿ ಹೋದ ಸಗರನಾಡಿನ ಜೇವರಗಿಯ ಶ್ರೀ ಷಣ್ಮುಖ ಶಿವಯೋಗಿಗಳು ಒಬ್ಬರು. ಮಲ್ಲಪ್ಪಶೆಟ್ಟೆಪ್ಪ ಮತ್ತು ದೊಡ್ಡಮಾಂಬೆ ದಂಪತಿಗಳಿಗೆ ಕ್ರಿ.ಶ. 1639ರಲ್ಲಿ ಜನಿಸಿದ ಷಣ್ಮುಖ ಶಿವಯೋಗಿಗಳು ಕ್ರಿ. ಶ. 1659ರಲ್ಲಿ ಶೂನ್ಯ ಸಿಂಹಾಸನದ ಪಟ್ಟವೇರಿದರು. ಅವರು ತಮ್ಮ ಗುರುಗಳಾದ ಅಖಂಡೇಶ್ವರರ ಹೆಸರಿನಲ್ಲಿ ವಚನಗಳನ್ನು ರಚಿಸಿದ್ದಾರೆ. ಕಲಬುರಗಿಯ ಜೇವರಿಗಿ ತಾಲೂಕಿನ ಶ್ರೀ ಷಣ್ಮುಖ ಶಿವಯೋಗಿಗಳ ಸಂಸ್ಥಾನ ಮಠಕ್ಕೆ ಆಗಸ್ಟ್ 2008ರಂದು ದರ್ಶನಕ್ಕೆಂದು ಹೋದಾಗ ಶ್ರೀಗಳಾದ ಮ.ನಿ.ಪ್ರ. ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ದಯಪಾಲಿಸಿದ 'ಅಖಂಡೇಶ್ವರ ವಚನಗಳು' ಪುಸ್ತಕದಲ್ಲಿ ಪ್ರಕಟವಾದ ಕೆಲವು ಕೃಷಿಜ್ಞಾನ ಸಂಬಂಧಿತ ವಚನಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಆದಿ ಶಬ್ದ 'ಓಂ' ಹಿಂದೂಗಳಿಗೆ ಬಹಳ ಅರ್ಥಗರ್ಭಿತ ಶಬ್ದ. ದೇವನಾಮ ಸ್ಮರಣೆಯಲ್ಲಿ ಮೊದಲಲ್ಲಿ ಬರುವ ಪವಿತ್ರ ಶಬ್ಧ. ಈ ಶಬ್ದದ ಅರ್ಥವನ್ನು ಆರು ಸಾಧನೆಗಳೆಂಬ ಶಾಖೆಗಳ ಮೇಲೆ 'ಓಂ ನಮಃಶಿವಾಯ' ಎಂಬ ಆರಕ್ಷರಗಳು ಚಿಗುರೊಡೆದು ಷಟ್‌ಸ್ಥಲಗಳೇಂಬ ಆರು ಹೂಗಳರಳಿ ಮೋಕ್ಷದ ಫಲಗಳನ್ನೀಯುವ ಮರವೆಂದು ಸುಲಭದಲ್ಲಿ ರೈತಾಪಿ ಜನರಿಗೆ ಅರ್ಥವಾಗುವಂತೆ ತಿಳಿಸಿದ್ದಾರೆ ಶಿವಯೋಗಿಗಳು ವಚನವೊಂದರಲ್ಲಿ.

'ಓಂಕಾರವೆಂಬ ಮರಕ್ಕೆ ಷಟ್ ಕೃತಿಯೆಂಬ ಶಾಖೆ ಪಸರಿಸಿ
ಷಡಕ್ಷರಗಳೆಂಬ ತಳಿರು ಕೊನರಿ
ಷಟ್‌ಸ್ಥಲಗಳೆಂಬ ಕುಸುಮಗಳಾಗಿ
ಷಡುಲಿಂಗಾಂಗಗಳೆಂಬ ಮೋಕ್ಷದ ಮಧುರ ಫಲಂಗಳ
ತಳೆದಿಪ್ಪುದು ನೋಡಾ'

ಮುಂದುವರಿದು ಮನುಷ್ಯನಾಗಿ ಹುಟ್ಟಿದ ಬಳಿಕ ಮೊದಲು ತನ್ನನರಿಯಲು ಪ್ರಯುತ್ನಿಸಬೇಕು. ಜೀವನ್ಮುಕ್ತಿಗಾಗಿ ಜಗದಾತನನು ಸ್ಮರಿಸಬೇಕು. ಭಕ್ತಿಯಿಂದ ಮೆರೆಯಬೇಕು ಇಲ್ಲದಿದ್ದರೆ ಮಾನವ ಜನ್ಮ ಕೋಳಿ ಕತ್ತೆಗಳಿಗಿಂತಲೂ ಹೀನಾಯವಾದು ಎಂದು ಹೇಳುವ ಮಾತು ಎಷ್ಟು ಸ್ಪುಟವಾಗಿ ಬರುತ್ತದೆ ಎಂಬುದನ್ನು ನೋಡಬೇಕು. ಲೋಕಾನುಭವ ಶಿವಾನುಭವದ ಅಭಿವ್ಯಕ್ತಿಗೆ ಅನುವಾಗಬಲ್ಲದೆಂಬುದಕ್ಕೆ ಉತ್ತಮ ನಿದರ್ಶನವಿದು.

ಕೋಳಿ ಕೂಗುವುದು ತನ್ನ ಬೆಳಗಿನ ವೇಳೆಯನರಿದು
ಕತ್ತೆ ಕೂಗುವುದು ತನ್ನ ಹೊತ್ತಿನ

ಗೊತ್ತನರಿದು
ಶಿವಭಕ್ತನಾದ ಬಳಿಕ, ತನ್ನ ಅರುಹು ಕುರುಹಿನ,
ಭಕ್ತಿಮುಕ್ತಿಯ ಗೊತ್ತನರಿಯದ ಬಳಿಕ
ಆ ಕೋಳಿ ಕತ್ತೆಗಳಿಗಿಂತ ಕರಕಷ್ಟ ನೋಡಾ
ಅಖಂಡೇಶ್ವರಾ (138)

ಪ್ರತಿಯೊಬ್ಬರೂ ಶಿವಸ್ವರೂಪಿಗಳು. ಅವರ ಮನದಲ್ಲಿ ಪರಶಿವನ ಮಹಾಘನಲಿಂಗ (ಚೇತನ)ವಿರುವುದು. ಆ ಇರುವಿಕೆಯನ್ನು ಅರಿತಾಗ ಮಾತ್ರ ಮಾನವ ಸ್ವರೂಪ ಶಿವ ಸ್ವರೂಪವಾಗಬಲ್ಲುದು, ದೇವ ಸ್ವರೂಪವಾಗಬಲ್ಲುದು, 'ಅಹಂ ಬ್ರಹ್ಮಾಸ್ಮಿ' ಸ್ಥಾನ ತಲುಪಬಹುದು. ಬೀಜದ ಮರೆಯ ಬೃಹನ್ಮರದಂತೆ, ಮುಗಿಲಮರೆಯ ಮಳೆಯಂತೆ, ಆ ಮಹಾಘನ ಲಿಂಗವು ತನುಮನದಲ್ಲಿ ಸುಪ್ತವಾಗಿರುತ್ತದೆ. ಈ ಸತ್ಯವನರಿತಡೆ ಆದಿ ಅನಾದಿಗಳನ್ನು ಅರಿಯಬಹುದು. ಅದನ್ನು ತಿಳಿಯಲು ಪ್ರಯತ್ನಿಸಿ ಎನ್ನುತ್ತಾರೆ ಶಿವಯೋಗಿಗಳು.

ಬೀಜದ ಮರೆಯಲ್ಲಿ ಅಡಗಿರ್ದ ಅಂಕುರವು
ಬಹಿರ್ಗತವಾದಂತೆ
ಮುಗಿಲ ಮರೆಯಲ್ಲಿ ಅಡಗಿರ್ದ
ಕ್ಷಣಿತವು ಸ್ಫುರಿಸಿದಂತೆ,
ಎನ್ನಮನದ ಮಧ್ಯದಲ್ಲಿ ಅಡಗಿರ್ದ
ಮಹಾಘನ ಲಿಂಗವು
ತನ್ನ ಲೀಲೆಯಿಂದ ತಾನೇ ಉದಯವಾಗಲು
ನಿಮ್ಮ ಆದಿಅನಾದಿಯ ನಿಲವ ಕಂಡೆನಯ್ಯಾ
ಅಖಂಡೇಶ್ವರಾ (8)

ಆಹಾರವನರಸಿ ಅಡವಿಯಲಿದ್ದರೂ ತಾಯಿ ಹಸುವಿಗೆ ಮೊಲೆಯುಣಿಸುವ ಸಮಯವಾದಂತೆ ಕರುವಿಗೆ ಹಂಬಲಸಿ ಹಟ್ಟಿಗೆ ಧಾವಿಸುತ್ತದೆ, ಹಾಲುಣಿಸುತ್ತ ಮೈನೆವರುತ್ತ ತನ್ನ ಅಕ್ಕರೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಕರುವಿಗೆಲ್ಲಿ ತಾಯಿಯ ಪ್ರೀತಿಯು ಅರ್ಥವಾಗುತ್ತದೆ. ಈ ಭವದಲ್ಲಿ ಜನಿಸಿದ ಮಾನವ ಸ್ವರೂಪಿ ಜಡ ದೇಹ ಕೂಡ ಕರುವಿನಂತೆ, ಶಿವಕರುಣೆಯನರಿಯದೆ ಕೇವಲ ಪ್ರಾಪಂಚಿಕ (ಹಾಲಿನಂತೆ) ವ್ಯಾಮೋಹಕ್ಕೊಳಗಾಗಿ ಪರಿತಪಿಸುತ್ತಿದೆ; ಕಾರಣ ಕರುಣೆದೋರಿ, ನಶ್ವರ ಸಂಸಾರದ ಹಂಬಲ ತೊಲಗಿಸಿ ನಿನ್ನ ಧ್ಯಾನದತ್ತ ನನ್ನ ಮನವನ್ನು ಕರುಣೆದೋರಿ ತೊಡಗಿಸೆಂದು ಶ್ರೀಗಳು ನರರಿಗೆ ದೇವರ ಮೊರೆ ಹೋಗುವಂತೆ ಹೇಳುತ್ತಾರೆ.

ಅಡವಿಯಲಿರ್ದ ಗೋವು ಮನೆಯಲ್ಲಿರ್ದ
ಕರುವಿಂಗೆ ಚಿಂತಿಸಿ ಬಂದು
ಹಾಲನೂಡಿ ಮೋಹ ಮಾಡುವುದಲ್ಲದೆ,
ಆ ಕರುವೆತ್ತ ಬಲ್ಲುದಯ್ಯ!
ನಾನು ಕರ್ಮದೇಹವಿಡಿದು ಪರಿಭವದಲ್ಲಿ
ತೊಳಲುತ್ತಿರಲು,
ನೀನು ದಯಹುಟ್ಟಿ ಎನ್ನ ಮರವೆಯ
ಸಂಸಾರವ ತೊಲಗಿಸಿ
ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ
ನಾನೇನಬಲ್ಲೆನಯ್ಯ ಅಖಂಡೇಶ್ವರಾ? (14)

ಈ ಜಗದಲ್ಲಿ ಜನ್ಮತಾಳಿದ ಬಳಿಕ ಹೆಣ್ಣು, ಹೊನ್ನು ಮತ್ತು ಮಣ್ಣುಗಳ ಮೋಹ, ಸುಂದರ ಸ್ತ್ರೀಯ ಬಣ್ಣ ಬಿನ್ನಾಣಕೆ ಕಣ್ಣುಗಳು ಮನಸೋಲುವಂತೆ ಸಹಜವಾದುದಾದರೂ ತನ್ನ ಜೊಲ್ಲದ ಸವಿಯೇ ತಾನು ಕಡಿಯುತ್ತಿರುವ ಒಣ ಎಲುಬಿನ ಸವಿಯೆಂದು ತಿಳಿದಿರುವ ನಾಯಿಯಂತಾಗಬೇಡಿ, ಎಲುಬಿ ಗೆಲ್ಲಾದರೂ ರುಚಿ ಇರಲು ಸಾಧ್ಯವೇ; ಕಾರಣ ನಿಜ ಸುಖದ/ಶಿವ ಸನ್ನಿಧಾನದ, ಶಿವ ಕಾರುಣ್ಯದ ಸುಖವನ್ನು ಬಯಸಿರೆನ್ನುತ್ತಾರೆ ಶ್ರೀ ಷಣ್ಮುಖ ಶಿವಯೋಗಿಗಳು ತಮ್ಮ ವಚನವೊಂದರಲ್ಲಿ.

ಬಣ್ಣದ ಚರ್ಮದ ಹೆಣ್ಣಿನಂಗಸಂಗದ ಕೂಟಸುಖ
ಸವಿಯೆಂದು
ಮನವೆಳಸುವ ಕಣ್ಣಗೆಟ್ಟಣ್ಣಗಳು ನೀವು ಕೇಳಿರೋ!
ಶುನಿ ಎಲುವ ಕಡಿವಲ್ಲಿ
ತನ್ನ ಬಾಯ ಲೋಳೆ ತನಗೆ ಸವಿದಟ್ಟುತಿಪ್ಪುದಲ್ಲದೆ,
ಆ ಎಲುವಿನೊಳಗೇನು
ಸಾರಸವಿಯುಂಟೇ?.....(18)

ಮುಂದುವರೆದು ಹೇಳುತ್ತಾರೆ, ಈಳಿಗಾರನು ಆಸೆಪಟ್ಟು ಹಾಲಿ(ನೀರಾ)ಗಾಗಿ ಈಚಲಮರವನ್ನು ಸುಲಿದು ಗಿಡವನ್ನು ನಿಸ್ಸಾರಗೊಳಿಸಿದಂತೆ (ಈ ಹಿಂದೆ ದಕ್ಷಿಣ ಭಾರತ ಮುಖ್ಯವಾಗಿ ನಮ್ಮ ಕರ್ನಾಟಕದಲ್ಲಿ ತೆಂಗಿನ ಮರ/ತೋಟ ನುಸಿಕೀಟದ ಹಾವಳಿಗೆ ತುತ್ತಾದಾಗ ರೈತರು ತೆಂಗಿನ ಗಿಡದಿಂದ ನೀರಾ ಇಳಿಸಲು ಒತ್ತಾಯಿಸುತ್ತಿದ್ದಾಗ ಹೀಗೆ ಮಾಡಿದಲ್ಲಿ ಗಿಡಗಳ ಉತ್ಪಾದನಾ ಸಾಮರ್ಥ್ಯ ಕುಗ್ಗುವುದಾಗಿ ವಿವರಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ಅನಾವಶ್ಯಕವಾದ ಸ್ತ್ರೀಸಂಗದಿಂದಾಗಿ ದೇವರಾರಾಧನೆಗಾಗಿ ಮುಡಿಪಾಗಿರಬೇಕಾದ ಈ ದೇಹ ಅನ್ಯತಾ ಹಾಳಾಗುವುದಲ್ಲ ಎಂದು ಜನಸಾಮಾನ್ಯರಿಗಾಗಿ ವಿಷಾದಿಸುತ್ತಾರೆ ಶ್ರೀಗಳು.

...ಈಳಿಗಾರನ ದೆಸೆಯಿಂದ ಈಚಲ ಮರ
ನಿಸ್ಸಾರವಾದಂತೆ,
ಸ್ತ್ರೀಯರ ಸಂಗದಿಂದ ದೇಹದೊಳಗಣ.....(19)

ಈ ಇಳೆಯ ಮೇಲೆ ಹುಟ್ಟಿ ಬೆಳೆದಂತೆ ಹೋಗುವಾಗ ಬರಿಗೈಯಲ್ಲಿ ಹೋಗಬೇಕಿದ್ದರೂ ಈ ಮನೆ ನನ್ನದು, ಈ ಹೊಲ ನನ್ನದು ಈ ಹೆಣ್ಣು ತನ್ನದು ಎಂದು ಆಶಿಸುವ ಸಾಮಾನ್ಯ ಮನುಷ್ಯರು ಬಡ್ಡಿಗಾರನಂತೆ ಬದುಕಿದ್ದಷ್ಟೂ ದಿನ ಒಂದಕ್ಕೆ ಎರಡರಷ್ಟು ಗಳಿಸಲು ಚಿಂತಿಸುತ್ತ ಪರಿತಪಿಸುತ್ತ ದಿನ ನೂಕುವರು. ನಿಜ ಸುಖಕ್ಕೆ ಆಶಿಸದೆ ಈ ಜಡ ಜೀವರನ್ನು ಭಕ್ತರೆನ್ನಬಹುದೇ ಎಂದು ಶಂಕಿಸುತ್ತಾರೆ ಶಿವಯೋಗಿಗಳು.

ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು
ತನುವೆನ್ನದು ಮನವೆನ್ನದು ಧನವೆನ್ನದು ಎಂದು
ಭಿನ್ನ ಭಕ್ತಿಯ ಮಾಡಿ
ಬಡ್ಡಿಕಾರನಂತೆ ಒಂದು ಕೊಟ್ಟು ಎರಡು ಪಡೆವ
ಜಡಜೀವಿಗಳ ಭಕ್ತರೆನ್ನಬಹುದೇನಯ್ಯ
ಅಖಂಡೇಶ್ವರಾ? (190)

ಹಾಲು ಹೆಪ್ಪಾಗಬೇಕಾದರೆ ಹಾಲು ಮತ್ತು ಮಜ್ಜಿಗೆ ಕೂಡಬೇಕು, ಬರಿ ಹಾಲಿನ ಗಡಗಿಯ ಮೇಲೆ ಮಜ್ಜಿಗೆಯ ಗಡಿಯನ್ನಿರಿಸಿದರಾಗದು. ಹಾಗೆಯೇ ದೇವರೊಂದಾಗಬೇಕಾದರೆ ಕೇವಲ ದೇಹದ ಮೇಲೆ ಲಿಂಗ(ದೇವ ಲಾಂಛನಗಳನ್ನು) ಧರಿಸಿದರೆ, ಭಸ್ಮ ಲೇಪನ ಮಾಡಿಕೊಂಡರೆ ಮತ್ತು ಬೇಕಾದಲ್ಲೆಲ್ಲ ರುದ್ರಾಕ್ಷಿ ಧರಿಸಿದರೆ ಸಾಧ್ಯವಿಲ್ಲ, ಇದು ಕೇವಲ ತೋರಿಕೆ ಮತ್ತು ಡಂಬಾಚಾರ. ಶಿವಜ್ಞಾನವಿಲ್ಲದೆ ಶಿವನೊಂದಾಗಲು ಅಸಾಧ್ಯವೆನ್ನುತ್ತಾರೆ ಸ್ವಾಮಿಗಳು.

ಹಾಲ ಹರವಿಯ ಮೇಲೆ ಮಜ್ಜಿಗೆಯ
ತುಂಬಿರಿಸಿದಡೇನು
ಹೆಪ್ಪಾಗಬಲ್ಲುದೆ ಅಯ್ಯಾ, ಸಮಿಶ್ರದಿಂದಲ್ಲದೆ,
ಅಂಗದ ಮೇಲೆ ಲಿಂಗಧಾರಣವಾದಡೇನು
ಸಮರಸವಾಗಬಲ್ಲುದೆ ಅಯ್ಯಾ,
ಶಿವಜ್ಞಾನವಿಲ್ಲದೆ ಅಖಂಡೇಶ್ವರಾ. (313)

ದೇಹವಿಲ್ಲದ ಪುರುಷ, ಹದವಾದ ಭೂಮಿಯಲ್ಲಿ ಸ್ವಾರ್ಥದ ಆಸೆಯಿಲ್ಲದೆ ಬಿತ್ತಿದ ಬೀಜ ಮೊಳೆತು, ಎಲೆಗಳು ಚಿಗುರಿ, ಟೊಂಗೆಗಳು ಪಸರಿಸಿ, ಹೂಗಳು ಅಂಕುರಿಸಿ ಕಾಯಿ ಬೆಳೆದು ರಸಭರಿತ ಫಲವಾದಂತೆ, ಆ ಫಲವನ್ನು ತಿನ್ನದೆ ಸವಿಸಿದಂತೆ ಶಿವನೊಳಗೊಂದಾಗಬೇಕು ನಮ್ಮ ಜಡರಹಿತ ಚೇತನವೆನ್ನುತ್ತಾರೆ ಶ್ರೀಗಳು.

ಕಾಯವಿಲ್ಲದ ಪುರುಷನು ಕಸವಿಲ್ಲದ ಭೂಮಿಯಲ್ಲಿ
ಕಾಮಿತವಿಲ್ಲದ ಬೀಜವ ಬಿತ್ತಲು
ಅದು ಅಂಕುರಿಸಿ ಎಲೆ ಎರಡಾಯಿತ್ತು
ಶಾಖೆ ಮೂರಾಯಿತ್ತು, ತಳಿರು ಆರಾಯಿತ್ತು,
ಕುಸುಮ ಮೂವತ್ತಾರಾಯಿತ್ತು,
ಕಾಯಿ ಇನ್ನೂರಹದಿನಾರಾಯಿತ್ತು,
ಹಣ್ಣು ವಿಶ್ವಪರಿಪೂರ್ಣವಾಯಿತ್ತು,
ಅದು ಅಖಂಡ ರಸತುಂಬಿ ಬಟ್ಟ ಬಯಲಲ್ಲಿ
ತೊಟ್ಟು ಬಿಟ್ಟಿತ್ತು,
ಆ ಹಣ್ಣ ನಾನು ಕಣ್ಣಿಲ್ಲದೆ ನೋಡಿ, ಕೈಯಿಲ್ಲದೆ
ಮುಟ್ಟಿ,
ಬಾಯಿಯಿಲ್ಲದೆ ಸವಿದು, ಮನವಿಲ್ಲದೆ
ಪರಿಣಾಮಿಸಿದೆನಾಗಿ,
ಅಖಂಡೇಶ್ವರನು ತನ್ನೊಳಗೆ ಇಂಬಿಟ್ಟುಕೊಂಡನು.
(429)

ಇದು ಹೇಗಪ್ಪಾಯೆಂದರೆ ಶಿವನು ಆಕಾರರಹಿತನು; ಜೀವ–ಚೇತನವೂ ಕೂಡ ಆಕಾರರಹಿತ, ನಿರ್ವಿಕಾರ. ಆಕಾರಹಿತ ಶಿವ–ಚೇತನಗಳು ಒಂದಾಗುವುದೆಂದರೆ ನೀರಿಲ್ಲದ ಭೂಮಿಯಲ್ಲಿ, ನೀರು ಬೇಕಿರದ ಬೇರುರಹಿತ ವೃಕ್ಷವೊಂದು ಹುಟ್ಟಿ, ಎಲೆಗಳಿರದಿದ್ದರೂ ಪುಷ್ಪ–ಫಲಗಳನ್ನು ಹೊಂದಿ, ನಡೆಯಲು ಬಾರದ ಇರುವೆ ಆ ಹಣ್ಣನ್ನು ನುಂಗಿದಂತೆ ಎಂದೆಲ್ಲ ಹೇಳುತ್ತಾರೆ. ಅಂದರೆ ಯಾವುದು ಸಾಮಾನ್ಯವಾಗಿ ಸಾಧ್ಯವೆನಿಸುವುದಿಲ್ಲವೋ, ಆದರೂ ಸಾಧ್ಯವೋ ಹಾಗೆ ಈ ಶರಣರು ಶಿವನಲ್ಲಿ ಲೀನವಾಗುತ್ತಾರೆ; ಅದುವೇ ಸೃಷ್ಟಿ ವಿಚಿತ್ರ ವಿಶೇಷ ಮತ್ತು ಪರಮ ಸತ್ಯ. ಶಿಷುನಾಳ ಷರೀಫರು ಇದೇ ನಿಗೂಢತೆಯನ್ನು, ತಮ್ಮ ಹಾಡೊಂದರಲ್ಲಿ 'ಕೋಡಗನ ಕೋಳಿ ನುಂಗಿತ್ತ ತಂಗಿ ...ಗುರು ಗೋವಿಂದನ ಪಾದ ನನ್ನನ್ನ ನುಂಗಿತ್ತ' ಎಂದು ದೇವ–ಚೇತನರ ಸಂಬಂಧ ಒಂದು ವಿಸ್ಮಯವೆನ್ನುವಂತೆ ಹೇಳುತ್ತಾರೆ.

ಆ ವೃಕ್ಷ ಎಲೆಯಿಲ್ಲದೆ ಹಣ್ಣುತಳೆದಿರ್ಪುದ ಕಂಡೆ,
ಆ ಹಣ್ಣನ್ನ ಒಂದು ಕಾಲಿಲ್ಲದ ಇರುವೆ ಬಂದು ನುಂಗಿದ್ದ ಕಂಡೆ,
ಆ ಇರುವೆ ಗರ್ಭದಲಿ ಇಬ್ಬರು ಸತ್ತುದ ಕಂಡೆ
ಈ ವಿಚಿತ್ರವ ಹೇಳುವಡೆ ನಾನಿಲ್ಲ
ಕೇಳುವಡೆ ನೀನಿಲ್ಲವಯ್ಯಾ ಅಖಂಡೇಶ್ವರಾ. (548)

ಹೀಗೆಯೇ "ಲಾಡ ಡೆಡ್" ಎಂಬ ತತ್ವಜ್ಞಾನಿ ಹೇಳಿರುತ್ತಾರೆ

Forever we come, forever we go,
Forever, day and night,
We are on the move,
Whence we come, thither we go,
Forever in the circle of birth and death,
From nothingness to nothingness,
But sure, a mystery here abides,
Something is there for us know.

**-Lad Ded**

ತೀರ ಇತ್ತೀಚೆಗೆ ಶ್ರೀ ಶ್ರೀ ರವಿಶಂಕರ ಗುರೂಜಿಯವರು ಹೇಳುತ್ತಾರೆ ಜೀವಾತ್ಮನ ಮಾನಸಿಕ ವಿಕಸನದಲ್ಲಿ ಎರಡು ಹಂತಗಳು – ಮೊದಲನೆಯ ಹಂತ, ಒಂದು ಸ್ವರೂಪದಿಂದ ನಿಸ್ವರೂಪನಾಗುವುದು; ಎರಡನೆಯ ಹಂತ, ನಿಸ್ವರೂಪತೆಯಿಂದ ಸಕಲ ಸ್ವರೂಪನಾಗಿ ಸಕಲ ಜೀವ ರಾಶಿಗಳ ಒಳಿತಿಗಾಗಿ ಚಿಂತಿಸುವುದು. 'ನಾನೇ ಅವನು, ಅವನೇ ನಾನು, ಸಕಲ ಜೀವಿಗಳಲ್ಲಿ ನಾನು, ನನ್ನಲ್ಲಿ ಸಕಲ ಜೀವಿಗಳು, ನಾನೇ ಜೀವ, ನಾನೆ ದೇವ' ಎಂಬ ಭಾವನೆ ಜೀವಾತ್ಮನನ್ನು ಉತ್ತುಂಗಕ್ಕೆ ಒಯ್ಯುತ್ತದೆ.

ಹಂಸ ಬಲ್ಲುದು ಹಾಲಿನ ರುಚಿಯ. ಆ ಕಾರಣ ನೀರೊಳಗೆ ಕೂಡಿದ್ದ ಹಾಲನ್ನು ಬೇರ್ಪಡಿಸಿ ಅದು ಸವಿಯ ಬಲ್ಲುದು. ಆದರೆ ಯಾವಾಗಲೂ ನೀರೊಳಗಿರುವ ನೀರುಗೋಳಿಗೆ ಅದು ಸಾಧ್ಯವಿಲ್ಲ. ಹಾಗೆಯೇ ಗಟ್ಟಿ ಕಬ್ಬಿನ ಕಾಂಡವನ್ನು ಸೀಳಿ ತಿನ್ನುವ ಆನೆಗೆ ಗೊತ್ತು ಸಕ್ಕರೆಯ ರುಚಿ, ಆದರೆ ಕಬ್ಬಿನ ಸೋಗೆ (ಎಲೆ)ಯನ್ನು ತಿನ್ನುವ ಕುರಿಗೆ ಆ ಸವಿಯು ತಿಳಿಯದು. ಅದರಂತೆ ಹೂಗಳ ಸುತ್ತ ಸುಳಿವ ಭೃಂಗ ಬಲ್ಲುದು ಪರಿಮಳ–ಮಕರಂದದ ಸ್ವಾದವ, ಆದರೆ ಮರಕೊರೆವ ಗುಂಗಿಹುಳಕ್ಕೆಲ್ಲಿ ಆ ರುಚಿ ತಿಳಿದೀತು. ಹಾಗೆಯೇ ಭಗವಂತನ ಆದಿಯನ್ನು ಅನುಭಾವಿ ಶರಣರು ಮಾತ್ರ ಬಲ್ಲರು; ಅನನುಭವಿ ಮಾನವರಿಗೆ ಅದು ಸಾಧ್ಯವಿಲ್ಲವೆಂದು ಹೇಳುತ್ತಾರೆ ಅನುಭಾವಿ ಶರಣ ಅಖಂಡೇಶ್ವರರು.

ಕ್ಷೀರದ ರುಚಿಯ ಹಂಸಬಲ್ಲುದಲ್ಲದೆ
ನೀರೊಳಗಿರ್ಪ ನೀರಗೋಳಿ
ಎತ್ತಬಲ್ಲುದಯ್ಯಾ?
ಕಬ್ಬಿನ ಸ್ವಾದವ ಮದಗಜಬಲ್ಲುದಲ್ಲದೆ
ಸೋಗೆಯ ತಿಂಬ ಕುರಿ ಎತ್ತಬಲ್ಲುದಯ್ಯಾ?
ಪುಷ್ಪದ ಪರಿಮಳವ ಭೃಂಗ ಬಲ್ಲುದಲ್ಲದೆ,
ಮರಕಡಿಯುವ ಗುಂಗೆಯಹುಳ ಎತ್ತ
ಬಲ್ಲುದಯ್ಯಾ?
ಆದಿಸ್ಥಳಕುಳದ ನಿರ್ಣಯವ ಅನಾದಿಶರಣ
ಬಲ್ಲನಲ್ಲದೆ
ಈ ಲೋಕದ ಗಾದೆಯ ಮನುಜರು
ಎತ್ತಬಲ್ಲರಯ್ಯಾ ಅಖಂಡೇಶ್ವರಾ? (436)

ನಾನು ಎಲ್ಲವ ಬಲ್ಲೆ ಎಂದು ಬಡಾಯಿಕೊಚ್ಚಿದರೆ ಸಾಧ್ಯವಿಲ್ಲ ಶಿವಜ್ಞಾನ. ಜಡೆ ಗಡ್ಡಗಳ ಬಿಟ್ಟು, ಭಸ್ಮವ ಬಳಿದು, ರುದ್ರಾಕ್ಷಿ ಮಣಿಗಳನ್ನು ಧರಿಸಿದರೆ ಶಿವಜ್ಞಾನವನ್ನು ಪಡೆದಂತಲ್ಲ, ಶಿವಸಾಕ್ಷಾತ್ಕಾರ ಗಳಿಸಿಕೊಂಡಂತಲ್ಲ. ಅದು ಕೇವಲ ಆಲದ ಮರಕ್ಕೆ ನೇತಾಡುವ ಬೇರುಗಳಂತೆ (ಬೀಳಲುಗಳು) ನಿಷ್ಪ್ರಯೋಜಕ, ನಿರುಪಯುಕ್ತ. ಹೇರಂಡಲ ಗಿಡ ಗೊನೆ ಬಿಟ್ಟಂತೆ ಯಾವ ಪುರುಷಾರ್ಥಕಕ್ಕೆ ಎನ್ನುತ್ತಾರೆ ಆತ್ಮಜ್ಞಾನಿ ಅಖಂಡೇಶ್ವರರು.

.... ಹೊರಗೆ ಆಡಂಬರ ವೇಷವ ತಾಳಿ
ಜಡೆಯ ಬಿಟ್ಟಡೇನು?
ಆಲದ ಮರಕ್ಕೆ ಬೇರಿಳಿದಂತೆ
ಸರ್ವಾಂಗಕ್ಕೆ ಭಸ್ಮವ ಪೂಸಿದಡೇನು?
ಚಪ್ಪರದ ಮೇಲೆ ಕಗ್ಗುಂಬಳಕಾಯಿ ಬಿದ್ದಂತೆ.
ಸ್ಥಾನ ಸ್ಥಾನಕ್ಕೆ ರುದ್ರಾಕ್ಷಿಯನಲಂಕರಿಸಿದಡೇನು?
ಹೇರಂಡಲ ಗಿಡ ಗೊನೆಯ ಬಿಟ್ಟಂತೆ ಕಾಣಾ
ಅಖಂಡೇಶ್ವರಾ (621)

ಇದನ್ನೆ ಮುದನೂರು ದಾಸ್ಮಯ್ಯಗಳು ಹೇಳುತ್ತಾರೆ 'ಬಲುಶಟಗನ ಭಕ್ತಿ ದಿಟವೆಂದು ನಂಬಬೇಡ, ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮನಾಥಾ!' ಮಠದಲ್ಲಿದ್ದರೂ, ಭಸ್ಮ ರುದ್ರಾಕ್ಷಿಯ ಧರಿಸಿದರೂ ಅಮೂಲಾಗ್ರವಾಗಿ ಬದಲಾವಣೆ ಹೊಂದಿದ್ದಾರೆಂದು ತಿಳಿಯುವುದು ತಪ್ಪು.

ಇನ್ನೊಂದು ವಚನದಲ್ಲಿ ಹೇಳುತ್ತಾರೆ, ಕಾಗೆಯ ಗೂಡಿನಲ್ಲಿ ಹುಟ್ಟಿದ್ದರೂ ಕೋಗಿಲೆ ತನ್ನವರನು ಗುರುತಿಸಿ ಕೋಗಿಲೆಯ ಬಳಗ ಸೇರಿವುದಲ್ಲದೆ ಎಂದಿಗೂ ಕಾಗೆಗಳೊದಿಗೆ ಕೂಡದು ಅದರಂತೆ ಈ ಜಗತ್ತಿನಲ್ಲಿ ಹುಟ್ಟಿದ ನಿಜ ಶರಣ ಇತರ ಜಡ ಜಗತ್ತಿನ ಮನುಜರಿಗಿಂತ ಭಿನ್ನನಾಗಿದ್ದು ಶಿವಶರಣ ರೊಂದಾಗುವನೇ ವಿನಹ ಸಾಮಾನ್ಯರೊಂದಿಗಲ್ಲ.

ಜಗದ ಮಧ್ಯದಲಿ ಶರಣ ಜನಿಸಡೇನು
ಆ ಜಗದ ಸ್ವರೂಪನೆ? ಅಲ್ಲಲ್ಲ
ಅದೇನು ಕಾರಣವೆಂದೊಡೆ;
ಕೋಗಿಲೆಯ ತತ್ತಿಯನೊಡೆದು
ಕಾಗೆ ಮರಿಯ ಮಾಡಿ ಸಲಹಿದಡೇನು
ಅದು ತನ್ನ ಕೋಗಿಲೆಯ ಹಿಂಡ ಕೂಡುವುದಲ್ಲದೆ
ಮರಳಿ ಕಾಗೆಯ ಹಿಂಡ ಬೆರೆವುದೆ ಹೇಳಾ?...
(634)

ಹೀಗೆ ಕಲಬುರಗಿಯ ಶ್ರೀ ಷಣ್ಮುಖ ಶಿವಯೋಗಿಗಳು ಜನಸಾಮಾನ್ಯರಿಗೆ, ಮುಖ್ಯವಾಗಿ ರೈತಾಪಿಜನರಿಗೆ ಅವರಿಗರ್ಥವಾಗುವಂತೆ ಕೃಷಿ ಸನ್ನಿವೇಶ ಸಂದರ್ಭಗಳ ಉಪಮೆಗಳ ಬಳಕೆ ಮಾಡಿ ಶಿವಾನುಭವ ಜ್ಞಾನವನ್ನು/ಪಾರಮಾರ್ಥವನ್ನು ತಮ್ಮ ವಚನಗಳ ಮೂಲಕ ನೀಡಿದ್ದಾರೆ. ಈ ವಚನಗಳು ಸರಳವಾಗಿದ್ದರೂ ಆಳ ಜ್ಞಾನದಿಂದ ಕೂಡಿದ್ದು ಸದಾಕಾಲಕ್ಕೂ ಸ್ತುತ್ಯವಾದ ಸತ್ಯನುಡಿಗಳಾಗಿವೆ.

**ಆಧಾರ**: ಶ್ರೀ ಷಣ್ಮುಖ ಶಿವಯೋಗಿಗಳು ವಿರಚಿತ 'ಅಖಂಡೇಶ್ವರ ವಚನಗಳು'. ಪ್ರಕಾಶಕರು, ಶ್ರೀ ಮ. ನಿ. ಪ್ರ. ಶ್ರೀ ಶಾಂತಲಿಂಗ ಮಹಾಸ್ವಾಮಿಗಳು, ಸಂಸ್ಥಾನ ಮಠ, ಜೇವರಗಿ, ಕಲಬುರಗಿ ಜಿಲ್ಲೆ, ಕರ್ನಾಟಕ; 1–260.

.....18ನೇ ವರುಷದತ್ತ ಹೆಜ್ಜೆ

# ಸ್ತ್ರೀ ಜಾಗೃತಿ

ಕನ್ನಡ ಮಾಸಪತ್ರಿಕೆ

ಆಗಸ್ಟ್ - 2018

ಸಂಪುಟ : 18 ಸಂಚಿಕೆ : 12 ಬೆಲೆ: ರೂ.17.00

## ಶ್ರಾವಣ ಮಾಸದಲ್ಲಿ ಶಿವನ ಪೂಜೆ ಶ್ರೇಷ್ಠ



ತೆರೆದ-ಅಂಚೆ / Book-Post

Krishi Kayaka Kannada Quarterly,
July to September 2018
MAG(3)/NPP/100/2011-2012
RNI No. - KARKAN/2011/38704

ಗೆ,

ಸ್ಥಾಪನೆ: 1904 ನೋಂದಣಿ ಸಂಖ್ಯೆ : 96/76-77 ದಿನಾಂಕ: 5-7-1976

# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ. 17/4, 'ವೀರಶೈವ-ಲಿಂಗಾಯತ ಭವನ', ರಮಣಮಹರ್ಷಿ ರಸ್ತೆ, ಸದಾಶಿವನಗರ, ಬೆಂಗಳೂರು-560 080
Ph: 080-23602177, Tele Fax:080-23618400,
e-mail: info@veerashaivamahasabha.com, www.veerashaivamahasabha.org

## ಅಖಿಲ ಭಾರತ ವೀರಶೈವ ಮಹಾಸಭೆಯ ಪದಾಧಿಕಾರಿಗಳು

**ಅಧ್ಯಕ್ಷರು :**
ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು
ದಾವಣಗೆರೆ, ಮೊ-98440-97399

**ಹಿರಿಯ ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಘಟಕ :**
ಶ್ರೀ ಎನ್. ತಿಪ್ಪಣ್ಣ, ಮಾಜಿ ಸಭಾಪತಿಗಳು
ಬಳ್ಳಾರಿ, ಮೊ-98452-21373

**ಉಪಾಧ್ಯಕ್ಷರುಗಳು :**

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್
ಮಾಜಿ ಮಂತ್ರಿಗಳು,
ಸಂಕೇಶ್ವರ, ಬೆಳಗಾವಿ ಜಿಲ್ಲೆ, ಮೊ-94481-12378

ಡಾ. ಪ್ರಭಾಕರ ಕೋರೆ, ಸಂಸದರು
ಬೆಳಗಾವಿ, 98453-54747

ಶ್ರೀ ವೀರಣ್ಣ ಚರಂತಿಮಠ, ಶಾಸಕರು
ಬಾಗಲಕೋಟೆ, ಮೊ-98452-25757

ಶ್ರೀ ಎ.ಸಿ. ಜಯಣ್ಣ
ದಾವಣಗೆರೆ, ಮೊ-98444-97399

ಶ್ರೀ ಎ.ಎಸ್. ವೀರಣ್ಣ
ದಾವಣಗೆರೆ, ಮೊ-98457-41670

ಶ್ರೀ ಎಸ್.ಎಸ್. ಗಣೇಶ್
ದಾವಣಗೆರೆ, ಮೊ-98450-53538

ಶ್ರೀ ಎಂ.ಎನ್. ರಾಜಶೇಖರಪ್ಪ
ದಾವಣಗೆರೆ, ಮೊ. 94481-14684

ಶ್ರೀ ದೇವರಾಯ ನಾಡೇಪಲ್ಲಿ
ಗುಲ್ಬರ್ಗಾ, ಮೊ-94481-24503

ಶ್ರೀಮತಿ ಗುರಮ್ಮಾ ಸಿದ್ದಾರೆಡ್ಡಿ
ಬೀದರ್, ಮೊ. 98866-59849

ಶ್ರೀಮತಿ ಮಧುರಾ ಅಶೋಕಕುಮಾರ
ಬೆಂಗಳೂರು, ಮೊ-98452-73085

ಶ್ರೀ ಗುರುರಾಜ ಇ. ಹುಣಸಿಮರದ
ಧಾರವಾಡ, ಮೊ-94480-66863

ಶ್ರೀ ಬಿ.ಎಸ್. ಸಚ್ಚಿದಾನಂದ ಮೂರ್ತಿ
ಬೆಂಗಳೂರು, ಮೊ-94487-68576

ಶ್ರೀ ವೆಂಕಟರಡ್ಡಿ ಮುದ್ನಾಳ್, ಶಾಸಕರು
ಯಾದಗಿರಿ, ಮೊ-98807-17666

**ಮಹಾಪ್ರಧಾನ ಕಾರ್ಯದರ್ಶಿ :**

ಶ್ರೀ ಈಶ್ವರ ಖಂಡ್ರೆ, ಶಾಸಕರು
ಭಾಲ್ಕಿ, ಮೊ-94481-18458

**ಕಾರ್ಯದರ್ಶಿಗಳು :**

ಶ್ರೀಮತಿ ಸುವರ್ಣ ಚೆನ್ನಣ್ಣ
ಬೆಂಗಳೂರು, ಮೊ-98452-15830

ಶ್ರೀ ಎನ್.ಎಸ್. ಬಸವರಾಜು, S.P. (Retd.)
ಮೈಸೂರು, ಮೊ-94498-57330

ಶ್ರೀ ಜಿ. ಗುರುಬಸಪ್ಪ
ಬೆಂಗಳೂರು, ಮೊ-98457-37662

ಶ್ರೀ ಕಲ್ಯಾಣರಾವ್ ಜಿ. ಮುಚಳಾಂಬೆ
ಬೆಳಗಾವಿ, ಮೊ-94481-40533

ಶ್ರೀ ಹೆಚ್.ಎಂ. ರೇಣುಕ ಪ್ರಸನ್ನ
ಬೆಂಗಳೂರು, ಮೊ-98440-43791

**ಕೋಶಾಧ್ಯಕ್ಷರು :**

ಶ್ರೀ ಕೆ.ಎನ್. ಜಯಲಿಂಗಪ್ಪ
ಬೆಂಗಳೂರು, ಮೊ-98454-31535

## ಕರ್ನಾಟಕ ರಾಜ್ಯ ಘಟಕದ ಪದಾಧಿಕಾರಿಗಳು

**ಉಪಾಧ್ಯಕ್ಷರುಗಳು :**

ಶ್ರೀ ಕೆ. ಮಹದೇವಪ್ಪ, ವಕೀಲರು
ರಾಯಚೂರು, ಮೊ-98455-46640

ಶ್ರೀ ಕೆ.ಎಸ್. ನಾಗರಾಜಪ್ಪ
ಚಾಮರಾಜನಗರ,ಮೊ-94480-79894

ಶ್ರೀ ವೈ.ಎಸ್. ಪಾಟೀಲ್, ಕೆ.ಎ.ಎಸ್.(ನಿ.)
ಬೆಳಗಾವಿ, ಮೊ-94483-83818

ಡಾ. ಗಂಗಾಂಬಿಕಾ ಪಾಟೀಲ್
ಬೀದರ್, ಮೊ-94484-10770

**ಪ್ರಧಾನ ಕಾರ್ಯದರ್ಶಿ :**

ಶ್ರೀ ಬಿ.ಎಸ್. ವಾಗೀಶ್ ಪ್ರಸಾದ್
ಬೆಂಗಳೂರು, ಮೊ-98450-50021

**ಕಾರ್ಯದರ್ಶಿಗಳು :**

ಶ್ರೀ ಗಂಗಾಧರ ಎಸ್. ನರೇಗಲ್, ವಕೀಲರು
ಗುಳೇದಗುಡ್ಡ, ಜಿಲ್ಲಾ ಬಾಗಲಕೋಟೆ
ಮೊ-94805-01562

ಶ್ರೀ ನಟರಾಜ್ ಸಾಗರನಹಳ್ಳಿ
ಸಾಗರನಹಳ್ಳಿ, ಜಿಲ್ಲಾ ತುಮಕೂರು
ಮೊ-98454-63631




Printed at : Sneha Printers, # 16, 1st 'B' Cross, Sri Raghavendra Mutt Road, Papareddypalya, 11th Block, Nagarbhavi II Stage, Bengaluru-560 072. Mob : 99860 50012
Published by : All India Veerashaiva Mahasabha, Bengaluru. Editor : Padma Bhushan Dr. M. Mahadeveppa